**ಲೇಖಕರ ಮಾತು :-**

"ಮಹಿಮಾ ಪ್ರಾರ್ಥನಾ ಮಂದಿರ" ದಿಂದ "ಪ್ರಾರ್ಥನೆಯ ನಿಧಿಯು ನಿನ್ನದೇ" ಎನ್ನುವ ಈ 8ನೆಯ ಪುಸ್ತಕವನ್ನು ಬಿಡುಗಡೆಮಾಡಲಾಗಿದೆ. ಈ ಪುಸ್ತಕದಿಂದ ನೀವು ಉತ್ತಮವಾದ ಪ್ರಾರ್ಥನೆಯನ್ನು ಕಲಿಯಲು ದೇವರೊಟ್ಟಿಗೆ ಮಾತನಾಡಲು ನಿಮಗೆ ಸಹಾಯವಾಗುತ್ತದೆ ಎಂದು ನಾನು ಮನಃಪೂರ್ವಕವಾಗಿ ನಂಬುತ್ತೇನೆ. "ಕರ್ತನಾದ ಯೇಸುವಿನ ಕೃಪೆಯು ಎಲ್ಲರೊಂದಿಗೆ ಇರಲಿ. ಆಮೆನ್." (ಪ್ರಕಟಣೆ 22:21)

# ಪ್ರಾರ್ಥನೆಯು ನಿಧಿಯು ನಿನ್ನದೇ



Edited by Pastor.Sis.A.Parimala

ನಿಮ್ಮ ಪ್ರಾರ್ಥನಾ ವಿಜ್ಞಾಪನೆಗಳಿಗಾಗಿ
ನಮ್ಮನ್ನು ಸಂಪರ್ಕಿಸಿರಿ.
ಫೋನ್ ನಂಬರ್
9900241593 / 9880245222

ದೇವರ ನಾಮಕ್ಕೆ ಸ್ತೋತ್ರ.

"ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ" (ಪ್ರಕಟಣೆ 22:17)




# ಪ್ರಾರ್ಥನೆಯು ನಿಧಿಯು ನಿನ್ನದೇ





ಲೇಖಕರು:
ಪಾಸ್ಟರ್. ಸಹೋದರಿ. ಪಿ.ತೇಜಸ್ಸ್

ದೇವರ ನಾಮಕ್ಕೆ ಸ್ತೋತ್ರ

# ಪ್ರಾರ್ಥನೆಯ ನಿಧಿಯು ನಿನ್ನದೇ

ಲೇಖಕರು:
ಪಾಸ್ಟರ್. ಸಹೋದರಿ. ಪಿ.ತೇಜಸ್ಸ್

ದೇವರ ನಾಮಕ್ಕೆ ಸ್ತೋತ್ರ

# ಪ್ರಾರ್ಥನೆಯ ನಿಧಿಯು ನಿನ್ನದೇ

ಪುಸ್ತಕ-8

ಮೂರನೆಯ ಮುದ್ರಿಕೆ :2018

ಪ್ರತಿಗಳು : 3000

ಪುಟಗಳು : 72

ಮುದ್ರಕರು : mahaprintup@gmail.com

ಓದಿರುವಿರಾ :

1. ನಂಬಿಕೆಯ ರಹಸ್ಯ
2. ಅದ್ಭುತ ಸಾಕ್ಷಿ
3. ಪ್ರೀತಿಯ ಯಶಸ್ಸು
4. ಕಣ್ಣೀರಿನ ಕೂಗು
5. ನಾನು ನನ್ನ ಸರ್ವಸ್ವ
6. ಯಾವುದು ಬೇಕು?
7. ಜ್ಞಾನ ಸ್ತೋತ್ರದ ಯಜ್ಞಗಳು

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
ಫೋನ್ ನಂಬರ್: 9900241593 / 9880245222



## ಅರ್ಪಣೆ

ಭೂಮ್ಯಾಕಾಶಗಳು ಅಳಿದುಹೋಗುವವು, ಆದರೆ ನನ್ನ
ಮಾತುಗಳು ಅಳಿದು ಹೋಗುವದೇ ಇಲ್ಲ
ಮತ್ತಾಯ 24:35

ವಾಕ್ಯಾಧಾರದ ಮೇಲೆ ಪ್ರಾರ್ಥನೆಯನ್ನು
ಮಾಡಲು ಅನುದಿನವೂ ಕಲಿಸಿಕೊಡುತ್ತಿರುವ
ನಮ್ಮ ಸೃಷ್ಟಿಕರ್ತನಾದ ಯೇಸುಕ್ರಿಸ್ತನಿಗೇ ಈ ಪುಸ್ತಕವನ್ನು
ಅರ್ಪಿಸುತ್ತಾ ಪೂರ್ಣ ಹೃದಯದಿಂದ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ.

ನನ್ನ ಮಕ್ಕಳೇ ಉದಾಸೀನರಾಗಿರಬೇಡಿರಿ; ಯೆಹೋವನು
ತನ್ನನ್ನು ಆರಾಧಿಸುವದಕ್ಕೂ ಧೂಪ ಹಾಕುವದಕ್ಕೂ ನಿಮ್ಮನ್ನು
ತನ್ನ ಸಾನ್ನಿಧ್ಯ ಸೇವಕರನ್ನಾಗಿ ಆರಿಸಿಕೊಂಡನಲ್ಲಾ
2ಪೂರ್ವ 29:11

# ಪರಿಚಯ

- ಪ್ರೀತಿಸ್ವರೂಪನಾದ ನನ್ನ ಕರ್ತನಿಗೆ ಮಹಿಮೆಯುಂಟಾಗಲಿ. **"ಪ್ರಾರ್ಥನೆಯ ನಿಧಿಯು ನಿನ್ನದೇ"** ಎಂಬ ಈ ಪುಸ್ತಕದ ಮೂಲಕ ಕರ್ತನ ನಾಮವನ್ನು ಮಹಿಮೆಪಡಿಸಲು ಕೃಪೆ ಮಾಡಿದ ನನ್ನ **ಯೇಸುರಾಜನಿಗೆ** ಸ್ತೋತ್ರವಾಗಲಿ.

- ಪ್ರೀತಿಯ ದೇವರ ಮಗುವೇ ಈ **"ಪ್ರಾರ್ಥನೆಯ ನಿಧಿಯು ನಿನ್ನದೇ"** ಆಗಬೇಕಾ? ಹಾಗಾದರೆ **ಯೇಸುವಲ್ಲಿ** ಯಾರು ಭಯ-ಭಕ್ತಿಯುಳ್ಳವರಾಗಿ ಆತನ ಧರ್ಮಶಾಸ್ತ್ರವನ್ನು ಹಗಲಿರುಳು ಧ್ಯಾನಿಸುತ್ತಿರುವರೋ ಅಂತವರಿಗೇ ಈ 'ನಿಧಿ' ಸ್ವಂತವಾಗುತ್ತದೆ. ಈ ನಿಧಿಯನ್ನು ನೀವು ಯಾವಾಗಲೂ ಹಿಡಿದುಕೊಂಡು ಮನಃಪೂರ್ವಕವಾಗಿ ನಂಬಿಕೆಯಿಂದ ಕರ್ತನೊಟ್ಟಿಗೆ ಮಾತನಾಡಿರಿ. ಏಕೆಂದರೆ **"ಬೇಡಿಕೊಳ್ಳಿರಿ, ನಿಮಗೆ ದೊರೆಯುವುದು; ಹುಡುಕಿರಿ, ನಿಮಗೆ ಸಿಕ್ಕುವುದು; ತಟ್ಟಿರಿ ನಿಮಗೆ ತೆರೆಯುವುದು; ಯಾಕೆಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು, ಹುಡುಕುವವನಿಗೆ ಸಿಕ್ಕುವುದು, ತಟ್ಟುವವನಿಗೆ ತೆರೆಯುವುದು"** (ಮತ್ತಾಯ 7:7,8)

- ಹೇಗೆ ಪ್ರಾರ್ಥಿಸಬೇಕು? ಏನೆಂದು ಪ್ರಾರ್ಥಿಸಬೇಕು? ಯಾವುದಕ್ಕಾಗಿ ಪ್ರಾರ್ಥಿಸಬೇಕು? ಎಂದು ತಿಳಿದುಕೊಳ್ಳಲು ತವಕಿಸುತ್ತಿರುವಂತ ಪ್ರೀತಿಯ ದೇವರ ಮಗುವೇ ನಿನಗೋಸ್ಕರವಾಗಿದೆ ಈ "ಪ್ರಾರ್ಥನೆಯ ನಿಧಿಯು ನಿನ್ನದೇ" ಎನ್ನುವ ಅದ್ಭುತಕರವಾದ ಪುಸ್ತಕ. "ಆತ್ಮೀಕವಾಗಿ ನೋಡುವಾಗ ನಾನು ಎಲ್ಲಾ ಮಾಡುತ್ತೇನೆ ಬೈಬಲ್ ಓದುತ್ತೇನೆ, ಆರಾಧನೆ ಮಾಡುತ್ತೇನೆ. ಅನ್ಯಭಾಷೆಯಲ್ಲೂ ಪ್ರಾರ್ಥಿಸುತ್ತೇನೆ. ಆದರೆ ಹೇಗೆ ಪ್ರಾರ್ಥನೆ ಮಾಡಬೇಕು? ದೇವರ ಬಳಿಯಲ್ಲಿ ಹೇಗೆ ಮಾತನಾಡಬೇಕು ಎಂದು ಸರಿಯಾಗಿ ಗೊತ್ತಾಗುತ್ತಿಲ್ಲಾ" ಎಂದು ತವಕಿಸುತ್ತಿರುವ ಪ್ರಿಯ ದೇವರ ಮಗುವೇ ನಿನಗೆ ಈಗ ಹೊಸ ಅವಕಾಶವನ್ನು ಕರ್ತನು ಈ ಪುಸ್ತಕದ ಮುಖಾಂತರ ಒದಗಿಸಿಕೊಟ್ಟಿದ್ದಾನೆ. ಈ ಪುಸ್ತಕವನ್ನು ನೀನು ಓದಿ ಮುಗಿಸುವುದರೊಳಗಾಗಿ ನೇರವಾಗಿ ಕರ್ತನ ಬಳಿಯಲ್ಲಿ ಯಾವ-ಯಾವ ವಿಚಾರದಲ್ಲಿ ಮಾತನಾಡಬೇಕೆಂದು ನೀನು ಪೂರ್ಣವಾಗಿ ತಿಳಿದುಕೊಳ್ಳುವಿ.

-

- ನೀನು ಸರ್ವಶಕ್ತನಿಗೆ ಇನ್ನೂ ಹತ್ತಿರವಾಗಲು ಮತ್ತು ಆತ್ಮೀಕವಾದ ಪ್ರಾರ್ಥನೆಯನ್ನು ಕಲಿಯಲು ಈ ಪುಸ್ತಕವು ನಿನಗೆ ಅತ್ಯುತ್ತಮವಾಗಿ ಸಹಾಯಮಾಡುತ್ತದೆ. ನೀನು ವಾಕ್ಯಗಳನ್ನು ಹಿಡುದಿಟ್ಟು ಇನ್ನೂ ಹೆಚ್ಚಾಗಿ ಪ್ರಾರ್ಥನೆ ಮಾಡುವುದನ್ನು ಕಲಿಯಬೇಕೆಂದೇ ಈ ಪುಸ್ತಕವು ನಿನ್ನ ಕೈ ಸೇರಿದೆ. "ಪ್ರಾರ್ಥನೆಯನ್ನು ತಪ್ಪದೆ ಮಾಡುವವರಾಗಿರಿ" (ಕೊಲೊಸ್ಸೆ 4:2) ಮತ್ತೊಬ್ಬರು ಇಷ್ಟ ಪಡುವರೀತಿಯಲ್ಲಿ ದೇವರಿಗೆ ಉದ್ದವಾದ ಪ್ರಾರ್ಥನೆಗಳನ್ನು ಮಾಡುವವರಾಗಿ ದಂಡನೆಗೆ ಒಳಗಾಗಬೇಡಿರಿ (ಮಾರ್ಕ 12:40) ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡು ಅಂತರಂಗದಲ್ಲಿರುವ ತಂದೆಯ ಬಳಿಯಲ್ಲಿ ಪ್ರಾರ್ಥಿಸಿರಿ (ಮತ್ತಾಯ6:6) ನೀವು ತಂದೆಯ ಬಳಿಯಲ್ಲಿಯೂ ಯೇಸುವಿನ ಬಳಿಯಲ್ಲಿಯೂ ಪವಿತ್ರಾತ್ಮನ ಬಳಿಯಲ್ಲಿಯೂ ಮನಃಪೂರ್ವಕವಾಗಿ ಮಾತನಾಡಬೇಕೆಂದು ನಮ್ಮ ತ್ರಿಐಕ್ಯ ದೇವರು ಇಷ್ಟ ಪಡುತ್ತಾರೆ. 'ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡಿರಿ' (ಲೂಕ 18:1)

- ಪ್ರಾರ್ಥನೆಯಲ್ಲಿ ಎರಡು ವಿಧವಿದೆ ಮೊದಲನೆಯದು ಲೌಕೀಕವಾದ ಪ್ರಾರ್ಥನೆ ಎರಡನೆಯದು ಆತ್ಮೀಕವಾದ ಪ್ರಾರ್ಥನೆ. ಎಲ್ಲರೂ ಸರ್ವೇಸಾಮಾನ್ಯವಾಗಿ ಲೌಕೀಕವಾದ ಪ್ರಾರ್ಥನೆಯನ್ನು ಬಹಳವಾಗಿ ಮಾಡುತ್ತಿರುತ್ತಾರೆ. ಆದರೆ ಕರ್ತನನ್ನು ಬಹಳವಾಗಿ ಪ್ರೀತಿಸುವವರು ಆತ್ಮೀಕವಾದ ಪ್ರಾರ್ಥನೆಯನ್ನು ಕಲಿಯಲು ಪ್ರಯಾಸಪಡುತ್ತಾರೆ ಮತ್ತು ಆತ್ಮೀಕವಾಗಿಯೇ ಮಾತನಾಡುತ್ತಿರುತ್ತಾರೆ. ನಿನಗೆ ಆತ್ಮೀಕವಾಗಿ ಇನ್ನೂ ಹೆಚ್ಚು ಬೆಳೆಯಲು ಸತ್ಯವಾಗಿ ಆಸಕ್ತಿ ಇರುವುದಾದರೆ ಈ ಪುಸ್ತಕವನ್ನು ನೀನು ಕಳೆದುಕೊಳ್ಳಲು ಇಷ್ಟಪಡುವುದೇ ಇಲ್ಲ. ಯಾವಾಗಲೂ ನಿನ್ನ ಉಸಿರಿರುವವರೆಗೂ ನಿನ್ನ ಬಳಿಯಲ್ಲಿಯೇ ಇಟ್ಟುಕೊಳ್ಳಲು ಇಷ್ಟ ಪಡುವ ಹಾಗೆ ಈ ಪುಸ್ತಕವು ನಿನ್ನನ್ನು ನಡೆಸುತ್ತದೆ ಹಾಗೂ ಈ ಪುಸ್ತಕವು ನಿನಗೆ ಅವಶ್ಯವಿದೆ ಎಂದು ಓದುತ್ತಾ-ಓದುತ್ತಾ ನಿನಗೆ ಗೊತ್ತಾಗುತ್ತದೆ.

- ಲೌಕೀಕವಾದ ಪ್ರಾರ್ಥನೆಯಲ್ಲಿ "ಕಾರು-ಬಂಗಲೆ-ಒಡವೆ-ಬಟ್ಟೆ- ಒಳ್ಳೇ ಊಟ-ಕೆಲಸ, ಹೀಗೆ ಇಹಲೋಕಕ್ಕೆ ಸಂಬಂಧಪಟ್ಟವುಗಳನ್ನು ಕೇಳಿಕೊಳ್ಳುತ್ತಿರುತ್ತಾರೆ. ಲೌಕೀಕವಾದ ಸಕಲ ಆಶೀರ್ವಾದವನ್ನು ಪಡೆಯಲು ಅಥವಾ ಮನಸ್ಸು ಕೊಟ್ಟು ಆಸಕ್ತಿಯಿಂದ ಪ್ರಾರ್ಥನೆ ಮಾಡಲು ಯಾರೂ ಕಲಿಸಿಕೊಡುವ ಅವಶ್ಯಕತೆ ಏನೂ ಇರುವುದಿಲ್ಲ ಆದರೆ ಆತ್ಮೀಕವಾದ ಪ್ರಾರ್ಥನೆಗಳಿಗೆ ಯಾರಾದರೂ ಒಬ್ಬರು ಕಲಿಸಿಕೊಡಲೇ ಬೇಕು ಮತ್ತು ಆತ್ಮೀಕವಾದ



ಪ್ರಾರ್ಥನೆಯು ಸರ್ವೇಸಾಮಾನ್ಯವಾದ ಪ್ರಾರ್ಥನೆಯಂತೂ ಅಲ್ಲವೇ ಅಲ್ಲ. ನೀನು ದಯವಿಟ್ಟು ಆಸಕ್ತಿಯುಳ್ಳವಳಾ/ನಾ/ಗಿ ಈ ಎಲ್ಲಾ ಆತ್ಮೀಕ ಪ್ರಾರ್ಥನೆಯನ್ನು ಕಲಿತುಕೊಳ್ಳಬೇಕೆಂದು ನಾನು ಅಪೇಕ್ಷಿಸುತ್ತೇನೆ.

- ಫೋನ್ ಕಾಲ್ಸ್‌ಗಳಲ್ಲಿಯೂ, ಸ್ನೇಹಿತರೊಟ್ಟಿಗೂ, ಬಂಧು-ಮಿತ್ರರೊಟ್ಟಿಗೂ ಕುಟುಂಬದವರೊಟ್ಟಿಗೂ, ಎಸ್‌ಎಂಎಸ್ ಮುಖಾಂತರವಾಗಿಯೂ, ಚಾಟಿಂಗ್ ಮುಖಾಂತರವಾಗಿಯೂ, ವಾಟ್ಸ್‌ಆಪ್, ವೈಬರ್, ಫೇಸುಬುಕ್, ಹೈಕ್,ಈಮೇಲ್, ಇನ್ನೂ ಅನೇಕಾನೇಕ ಆಪ್ಸ್‌ಗಳ ಮುಖಾಂತರವಾಗಿ ಅನೇಕರೊಟ್ಟಿಗೆ ಮಾತನಾಡಲು ಸಮಯಕೊಡುತ್ತಿರುವಂತಹ ಪ್ರೀತಿಯ ದೇವರ ಮಗುವೇ, ದೇವರೊಟ್ಟಿಗೆ ಮಾತನಾಡಲು ಕಲಿತುಕೊಳ್ಳಲು ಸಮಯ ಕೊಡುತ್ತಿರುವೆಯಾ? ಯಾರ ಬಳಿಯಲ್ಲಿ ಮಾತನಾಡಿದರೂ ನಿನಗೆ ಸಮಾಧಾನ ಸಿಗುವುದಕ್ಕೆ ಸಾಧ್ಯವೇ ಇಲ್ಲ. ಇವೆಲ್ಲಾ ನಿನಗೆ ತಾತ್ಕಾಲಿಕವಾಗಿ ಸಂತೋಷವನ್ನು ತೃಪ್ತಿಯನ್ನು ಉಂಟು ಮಾಡುವಂತಹ ಮಾರ್ಗಗಳಾಗಿದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡು ದೇವರ ಬಳಿಯಲ್ಲಿ ನಿಮ್ಮ ಅತ್ಯಮೂಲ್ಯವಾದ ಸಮಯವನ್ನು ಕಳೆಯುವುದಕ್ಕೆ ಪ್ರಯಾಸಪಡುವುದಾದರೆ ನಿನಗೆ ಕೊಡಲ್ಪಟ್ಟ ಸಮಯವು ಸಾರ್ಥಕವಾಗುತ್ತದೆ. "ಸಮಯವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿ ಹೊರಗಿನವರ ಮುಂದೆ ಜ್ಞಾನವುಳ್ಳವರಾಗಿ ನಡೆದುಕೊಳ್ಳಿರಿ" (ಕೊಲೊಸ್ಸೆ 4:5)

- ನಿನಗೆ ಇಷ್ಟು ದಿನಗಳು ಸಿಕ್ಕದೇ ಇರುವ ಸಮಾಧಾನವನ್ನು, ನಿನ್ನ ಹೃದಯವು ದೇವರೊಟ್ಟಿಗೆ, ಈ ಪುಸ್ತಕದ ಮುಖಾಂತರ ಮಾತನಾಡುವಾಗ ಸಿಕ್ಕುವುದನ್ನು ಗ್ರಹಿಸಿಕೊಳ್ಳಬೇಕೆಂದು ನಾನು ಪ್ರಬೋಧಿಸುತ್ತೇನೆ.

- ಈ ಪುಸ್ತಕದ ಮುಖಾಂತರ ಕರ್ತನ ಬಳಿಯಲ್ಲಿ ನೀನು ಭಯ-ಭಕ್ತಿಯಿಂದ ಮಾತನಾಡುವಾಗ, ಕರ್ತನು ನಿನ್ನನ್ನು ಪರಲೋಕದಿಂದ ಆಶೀರ್ವದಿಸಲಿ ಎಂದು ಹಾರೈಸುತ್ತೇನೆ. ಈ ಪುಸ್ತಕದ ಸಹಾಯದಿಂದ ನೀನು ಮಾಡುವಂತಹ ಪ್ರಾರ್ಥನೆಯನ್ನು ಕರ್ತನು ಕೇಳಿ ನಿನಗೆ ಉತ್ತರವನ್ನು ಖಂಡಿತವಾಗಿ ದಯಪಾಲಿಸುತ್ತಾನೆ.

- ಪರಿಶುದ್ಧಾತ್ಮನ ಆಲೋಚನೆ ಪ್ರಕಾರ ಈ 'ನಿಧಿ' ನಿನ್ನದಾಗಬೇಕು ಎಂದು ಈ ಪುಸ್ತಕವನ್ನು ನಿನ್ನ ಕೈಗೆ ತಲುಪಿಸಿದ್ದೇನೆ. ಆದ್ದರಿಂದ ಓದುವವರೆಲ್ಲರೂ

ಆಶೀರ್ವಾದವನ್ನು ಹೊಂದಿಕೊಂಡು ಮತ್ತೊಬ್ಬರನ್ನು ಬಲಪಡಿಸಿ ಅವರಲ್ಲೂ ಈ 'ನಿಧಿ' ಉತ್ತಮವಾದ ಕಾರ್ಯ ನಡೆಸಲು ಈ 'ನಿಧಿ'ಯನ್ನು ಪರಿಚಯ ಪಡಿಸಿರಿ ಎಂದು ಸಲಹೆ ಕೊಡುತ್ತಿದ್ದೇನೆ. ನೀನು ನಿಜವಾಗಿಯೂ ಪರಲೋಕರಾಜ್ಯಕ್ಕೆ ಬಾಧ್ಯಳಾ/ನಾ/ಗಬೇಕು ಎಂದು ನಿನ್ನಲ್ಲಿ ಭಾವನೆ ಇರುವುದಾದರೆ ಖಂಡಿತವಾಗಿಯೂ ಓದುವ ನಿನಗೆ ಆತ್ಮೀಕ ಜೀವನ ಬದಲಾಗಿ ಈ 'ನಿಧಿ'ಯು ನಿಶ್ಚಯವಾಗಿ ನಿನ್ನಲ್ಲಿ ಕಾರ್ಯ ನಡೆಸುತ್ತದೆ. ಕರ್ತನು ನಿನ್ನೊಂದಿಗೆ ಇದ್ದು ನಿನಗೆ ಹೆಚ್ಚಿನ ರೀತಿಯಲ್ಲಿ ಪ್ರಾರ್ಥಿಸುವ ಜ್ಞಾನವನ್ನು ಕೊಟ್ಟು ನಡೆಸಲಿ ಎಂದು ಕರ್ತನಲ್ಲಿ ನಮ್ರತೆಯಿಂದ ಕೇಳಿಕೊಳ್ಳುತ್ತಿದ್ದೇನೆ.

- ಕರ್ತನು ನಿನ್ನನ್ನು ಚಿಯೋನಿನಿಂದ ಆಶೀರ್ವದಿಸಲಿ.

ಕರ್ತನ ಸೇವಕಿ
ಪಾಸ್ಟರ್. ಸಹೋದರಿ. ಪಿ.ತೇಜಸ್ಸ್



# ಪೀಠಿಕೆ


1. ಪ್ರಾರ್ಥನೆ
2. ಮುಂಜಾನೆಯಲ್ಲಿ
3. ಪ್ರತಿದಿನ ಹೊರಗೆ ಹೋಗುವಾಗ
4. ಕೃತಜ್ಞತೆ ಯೇಸುವೇ
5. ರಾತ್ರಿ ಮಲಗುವಾಗ
6. ಪಾಪಗಳಿಂದ ಸಂಪೂರ್ಣ ಬಿಡುಗಡೆಗಾಗಿ
7. ನಾಲಿಗೆ
8. ಸ್ವಸ್ಥತೆ
9. ಜ್ಞಾನಕ್ಕಾಗಿ
10. ನೀತಿವಂತರು
11. ನಿತ್ಯಜೀವ
12. ಕರ್ತನ ಬರೋಣಕ್ಕೆ ಸಿದ್ಧತೆ
13. ಕರ್ತನ ಕುರಿಮರಿ
14. ಯೇಸುವೇ ನಿನ್ನ ನೋಡುವ ಹಂಬಲ
15. ಹಣದ ವಿಚಾರಕ್ಕಾಗಿ

# 1. ಪ್ರಾರ್ಥನೆ

ಕರ್ತನೇ ಸ್ತೋತ್ರ--ಅಪ್ಪಾ ತಂದೆಯೇ ಸ್ತೋತ್ರ--ಪ್ರೀತಿಯ ಯೇಸು ಕ್ರಿಸ್ತನೇ ಸ್ತೋತ್ರ--ಪರಿಶುದ್ಧಾತ್ಮನೇ ಸ್ತೋತ್ರ--ನನ್ನನ್ನು ರೂಪಿಸಿದ ತಂದೆಯೇ ಸ್ತೋತ್ರ--ನನ್ನನ್ನು ಉಂಟು ಮಾಡಿದ ತಂದೆಯೇ ಸ್ತೋತ್ರ--ನನ್ನ ದೇವರೇ ನಿನಗೆ ಸ್ತೋತ್ರ--ಅಬ್ರಹಾಮನ ದೇವರೇ ಸ್ತೋತ್ರ--ಇಸಾಕನ ದೇವರೇ ಸ್ತೋತ್ರ--ಯಾಕೋಬನ ದೇವರೇ ಸ್ತೋತ್ರ--ಎಲ್ಲವನ್ನು ಉಂಟು ಮಾಡಿದಾತನೇ ಸ್ತೋತ್ರ--ಸರ್ವಶಕ್ತನಾದ ದೇವರೇ ಸ್ತೋತ್ರ--ಒಬ್ಬನೇ ದೇವರೇ ಸ್ತೋತ್ರ--ಭೂರಾಜರುಗಳನ್ನು ಆಳುವ ದೇವರೇ ಸ್ತೋತ್ರ-ನನ್ನನ್ನು ನೋಡುವ ದೇವರೇ ಸ್ತೋತ್ರ--ನನ್ನನ್ನು ಕಾಯುವ ದೇವರೇ ಸ್ತೋತ್ರ--ನನ್ನನ್ನು ಪ್ರೀತಿಸುತ್ತಿರುವ ದೇವರೇ ಸ್ತೋತ್ರ--ನನ್ನನ್ನು ಎಲ್ಲಾ ಕೇಡಿನಿಂದ ತಪ್ಪಿಸಿದಾತನೇ ನಿನಗೆ ಸ್ತೋತ್ರ--ನನ್ನ ಎಲ್ಲಾ ಕಾರ್ಯಗಳನ್ನು ಸಫಲ ಪಡಿಸುವಾತನೇ ಸ್ತೋತ್ರ--ಅಪ್ಪಾ ನಿನಗೆ ಸ್ತೋತ್ರ -ನನ್ನನ್ನು ರೂಪಿಸಿದ ತಂದೆಯೇ ನಿನಗೆ ಸ್ತೋತ್ರ-ಸ್ತುತಿಗೂ ಸ್ತೋತ್ರಕ್ಕೂ ಘನಕ್ಕೂ ಮಹಿಮೆಗೂ ಪಾತ್ರನಾದವನೇ ನಿನಗೆ ಸ್ತೋತ್ರ ತಂದೇ.

ಪರಲೋಕವನ್ನೂ ಭೂಲೋಕವನ್ನೂ ಉಂಟುಮಾಡಿದ ನಮ್ಮ ಸರ್ವಶಕ್ತನಾದ ದೇವರೇ ನಿನ್ನ ಅತೀ ಪರಿಶುದ್ಧವಾದ ನಾಮಕ್ಕೆ ಸ್ತೋತ್ರವಾಗಲಿ.

“ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ. ನಮ್ಮ ಅನುದಿನದ ಆಹಾರವನ್ನು ಈ ಹೊತ್ತು ದಯಪಾಲಿಸು. ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು. ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸು.” ಆಮೆನ್ (ಮತ್ತಾಯ 6:10-13)

“ನಾನು ನಿನ್ನನ್ನು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುತ್ತೇನೋ ಅದನ್ನೆಲ್ಲಾ ಹೊಂದಿಕೊಳ್ಳುವಂತೆ”(ಮತ್ತಾಯ 21:22)

(ಮಾರ್ಕ್ 11:24) ಸಹಾಯುಮಾಡಬೇಕೆಂದು ನಂಬಿಕೆಯಿಂದಲೇ ಬೇಡಿಕೊಳ್ಳುತ್ತಾ ಇದ್ದೇನೆ. ಯೇಸುವೇ ನಾನು ಪ್ರಾರ್ಥನೆ ಮಾಡುವಾಗ ನಿನ್ನ ಮುಖವನ್ನೇ ನೋಡಿಕೊಂಡು ಪ್ರಾರ್ಥಿಸಲು ಏಕಾಗ್ರತೆಯನ್ನು ಅನುಗ್ರಹಿಸು, ನನ್ನ ಮುಖ ಪ್ರಕಾಶಹೊಂದುವಂತೆಯೂ ಲಜ್ಜೆಯಿಂದ ಕೆಡದಂತೆಯೂ (ಕೀರ್ತನೆ 34:5) ಒರಟುಮೋರೆಯು ಮಾರ್ಪಡುವಂತೆಯೂ (ಪ್ರಸಂಗಿ 8:1) ನಿನ್ನ ದಾಸಿಯ/ಸನ ಮೇಲೆ ನಿನ್ನ ಮುಖ ಪ್ರಸನ್ನತೆಯನ್ನೂ (ಕೀರ್ತನೆ 119:135) ಮೋಶೆಯ ಮುಖವು ಪ್ರಕಾಶ ಹೊಂದಿದ (ವಿಮೋ 34:35) ಹಾಗೆ ನನ್ನನ್ನೂ ನಿನ್ನ ಪ್ರಸನ್ನತೆಯಿಂದ ತುಂಬಿಸು. “ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ”(ಮತ್ತಾಯ 26:39)

ಯೇಸುವೇ ನಾನು ಪ್ರಾರ್ಥನೆ ಮಾಡುವಾಗಲೆಲ್ಲಾ ಭಯಭಕ್ತಿಯಿಂದ ಪ್ರಾರ್ಥಿಸುವಂತೆ ನನಗೆ ಸಹಾಯಮಾಡು. (ಯೋಹಾನ 9:31) 'ಆಮೆನ್ ಎಂಬಾತನೇ' (ಪ್ರಕಟಣೆ 3:14) ನನ್ನ ಎಲ್ಲಾ ಉತ್ತಮವಾದ ಪ್ರಾರ್ಥನೆಗೆ ನನ್ನೊಟ್ಟಿಗೆ ಆಮೆನ್ ಎಂದು ಹೇಳಬೇಕಾಗಿ ವಿಜ್ಞಾಪಿಸುತ್ತಿದ್ದೇನೆ. ಕರ್ತನೇ ನಾನು ಯಾವ ಕೆಲಸ ತೆಗೆದುಕೊಂಡರೂ ಅದನ್ನು ಪೂರ್ತಿಮಾಡಲು ಸಹಾಯುಮಾಡು “ಆದಿಗಿಂತ ಅಂತ್ಯವು ಲೇಸು” (ಪ್ರಸಂಗಿ 7:8) ಶುರುಮಾಡುವುದು ಸುಲಭ ಪೂರ್ತಿಗೊಳಿಸುವುದು ಕಷ್ಟ. ಭೂಮಿಯಲ್ಲಿ ನನಗೆ ಕೊಟ್ಟ ಎಲ್ಲಾ ಕೆಲಸಗಳನ್ನು ಪೂರ್ತಿಗೊಳಿಸಲು ಸಹಾಯಮಾಡಬೇಕೆಂದು ಬೇಡಿಕೊಳ್ಳುತ್ತಿದ್ದೇನೆ.

“ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಲು” (ಮತ್ತಾಯ 26:41) ನನಗೆ ಮನಸ್ಸು ಸಿದ್ಧವಾಗಿದೆ ಸರಿ ಆದರೆ ದೇಹಕ್ಕೆ ಬಲ ಸಾಲದು, ಕರ್ತನೇ ಬಲವನ್ನು ಅನುಗ್ರಹಿಸು. ಸಕಲವನ್ನೂ ಜಯಿಸುವುದಕ್ಕೆ ನನಗೆ ಆತ್ಮೀಕಬಲವೂ ಬೇಕಾಗಿದೆ, ದಯವಿಟ್ಟು ನನ್ನನ್ನು ಪರಲೋಕದಿಂದ ಒಂದು ಬಾರಿ ನೋಡು. ನಾನು ಕುಗ್ಗಿಹೋಗದೆ ಬಿದ್ದುಹೋಗದೆ ಯಾವ-ಯಾವ ಸಂದರ್ಭದಲ್ಲಿ ಎಂತೆಂತಹ ಪ್ರಾರ್ಥನೆಗಳನ್ನು ವಿಜ್ಞಾಪನೆಗಳನ್ನು ನಾನು ಮಾಡಬೇಕಾಗಿದೆಯೋ ಅಂತಹ ಪ್ರಾರ್ಥನೆಗಳನ್ನೆಲ್ಲಾ ನನಗೆ ಕಲಿಸಿಕೊಡು.

ಅಪ್ಪಾ, ನಶಿಸಿಹೋಗುವ ಆತ್ಮಗಳಿಗಾಗಿ ಪ್ರಾರ್ಥಿಸಲು ನನಗೆ ಕಣ್ಣೀರಿನಿಂದ ಪ್ರಾರ್ಥಿಸುವಂತಹ ಆತ್ಮವನ್ನು ಅನುಗ್ರಹಿಸು. ನನಗೆ ತಿಳಿದಿರುವ



ಯಾರೊಬ್ಬರೂ ಅಗ್ನಿ ನರಕಕ್ಕೆ ಹೋಗದಂತೆ ನನಗೆ ಆತ್ಮಭಾರವನ್ನು ದಯಪಾಲಿಸು, 'ಪ್ರಾರ್ಥನಾ ಆತ್ಮ', 'ವಿಜ್ಞಾಪಿಸುವ ಆತ್ಮ', 'ಮೊರೆಯಿಡುವ ಆತ್ಮ', 'ಕಣ್ಣೀರಿನ ಆತ್ಮ', 'ಬೇಡಿಕೊಳ್ಳುವ ಆತ್ಮ' ಇವೆಲ್ಲವನ್ನೂ ಅನುಗ್ರಹಿಸು. ಒಟ್ಟಾಗಿ ಉತ್ತಮವಾದ ಪ್ರಾರ್ಥನಾ ವೀರಳಾ/ನಾಗಿ ನನ್ನನ್ನು ನಡೆಸಬೇಕೆಂದು ವಿಜ್ಞಾಪಿಸುತ್ತಿದ್ದೇನೆ.

ನನ್ನ ಪ್ರಾರ್ಥನೆಗೆ ಶಕ್ತಿಕೊಡು ಯೇಸುವೇ. ಸ್ವರ್ಗ-ಭೂಮಿ-ಪಾತಾಳವನ್ನು ನಡುಗಿಸುವ ಪ್ರಾರ್ಥನಾ ಆತ್ಮವನ್ನು ನನಗೆ ದಯಪಾಲಿಸಬೇಕೆಂದು ವಿಜ್ಞಾಪಿಸುತ್ತಿದ್ದೇನೆ. ನಾನು ನಿನ್ನ ಹೆಸರಿನಲ್ಲಿ ನಿನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವವನೇ (ಯೋಹಾ 14: 13,14) ಈ ಭೂಲೋಕದಲ್ಲಿ ನಾನು ಇರುವಾಗ ಏನೇನು ಬೇಡಿ ನಿನ್ನ ಬಳಿಯಲ್ಲಿ ಪಡೆದುಕೊಳ್ಳಲು ಸಾಧ್ಯವಿದೆಯೋ ಅದನ್ನೆಲ್ಲಾ ಹೊಂದಿಕೊಳ್ಳುವಂತೆ ನನಗೆ ಕಲಿಸಿಕೊಡು. ಆಶೀರ್ವಾದಕರವಾದ ಪ್ರಾರ್ಥನಾ ಜೀವನವನ್ನೂ ಮತ್ತು ಎಡೆಬಿಡದೆ ಪ್ರತಿದಿನವೂ ಪ್ರಾರ್ಥಿಸುವಂತಾ ಪ್ರಾರ್ಥನಾ ಆತ್ಮವನ್ನೂ ಅನುಗ್ರಹಿಸು. ವಾಕ್ಯಗಳನ್ನು ಓದುತ್ತಾ ಅರ್ಥಮಾಡಿಕೊಳ್ಳುತ್ತಾ. ಅನೇಕರಿಗೆ ಅರ್ಥಮಾಡಿಸುತ್ತಾ ವಾಕ್ಯದಲ್ಲಿ ನೆಲೆನಿಂತುಕೊಳ್ಳುವಂತೆ ಸಹಾಯಮಾಡು. ಸತ್ಯವೇದದ ಒಂದೊಂದು ವಾಕ್ಯಗಳನ್ನು ಹಿಡಿದಿಟ್ಟು ಪ್ರಾರ್ಥಿಸುವಾಗಲೆಲ್ಲಾ ನನಗೆ ಆಶೀರ್ವಾದಗಳು ಹುಡುಕಿಕೊಂಡು ಬರುವಂತೆಯೂ 'ಶುಭವು-ಕೃಪೆಯು ನನ್ನನ್ನು ಹಿಂಬಾಲಿಸುವಂತೆಯೂ ಅನುಗ್ರಹಿಸು, ಯಾವ-ಯಾವ ಸಂದರ್ಭದಲ್ಲಿ ಏನೇನು ಪ್ರಾರ್ಥನೆ ಮಾಡಬೇಕು. ಯಾರ್ಯಾರಿಗೆ ನಾನು ಪ್ರಾರ್ಥನೆ ಮಾಡಬೇಕು ನನಗೆ ಕಲಿಸಿಕೊಡು.

ಪರಲೋಕ ರಾಜ್ಯಕ್ಕೆ ಹತ್ತಿರವಾಗಿ ಜೀವಿಸಿ ಈ ಲೋಕದ ಪ್ರತಿಯೊಂದು ಆಸೆಗಳನ್ನು ತ್ಯಜಿಸಿ ಸುಳ್ಳು ಪ್ರಪಂಚದಿಂದ ಬೇರ್ಪಟ್ಟು, ಉತ್ತಮವಾದ, ಗೌರವವುಳ್ಳ ವ್ಯಕ್ತಿಯಾಗಿ ಜೀವಿಸಿ ನಿನ್ನ ಬಳಿ ಬರಲು ಸಹಾಯ ಮಾಡು. ಪರಿಶುದ್ಧವಾದ ಜೀವನವನ್ನು ಅನುಗ್ರಹಿಸು, ಯೇಸುವೇ ನನ್ನ ಪರವಾಗಿ ಪರಲೋಕವೇ ಸಂತೋಷ ಪಟ್ಟಿಕೊಳ್ಳುವ ರೀತಿಯಲ್ಲಿ ಅತ್ಯುತ್ತಮವಾದ ಆತ್ಮೀಕ ಜೀವನವನ್ನು ನನಗೆ ಅನುಗ್ರಹಿಸು.

ಯೇಸುವೇ ನನ್ನನ್ನು ಈ ಭೂಮಿಯ ಮೇಲೆ ಯಾವುದಕ್ಕೋಸ್ಕರವಾಗಿ

ಇಚ್ಛಿರುವಿಯೋ ಆ ನಿನ್ನ ಚಿತ್ತ ಉದ್ದೇಶಗಳು ನನ್ನಲ್ಲಿ ನೆರವೇರಲಿ. ಯೇಸುವೇ ನನ್ನನ್ನು ನಿನಗೆ ಪರಿಪೂರ್ಣವಾಗಿ ಒಪ್ಪಿಸಿಕೊಟ್ಟಿದ್ದೇನೆ. ನಾನು ನನ್ನ ಸ್ವಂತ ಸ್ವತ್ತು ಅಲ್ಲ, ನಾನು ವಿರೋಧಿಯ ಸ್ವತ್ತು ಅಲ್ಲ, ಯೇಸುವೇ ನಾನು ನಿನ್ನ ಸ್ವತ್ತು ಆಗಿದ್ದೇನೆ. ನಾನು ನನ್ನ ಇಷ್ಟದ ಪ್ರಕಾರ ಪ್ರಾರ್ಥಿಸದೇ ಕರ್ತನೇ ನಿನ್ನ ಇಷ್ಟದ ಪ್ರಕಾರ ಪ್ರಾರ್ಥಿಸುವಂತೆ ಸಹಾಯ ಮಾಡು. ಯೇಸುವೇ ನೀನು ನನ್ನನ್ನು ನಿನ್ನ ರಕ್ತದಿಂದ ಕ್ರಯಕ್ಕೆ ತೆಗೆದುಕೊಂಡಿರುವುದರಿಂದ ನಿನ್ನ ಸ್ವತ್ತಾಗಿದ್ದೇನೆ. (1ಕೊರಿಂ 6:20) ಅದಕ್ಕಾಗಿ ನಿನ್ನ ಚಿತ್ತವೇ ನನ್ನಲ್ಲಿ ನೆರವೇರಬೇಕೆಂದು ವಿಜ್ಞಾಪಿಸುತ್ತಿದ್ದೇನೆ.

ನಿನ್ನನ್ನೇ ಆರಾಧಿಸುತ್ತಾ ಹೃದಯದಲ್ಲಿ ನಿನ್ನ ವಾಕ್ಯಗಳನ್ನು ಶೇಕರಿಸಿಕೊಂಡು ನೀನು ಹೇಳುವ ಪ್ರಕಾರವೇ ಜೀವಿಸಲು ಸಹಾಯಮಾಡು. ನನ್ನೊಳಗೆ ಪರಿಶುದ್ಧಾತ್ಮನು ಮಾತನಾಡುವಾಗಲೆಲ್ಲಾ ಗ್ರಹಿಸಿಕೊಳ್ಳಲು ಮತ್ತು ಪರಿಶುದ್ಧಾತ್ಮನು ಹೇಳಿದ ಹಾಗೆ ನಡೆಯಲು ಕಲಿಸಿಕೊಡು. ನಿನ್ನ ಮಾತಿಗೆ ನಾನು ಹೇಗೆ ವಿಧೇಯತೆಯಿಂದ ನಡೆದುಕೊಳ್ಳಬೇಕೋ ನನಗೆ ತಿಳಿಯಪಡಿಸಬೇಕೆಂದು ಪರಿಶುದ್ಧವಾದ ನಜರೇತಿನ ಯೇಸುವಿನ ಹೆಸರಿನಲ್ಲಿ ಪರಿಶುದ್ಧಾತ್ಮನ ಪ್ರಸನ್ನತೆಯಲ್ಲಿ ಈ ಚಿಕ್ಕ ಪ್ರಾರ್ಥನೆಯನ್ನು ನಿನ್ನ ಬಳಿಯಲ್ಲಿ ನನ್ನನ್ನೇ ತಗ್ಗಿಸಿಕೊಂಡು ಯೇಸುಕ್ರಿಸ್ತನ ಅತೀ ಪರಿಶುದ್ಧ ನಾಮದಿಂದ ಬೇಡಿಹೊಂದಿದ್ದೇನೆ ಜೀವವುಳ್ಳ ತಂದೆಯೇ ಆಮೆನ್.



## 2. ಮುಂಜಾನೆಯಲ್ಲಿ

ಅಪ್ಪಾ ತಂದೆಯೇ ನಿನಗೆ ಶುಭೋದಯ (Good Morning Abba Father)

ಯೇಸು ಕ್ರಿಸ್ತನೇ ನಿನಗೆ ಶುಭೋದಯ (Good Morning Jesus Christ)

ಪವಿತ್ರಾತ್ಮನೇ ನಿನಗೆ ಶುಭೋದಯ (Good Morning Holy spirit)

ಈ ದಿನ ನಾನು ಆಶೀರ್ವದಿಸಲ್ಪಟ್ಟವಳು/ವನು (3 ಭಾರಿ) (ನಿಮ್ಮ ಬಲಗೈಯನ್ನು ನಿಮ್ಮ ಹೃದಯದ ಮೇಲೆ ಇಟ್ಟುಕೊಂಡು ಹೇಳಿ)

ಈ ದಿನ ನಾನು ಅಭಿಷೇಕಿಸಲ್ಪಟ್ಟವಳು/ವನು (3 ಭಾರಿ) (ನಿಮ್ಮ ಬಲಗೈಯನ್ನು ನಿಮ್ಮ ತಲೆಯ ಮೇಲೆ ಇಟ್ಟುಕೊಂಡು ಹೇಳಿ)

(ಈಗ ನಿಮ್ಮ ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ ಹೇಳಿ) ತಂದೆಯೇ ನೀನೇ ನನ್ನನ್ನು ಈ ಹೊತ್ತು ನಡೆಸು. ಯೇಸುಕ್ರಿಸ್ತನೇ ನೀನೇ ನನ್ನನ್ನು ಈ ಹೊತ್ತು ನಡೆಸು. ಪರಿಶುದ್ಧಾತ್ಮನೇ ನೀನೇ ನನ್ನನ್ನು ಈ ಹೊತ್ತು ನಡೆಸು.

ನಾನು ನನ್ನನ್ನು ಯೇಸುವಿನ ರಕ್ತದಿಂದ ಮರೆಮಾಚಿಕೊಳ್ಳುತ್ತಿದ್ದೇನೆ. ಕರ್ತನೇ ಕಳೆದ ದಿನದಿಂದ ಕಳೆದ ರಾತ್ರಿಯವರೆಗೂ ನನ್ನನ್ನು ಕಣ್ಣಿಯ ಹಾಗೆ ಕಾಯ್ದು ಕಾಪಾಡಿ ರಕ್ಷಿಸಿ ಮತ್ತೊಂದು ದಿನವನ್ನು ಕಾಣುವಂತೆ ಕೃಪೆ ಕೊಟ್ಟಿದ್ದಕ್ಕಾಗಿ ಸ್ತೋತ್ರ. ಯೇಸುವೇ ನಾನು ಈ ದಿನ ಮಾಡುವಂತಹ ಪ್ರತಿಯೊಂದು ಕೆಲಸಕಾರ್ಯದಲ್ಲಿಯೂ ನೀನು ನನ್ನೊಟ್ಟಿಗೆ ಇದ್ದು ನನ್ನನ್ನು ನಡೆಸಬೇಕೆಂದು ಪ್ರಾರ್ಥಿಸುತ್ತಿದ್ದೇನೆ. ನಿನ್ನ ಚಿತ್ತಕ್ಕೆ ವಿರೋಧವಾಗಿರುವ ಯಾವುದೊಂದನ್ನೂ ನನ್ನ ಜೀವನದಲ್ಲಿ ನಾನು ಮಾಡದಂತೆ ಸಹಾಯಮಾಡು ತಂದೆಯೇ ಆಮೆನ್.

ತಂದೆಯೇ ನಿನಗೆ ಕೃತಜ್ಞತೆ.(Thank you Father)

ಯೇಸುವೇ ನಿನಗೆ ಕೃತಜ್ಞತೆ. (Thank you Jesus)

ಪರಿಶುದ್ಧಾತ್ಮನೇ ನಿನಗೆ ಕೃತಜ್ಞತೆ. (Thank you Holy Spirit)

“ಯೆಹೋವ ಯೀರೇ” ಸ್ತೋತ್ರ (ಆದಿ 22:14) (100 ಭಾರಿ ಹೇಳಬೇಕು)

“ಯೆಹೋವಾ ಷಾಲೋಮ್” ಸ್ತೋತ್ರ (ನ್ಯಾಯ 6:24)

(100 ಭಾರಿ ಹೇಳಬೇಕು)

"ಯೆಹೋವಾ ನಿಸ್ಸಿ" ಸ್ತೋತ್ರ (ವಿಮೋ 17:15) (100 ಭಾರಿ ಹೇಳಬೇಕು)

"ಯೆಹೋವಾ ರೂವಾ" ಸ್ತೋತ್ರ (ಕೀರ್ತ 23:1) (100 ಭಾರಿ ಹೇಳಬೇಕು)

"ಯೆಹೋವಾ ಮಕ್ಕದೇಸ್" ಸ್ತೋತ್ರ (ಯಾಜಕ 20:8)

(100 ಭಾರಿ ಹೇಳಬೇಕು)

ಕೆಲಸ ಕಾರ್ಯಕ್ಕಾಗಿ :

ಕರ್ತನೇ, ನನಗೆ ಈ ದಿನಕ್ಕೆ ಬೇಕಾದಂತಹ ಸಮಸ್ತ ಅನುಕೂಲಗಳನ್ನೂ ಒದಗಿಸಿಕೊಟ್ಟು ಸಮಾಧಾನದಿಂದ ನಡೆಯುವುದಕ್ಕೂ ಮತ್ತು ನಾನು ಕೈ ಹಾಕುವ ಕೆಲಸವು ಜಯಹೊಂದುವಂತೆಯೂ ಸಫಲವಾಗುವಂತೆಯೂ ನನ್ನನ್ನು ಆಶೀರ್ವದಿಸು. ನಿನ್ನ ಪ್ರಸನ್ನತೆಯಲ್ಲಿಯೇ ನನ್ನನ್ನು ನಡೆಸು (ಕೀರ್ತನೆ 90:17) ದೇವರೇ ನಾನು ನಿನಗೆ ಮೆಚ್ಚಿಕೆಯಾದ ಕೆಲಸಗಳನ್ನು ನಡೆಸಲು ಸಹಾಯಮಾಡು. ಕರ್ತನೇ ನಿನಗೆ ಮೆಚ್ಚಿಕೆಯಾದ ಕೆಲಸ ಯಾವುದೆಂದರೆ ನೀನು ಕಳುಹಿಸಿಕೊಟ್ಟ ಯೇಸುವನ್ನು ನಂಬುವುದೇ (ಯೋಹಾನ 6:28,29) ಆಗಿರುವುದರಿಂದ ಈ ದಿನದಲ್ಲಿ ಎಲ್ಲಾ ಸಂದರ್ಭದಲ್ಲೂ ಎಲ್ಲಾ ವಿಚಾರದಲ್ಲೂ ನಾನು ನಿನ್ನನ್ನು ಸಂಪೂರ್ಣವಾಗಿ ನಂಬಿ ಜೀವಿಸಲು ನನಗೆ ಸಹಾಯ ಮಾಡು. ಪ್ರತಿಯೊಬ್ಬರ ಕೆಲಸವನ್ನು ನೋಡಿ ಪಕ್ಷಪಾತವಿಲ್ಲದೆ ತೀರ್ಪುಮಾಡುವಾತನು ನನ್ನ ತಂದೆಯೇ ಆಗಿರುವುದರಿಂದ ಈ ಲೋಕದಲ್ಲಿ ನನ್ನ ಪ್ರವಾಸಕಾಲವನ್ನು ಭಯಭಕ್ತಿಯುಳ್ಳವಳಾ/ನಾ/ಗಿ ಕಳೆಯಲು ನನಗೆ ಸಹಾಯಮಾಡು. (1 ಪೇತ್ರ 1:17) ಕರ್ತನೇ ನನ್ನ ಎಲ್ಲಾ ಕೆಲಸಗಳಲ್ಲಿಯೂ ನನ್ನನ್ನು ಅಭಿವೃದ್ಧಿಪಡಿಸು. (ಧರ್ಮೋ 24:19)

ನನಗೆ ಈ ಲೋಕದಲ್ಲಿ ವಹಿಸಿರುವ ಎಲ್ಲಾ ಆತ್ಮೀಕ ಮತ್ತು ಲೌಕೀಕ ಕೆಲಸ-ಕಾರ್ಯಗಳನ್ನು ನಾನು ಮಾಡುವುದಕ್ಕೆ ಪೂರ್ಣ ಶಕ್ತಿ (ಪ್ರಸಂಗಿ 9:10) ಸಂಪೂರ್ಣ ಆರೋಗ್ಯವನ್ನು ಕೊಟ್ಟು ನಿನ್ನ ಹೆಸರಿಗೆ ತಕ್ಕಂತೆ ನನ್ನನ್ನು ಪರಿಶುದ್ಧ ಪಡಿಸಿ ನನ್ನನ್ನು ನಡೆಸ ಬೇಕೆಂದು ಪರಿಶುದ್ಧವಾದ ನಜರೇತಿನ ಯೇಸುವಿನ ಹೆಸರಿನಲ್ಲಿ ಪರಿಶುದ್ಧಾತ್ಮನ ಪ್ರಸನ್ನತೆಯಲ್ಲಿ ಬೇಡಿಹೊಂದಿದ್ದೇನೆ ಜೀವವುಳ್ಳ ತಂದೆಯೇ ಆಮೆನ್.



# 3. ಪ್ರತಿದಿನ ಹೊರಗೆ ಹೋಗುವಾಗ

ಕೀರ್ತನೆ 91:- 1-16 (ಈ ಅಧ್ಯಾಯವನ್ನು ತಪ್ಪದೆ ಬಾಯಿ ಪಾಠ ಮಾಡಿರಿ)

"ಪರಾತ್ಪರನ ಮರೆಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು. ನಾನು ಯೆಹೋವನಿಗೆ - ನೀನೇ ನನ್ನ ಶರಣನು ನನ್ನ ದುರ್ಗವು ನಾನು ಭರವಸವಿಟ್ಟಿರುವ ನನ್ನ ದೇವರು ಎಂದು ಹೇಳುವೆನು. ನಿನ್ನನ್ನು ಬೇಟೆಗಾರನ ಬಲೆಯಿಂದಲೂ ಮರಣಕರವ್ಯಾಧಿಯಿಂದಲೂ ತಪ್ಪಿಸುವವನು ಆತನೇ. ಆತನು ನಿನ್ನನ್ನು ತನ್ನ ರೆಕ್ಕೆಗಳಿಂದ ಒದಗಿಸುವನು; ಆತನ ಪಕ್ಕಗಳ ಮರೆಯನ್ನು ಆಶ್ರಯಿಸಿಕೊಳ್ಳುವಿ. ಆತನ ಸತ್ಯತೆಯೇ ನಿನಗೆ ಖೇಡ್ಯವು ಗುರಾಣಿಯೂ ಆಗಿದೆ. ಇರುಳಲ್ಲಿ ಭಯಹುಟ್ಟಿಸುವ ಯಾವದಕ್ಕೂ ಹಗಲಲ್ಲಿ ಹಾರಿಬರುವ ಬಾಣಕ್ಕೂ ಕತ್ತಲೆಯಲ್ಲಿ ಸಂಚರಿಸುವ ವಿಪತ್ತಿಗೂ ಹಾನಿಕರವಾದ ಮಧ್ಯಾಹ್ನದ ಕೇಡಿಗೂ ಅಂಜ ಕಾರಣವಿಲ್ಲ. ನಿನ್ನ ಮಗ್ಗುಲಲ್ಲಿ ಸಾವಿರ ಜನರು, ನಿನ್ನ ಬಲಗಡೆಯಲ್ಲಿ ಹತ್ತುಸಾವಿರ ಜನರು ಸತ್ತುಬಿದ್ದರೂ ನಿನಗೇನೂ ತಟ್ಟದು. ನೀನು ಅದನ್ನು ಕಣ್ಣಾರೆ ಕಂಡು ದುಷ್ಟರಿಗೆ ಪ್ರತಿದಂಡನೆಯುಂಟೆಂಬದಕ್ಕೆ ಸಾಕ್ಷಿಯಾಗಿರುವಿಯಷ್ಟೆ.

ಯೆಹೋವನೇ ನನ್ನ ಶರಣನು! ಪರಾತ್ಪರನನ್ನು ನಿವಾಸಸ್ಥಾನ ಮಾಡಿಕೊಂಡಿದ್ದೀಯಲ್ಲಾ ಯಾವ ಕೇಡೂ ನಿನಗೆ ಸಂಭವಿಸದು; ಉಪದ್ರವವು ನಿನ್ನ ಗುಡಾರದ ಸಮೀಪಕ್ಕೂ ಬಾರದು. ನೀನು ಹೋಗುವಲ್ಲೆಲ್ಲಾ ನಿನ್ನನ್ನು ಕಾಯುವುದಕ್ಕೆ ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆಕೊಡುವನು. ನಿನ್ನ ಕಾಲು ಕಲ್ಲಿಗೆ ತಗಲದಂತೆ ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು. ಸಿಂಹಸರ್ಪಗಳ ಮೇಲೆ ನಡೆಯುವಿ; ಪ್ರಾಯದ ಸಿಂಹವನ್ನೂ ಘಟಸರ್ಪವನ್ನೂ ತುಳಿದುಬಿಡುವಿ.

ಅವನು ನನ್ನಲ್ಲಿ ಆಸಕ್ತನಾಗಿರುವದರಿಂದ ಅವನನ್ನು ರಕ್ಷಿಸುವೆನು; ನನ್ನ ನಾಮವನ್ನು ಅರಿತವನಾಗಿರುವದರಿಂದ ಅವನನ್ನು ಉದ್ಧರಿಸುವೆನು. ಅವನು ನನಗೆ ಮೊರೆಯಿಡುವಾಗ ಸದುತ್ತರವನ್ನು ದಯಪಾಲಿಸುವೆನು; ಇಕ್ಕಟ್ಟಿನಲ್ಲಿ ಹತ್ತಿರವಿದ್ದು ಅವನನ್ನು ತಪ್ಪಿಸಿ ಘನಪಡಿಸುವೆನು; ದೀರ್ಘಾಯುಷ್ಯವನ್ನು ಅನುಗ್ರಹಿಸಿ ಅವನನ್ನು ತೃಪ್ತಿಪಡಿಸುವೆನು; ನನ್ನ ವಿಶೇಷವಾದ ರಕ್ಷಣೆಯನ್ನು

(100 ಭಾರಿ ಹೇಳಬೇಕು)

"ಯೆಹೋವಾ ನಿಸ್ಸಿ" ಸ್ತೋತ್ರ (ವಿಮೋ 17:15) (100 ಭಾರಿ ಹೇಳಬೇಕು)

"ಯೆಹೋವಾ ರೂವಾ" ಸ್ತೋತ್ರ (ಕೀರ್ತ 23:1) (100 ಭಾರಿ ಹೇಳಬೇಕು)

"ಯೆಹೋವಾ ಮಕ್ಕದೇಸ್" ಸ್ತೋತ್ರ (ಯಾಜಕ 20:8)

(100 ಭಾರಿ ಹೇಳಬೇಕು)

ಕೆಲಸ ಕಾರ್ಯಕ್ಕಾಗಿ :

ಕರ್ತನೇ, ನನಗೆ ಈ ದಿನಕ್ಕೆ ಬೇಕಾದಂತಹ ಸಮಸ್ತ ಅನುಕೂಲಗಳನ್ನೂ ಒದಗಿಸಿಕೊಟ್ಟು ಸಮಾಧಾನದಿಂದ ನಡೆಯುವುದಕ್ಕೂ ಮತ್ತು ನಾನು ಕೈ ಹಾಕುವ ಕೆಲಸವು ಜಯಹೊಂದುವಂತೆಯೂ ಸಫಲವಾಗುವಂತೆಯೂ ನನ್ನನ್ನು ಆಶೀರ್ವದಿಸು. ನಿನ್ನ ಪ್ರಸನ್ನತೆಯಲ್ಲಿಯೇ ನನ್ನನ್ನು ನಡೆಸು (ಕೀರ್ತನೆ 90:17) ದೇವರೇ ನಾನು ನಿನಗೆ ಮೆಚ್ಚಿಕೆಯಾದ ಕೆಲಸಗಳನ್ನು ನಡೆಸಲು ಸಹಾಯಮಾಡು. ಕರ್ತನೇ ನಿನಗೆ ಮೆಚ್ಚಿಕೆಯಾದ ಕೆಲಸ ಯಾವುದೆಂದರೆ ನೀನು ಕಳುಹಿಸಿಕೊಟ್ಟ ಯೇಸುವನ್ನು ನಂಬುವುದೇ (ಯೋಹಾನ 6:28,29) ಆಗಿರುವುದರಿಂದ ಈ ದಿನದಲ್ಲಿ ಎಲ್ಲಾ ಸಂದರ್ಭದಲ್ಲೂ ಎಲ್ಲಾ ವಿಚಾರದಲ್ಲೂ ನಾನು ನಿನ್ನನ್ನು ಸಂಪೂರ್ಣವಾಗಿ ನಂಬಿ ಜೀವಿಸಲು ನನಗೆ ಸಹಾಯ ಮಾಡು. ಪ್ರತಿಯೊಬ್ಬರ ಕೆಲಸವನ್ನು ನೋಡಿ ಪಕ್ಷಪಾತವಿಲ್ಲದೆ ತೀರ್ಪುಮಾಡುವಾತನು ನನ್ನ ತಂದೆಯೇ ಆಗಿರುವುದರಿಂದ ಈ ಲೋಕದಲ್ಲಿ ನನ್ನ ಪ್ರವಾಸಕಾಲವನ್ನು ಭಯಭಕ್ತಿಯುಳ್ಳವಳಾ/ನಾ/ಗಿ ಕಳೆಯಲು ನನಗೆ ಸಹಾಯಮಾಡು. (1 ಪೇತ್ರ 1:17) ಕರ್ತನೇ ನನ್ನ ಎಲ್ಲಾ ಕೆಲಸಗಳಲ್ಲಿಯೂ ನನ್ನನ್ನು ಅಭಿವೃದ್ಧಿಪಡಿಸು. (ಧರ್ಮೋ 24:19)

ನನಗೆ ಈ ಲೋಕದಲ್ಲಿ ವಹಿಸಿರುವ ಎಲ್ಲಾ ಆತ್ಮೀಕ ಮತ್ತು ಲೌಕೀಕ ಕೆಲಸ-ಕಾರ್ಯಗಳನ್ನು ನಾನು ಮಾಡುವುದಕ್ಕೆ ಪೂರ್ಣ ಶಕ್ತಿ (ಪ್ರಸಂಗಿ 9:10) ಸಂಪೂರ್ಣ ಆರೋಗ್ಯವನ್ನು ಕೊಟ್ಟು ನಿನ್ನ ಹೆಸರಿಗೆ ತಕ್ಕಂತೆ ನನ್ನನ್ನು ಪರಿಶುದ್ಧ ಪಡಿಸಿ ನನ್ನನ್ನು ನಡೆಸ ಬೇಕೆಂದು ಪರಿಶುದ್ಧವಾದ ನಜರೇತಿನ ಯೇಸುವಿನ ಹೆಸರಿನಲ್ಲಿ ಪರಿಶುದ್ಧಾತ್ಮನ ಪ್ರಸನ್ನತೆಯಲ್ಲಿ ಬೇಡಿಹೊಂದಿದ್ದೇನೆ ಜೀವವುಳ್ಳ ತಂದೆಯೇ ಆಮೆನ್.



# 3. ಪ್ರತಿದಿನ ಹೊರಗೆ ಹೋಗುವಾಗ

ಕೀರ್ತನೆ 91:- 1-16 (ಈ ಅಧ್ಯಾಯವನ್ನು ತಪ್ಪದೆ ಬಾಯಿ ಪಾಠ ಮಾಡಿರಿ)

"ಪರಾತ್ಪರನ ಮರೆಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು. ನಾನು ಯೆಹೋವನಿಗೆ - ನೀನೇ ನನ್ನ ಶರಣನು ನನ್ನ ದುರ್ಗವು ನಾನು ಭರವಸವಿಟ್ಟಿರುವ ನನ್ನ ದೇವರು ಎಂದು ಹೇಳುವೆನು. ನಿನ್ನನ್ನು ಬೇಟೆಗಾರನ ಬಲೆಯಿಂದಲೂ ಮರಣಕರವ್ಯಾಧಿಯಿಂದಲೂ ತಪ್ಪಿಸುವವನು ಆತನೇ. ಆತನು ನಿನ್ನನ್ನು ತನ್ನ ರೆಕ್ಕೆಗಳಿಂದ ಒದಗಿಸುವನು; ಆತನ ಪಕ್ಕಗಳ ಮರೆಯನ್ನು ಆಶ್ರಯಿಸಿಕೊಳ್ಳುವಿ. ಆತನ ಸತ್ಯತೆಯೇ ನಿನಗೆ ಖೇಡ್ಯವು ಗುರಾಣಿಯೂ ಆಗಿದೆ. ಇರುಳಲ್ಲಿ ಭಯಹುಟ್ಟಿಸುವ ಯಾವದಕ್ಕೂ ಹಗಲಲ್ಲಿ ಹಾರಿಬರುವ ಬಾಣಕ್ಕೂ ಕತ್ತಲೆಯಲ್ಲಿ ಸಂಚರಿಸುವ ವಿಪತ್ತಿಗೂ ಹಾನಿಕರವಾದ ಮಧ್ಯಾಹ್ನದ ಕೇಡಿಗೂ ಅಂಜ ಕಾರಣವಿಲ್ಲ. ನಿನ್ನ ಮಗ್ಗುಲಲ್ಲಿ ಸಾವಿರ ಜನರು, ನಿನ್ನ ಬಲಗಡೆಯಲ್ಲಿ ಹತ್ತುಸಾವಿರ ಜನರು ಸತ್ತುಬಿದ್ದರೂ ನಿನಗೇನೂ ತಟ್ಟದು. ನೀನು ಅದನ್ನು ಕಣ್ಣಾರೆ ಕಂಡು ದುಷ್ಟರಿಗೆ ಪ್ರತಿದಂಡನೆಯುಂಟೆಂಬದಕ್ಕೆ ಸಾಕ್ಷಿಯಾಗಿರುವಿಯಷ್ಟೆ.

ಯೆಹೋವನೇ ನನ್ನ ಶರಣನು! ಪರಾತ್ಪರನನ್ನು ನಿವಾಸಸ್ಥಾನ ಮಾಡಿಕೊಂಡಿದ್ದೀಯಲ್ಲಾ ಯಾವ ಕೇಡೂ ನಿನಗೆ ಸಂಭವಿಸದು; ಉಪದ್ರವವು ನಿನ್ನ ಗುಡಾರದ ಸಮೀಪಕ್ಕೂ ಬಾರದು. ನೀನು ಹೋಗುವಲ್ಲೆಲ್ಲಾ ನಿನ್ನನ್ನು ಕಾಯುವುದಕ್ಕೆ ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆಕೊಡುವನು. ನಿನ್ನ ಕಾಲು ಕಲ್ಲಿಗೆ ತಗಲದಂತೆ ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು. ಸಿಂಹಸರ್ಪಗಳ ಮೇಲೆ ನಡೆಯುವಿ; ಪ್ರಾಯದ ಸಿಂಹವನ್ನೂ ಘಟಸರ್ಪವನ್ನೂ ತುಳಿದುಬಿಡುವಿ.

ಅವನು ನನ್ನಲ್ಲಿ ಆಸಕ್ತನಾಗಿರುವದರಿಂದ ಅವನನ್ನು ರಕ್ಷಿಸುವೆನು; ನನ್ನ ನಾಮವನ್ನು ಅರಿತವನಾಗಿರುವದರಿಂದ ಅವನನ್ನು ಉದ್ಧರಿಸುವೆನು. ಅವನು ನನಗೆ ಮೊರೆಯಿಡುವಾಗ ಸದುತ್ತರವನ್ನು ದಯಪಾಲಿಸುವೆನು; ಇಕ್ಕಟ್ಟಿನಲ್ಲಿ ಹತ್ತಿರವಿದ್ದು ಅವನನ್ನು ತಪ್ಪಿಸಿ ಘನಪಡಿಸುವೆನು; ದೀರ್ಘಾಯುಷ್ಯವನ್ನು ಅನುಗ್ರಹಿಸಿ ಅವನನ್ನು ತೃಪ್ತಿಪಡಿಸುವೆನು; ನನ್ನ ವಿಶೇಷವಾದ ರಕ್ಷಣೆಯನ್ನು

ತೋರಿಸುವೆನು." ಆಮೆನ್.

"ಕರ್ತನೇ ನೀನೇ ನನ್ನ ಮುಂದೆ ಹೋಗಿ ದಿಣ್ಣೆಗಳನ್ನು ಸಮಮಾಡಿ ತಾಮ್ರದ ಕದಗಳನ್ನು ಒಡೆದು, ಕಬ್ಬಿಣದ ಅಗುಳಿಗಳನ್ನು ಮುರಿದು ಬಿಡು" (ಯೆಶಾಯ 45:2) ಇಸ್ರಾಯೇಲ್ಯರಿಗೆ ಹೇಗೆ ಮುಂಬಲವಾಗಿ ಹಿಂಬಲವಾಗಿದ್ದೇಯೋ ಅದೇ ರೀತಿ ನನ್ನೊಂದಿಗೂ ಇರಬೇಕೆಂದು ಬೇಡಿಕೊಳ್ಳುತ್ತಿದ್ದೇನೆ.

"ಸತ್ಯವೆಂಬ ನಡುಕಟ್ಟನ್ನು ಕಟ್ಟಿಕೊಂಡು ನೀತಿಯೆಂಬ ವಜ್ರಕವಚವನ್ನು ಧರಿಸಿಕೊಂಡು ಸಮಾಧಾನದ ವಿಷಯವಾದ ಸುವಾರ್ತೆಯನ್ನು ತಿಳಿಸುವುದರಲ್ಲಿ ಸಿದ್ಧವಾದ ಮನಸ್ಸೆಂಬ ಕೆರಗಳನ್ನು ಮೆಟ್ಟಿಕೊಂಡು ನಂಬಿಕೆಯೆಂಬ ಗುರಾಣಿಯನ್ನು ಹಿಡಿದುಕೊಂಡು ಇದರಿಂದ ಕೆಡುಕನ ಅಗ್ನಿಬಾಣಗಳನ್ನೆಲ್ಲಾ ಆರಿಸುವುದಕ್ಕೆ ಶಕ್ತರಾಗುತ್ತೇವೆ. ರಕ್ಷಣೆಯೆಂಬ ಶಿರಸ್ತ್ರಾಣವನ್ನು ಇಟ್ಟುಕೊಂಡು ಪವಿತ್ರತ್ಮಾನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿದುಕೊಂಡು" (ಎಫೆ 6:14-17) ಸರ್ವಾಯುಧಗಳನ್ನು ಧರಿಸಿಕೊಂಡು ಮುಂದೆ ಸಾಗುತ್ತೇನೆ. 'ಕರ್ತನ ಪ್ರಭಾವವು ಸದಾ ನನ್ನೊಂದಿಗೆ ಬರಲಿ ಎಂದು ಯೇಸುಕ್ರಿಸ್ತನ ನಾಮದಿಂದ ಪರಿಶುದ್ಧಾತ್ಮನ ಪ್ರಸನ್ನತೆಯಲ್ಲಿ ಪ್ರಾರ್ಥಿಸಿ ಬೇಡಿ ಹೊಂದಿದ್ದೇನೆ ಜೀವವುಳ್ಳ ನಮ್ಮ ತಂದೆಯೇ ಆಮೆನ್.



## 4. ಕೃತಜ್ಞತೆ ಯೇಸುವೇ

"ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ" (ಎಫೆ 5:20) ಕರ್ತನೇ ಸದಾ ಇರುವಾತನೇ ನನ್ನನ್ನು ವಿಶೇಷವಾಗಿ ಹಗಲಿರುಳು ಕಣ್ಮಣಿಯಂತೆ ಕಾಯುತ್ತಿರುವದಕ್ಕಾಗಿ ದೇವರೇ ನಿನಗೆ ಯಾವಾಗಲೂ ಹೃದಯಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿರುತ್ತೇನೆ.

ಕೀರ್ತನೆ 121: 1-8 (ಈ ಅಧ್ಯಾಯವನ್ನು ತಪ್ಪದೆ ಬಾಯಿ ಪಾಠ ಮಾಡಿರಿ)

"ನಾನು ಕಣ್ಣೆತ್ತಿ ಪರ್ವತಗಳ ಕಡೆಗೆ ನೋಡುತ್ತೇನೆ; ನನ್ನ ಸಹಾಯವು ಎಲ್ಲಿಂದ ಬರುವದು? ಭೂಮ್ಯಾಕಾಶಗಳನ್ನು ನಿರ್ಮಿಸಿದ ಯೆಹೋವನಿಂದಲೇ ನನ್ನ ಸಹಾಯವು ಬರುತ್ತದೆ. ಆತನು ನನ್ನ ಪಾದಗಳನ್ನು ಕದಲಗೊಡಿಸದಿರಲಿ ನನ್ನನ್ನು ಕಾಯುವವನು ತೂಕಡಿಸದಿರಲಿ. ಇಗೋ, ಇಸ್ರಾಯೇಲ್ಯರನ್ನು ಕಾಯುವವನು ತೂಕಡಿಸುವದಿಲ್ಲ; ನಿದ್ರಿಸುವದಿಲ್ಲ. ನನ್ನನ್ನು ಕಾಯುವವನು ಯೆಹೋವನೇ; ನನ್ನ ಬಲಗಡೆಯಲ್ಲಿ ನೆರಳಿನಂತೆ ನಿಂತಿರುವಾತನು ಯೆಹೋವನೇ. ಹಗಲಲ್ಲಿ ಸೂರ್ಯನೂ ಇರುಳಲ್ಲಿ ಚಂದ್ರನೂ ನನ್ನನ್ನು ಬಾಧಿಸುವದಿಲ್ಲ. ಯೆಹೋವನು ನನ್ನನ್ನು ಎಲ್ಲಾ ಕೇಡಿನಿಂದ ತಪ್ಪಿಸುವನು; ನನ್ನ ಪ್ರಾಣವನ್ನು ಕಾಯುವನು. ನಾನು ಹೋಗುವಾಗಲೂ ಬರುವಾಗಲೂ ಇಂದಿನಿಂದ ಸದಾಕಾಲವೂ ಯೆಹೋವನು ನನ್ನನ್ನು ಕಾಪಾಡುವನು."

ಹಗಲಿರುಳು ತೂಕಡಿಸದೇ ನಿದ್ರಿಸದೆ ನನ್ನನ್ನು ಕಾಯುತ್ತಿರುವ ನನ್ನ ತಂದೆಯೇ ನಿನಗೆ ಸ್ತೋತ್ರ. ಕೇಳಿದ್ದನ್ನು ಕೇಳಿದ್ದಕ್ಕೆ ತಕ್ಕ ರೀತಿಯಲ್ಲಿಯೇ ಒದಗಿಸಿ ಕೊಟ್ಟಿದ್ದಕ್ಕಾಗಿ ನಿನಗೆ ಕೃತಜ್ಞತೆ.

ಪ್ರತಿ ಸಂದರ್ಭದಲ್ಲೂ ನಾನು ಕೇಳುವಂತಹದನ್ನೆಲ್ಲಾ ಒಂದನ್ನೂ ಮರೆಯದಂತೆ ನನಗೆ ತಕ್ಕ ಸಮಯದಲ್ಲಿ ಒದಗಿಸಿಕೊಡುತ್ತಿರುವುದಕ್ಕಾಗಿ ನಿನಗೆ ಕೃತಜ್ಞತೆ. ಹೊರಗಡೆಯಿಂದ ಮನೆಗೆ ಬಂದ ತಕ್ಷಣವೇ ನಿನ್ನ ಪಾದದ ಬಳಿಯಲ್ಲಿ ಮೊಣಕಾಲೂರುವಂತೆ ಆಯಸ್ಸು ಆರೋಗ್ಯವನ್ನು ನನಗೆ ಕೊಟ್ಟಿರುವುದಕ್ಕಾಗಿ ನಿನಗೆ ಸ್ತೋತ್ರ.

ಯೇಸುವೇ ಎಷ್ಟೋ ಜನರು ನಿನ್ನಿಂದ ಉಪಕಾರಗಳನ್ನು ಹೊಂದಿಕೊಳ್ಳುತ್ತಾರೆ. ಆದರೆ ಕೃತಜ್ಞತೆ ಹೇಳುವುದಿಲ್ಲ. ನಾನಾದರೋ ಅಂತಹ ಪಂಗಡಕ್ಕೆ ಸೇರದೆ ನೀನು ಮಾಡಿದ ಸಕಲ ಉಪಕಾರಗಳಿಗಾಗಿ ಪ್ರತಿದಿನವೂ ನಿನಗೆ ಕೃತಜ್ಞತೆವುಳ್ಳವಳಾ/ನಾ/ಗಿರಲು ನನಗೆ ಸಹಾಯಮಾಡು.

ತಂದೆಯೇ ನಿನಗೆ ಲೆಕ್ಕವಿಲ್ಲದಷ್ಟು ಸ್ತೋತ್ರಗಳು

ಯೇಸುವೇ ನಿನಗೆ ಕೋಟಿ-ಕೋಟಿ ಸ್ತೋತ್ರಗಳು

ಪರಿಶುದ್ಧಾತ್ಮನೇ ನಿನಗೆ ನನ್ನ ಹೃದಯಪೂರ್ವಕವಾಗಿ ಎಣಿಸಲಾಗದಷ್ಟು ಸ್ತೋತ್ರಗಳನ್ನು ಸಲ್ಲಿಸುತ್ತಾ ಯೇಸುವಿನ ನಾಮದಲ್ಲಿ ಪರಿಶುದ್ಧಾತ್ಮನ ಸಹಾಯದಿಂದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಕೇಳು ನನ್ನ ಸ್ವರ್ಗೀಯ ತಂದೆಯೇ ಆಮೆನ್.



## 5.ರಾತ್ರಿ ಮಲಗುವಾಗ

"ಯೇಸುವೇ ಬೆಳಗ್ಗೆಯಿಂದ ಈ ಕ್ಷಣದವರೆಗೂ ನನ್ನನ್ನು ಕಾಯ್ದು ಕಾಪಾಡಿ ರಕ್ಷಿಸಿಕೊಂಡು ಬಂದಿದ್ದಕ್ಕಾಗಿ ನಿನಗೆ ಸ್ತೋತ್ರ. ನಾನು ಮಲಗಬೇಕಾದರೂ ನನ್ನನ್ನು ಶೋಧಿಸಿ ಗ್ರಹಿಸಿಕೊಳ್ಳುವ ದೇವರೇ ನಿನಗೆ ಸ್ತೋತ್ರ (ಕೀರ್ತನೆ 139:3) ರಾತ್ರಿಯ ಜಾವದಲ್ಲಿ ನಾನು ಹಾಸಿಗೆಯ ಮೇಲಿದ್ದಾಗಲೂ ನಿನ್ನನ್ನು ಸ್ಮರಿಸುವಂತೆ ಸಹಾಯಮಾಡು.

ನಾನು ನಿನ್ನ ತೊಡೆಯ ಮೇಲೆ ಮಲಗಿಕೊಳ್ಳುವಂತೆ ನನ್ನ ತಾಯಿಯಾದ ಯೇಸುವೇ ನನ್ನ ಬಳಿಯಲ್ಲಿಯೇ ಇರು. "ನೀತಿವಂತನು ನೆಮ್ಮದಿಯಾಗಿ ನಿದ್ದೆ ಮಾಡುವನು" (ಜ್ಞಾನೋ 3:24) ಎನ್ನುವ ವಾಕ್ಯದ ಪ್ರಕಾರ ನಿಶ್ಚಿಂತೆಯಿಂದ ನಿದ್ದೆ ಮಾಡಲು ಸಹಾಯಮಾಡು. ನಾನು ಈ ದಿನ ತಿಳಿದು-ತಿಳಿಯದೇ ಯಾವ ಮಂಡಲದಲ್ಲಾದರೂ ತಪ್ಪು ಮಾಡಿರುವುದಾದರೆ ದಯವಿಟ್ಟು ನನ್ನನ್ನು ಕ್ಷಮಿಸು ನಿನ್ನ ಪರಿಶುದ್ಧ ರಕ್ತದಿಂದ ನನ್ನನ್ನು ಮತ್ತೊಂದಾವರ್ತಿ ಶುದ್ಧಮಾಡು.

ಸೈತಾನನು ನನಗೆ ಯಾವ ಕನಸನ್ನೂ ಕೊಡದಂತೆ, ನನ್ನ ಆಲೋಚನೆಯಿಂದಲೂ ನನಗೆ ಯಾವ ಕನಸೂ ಬರದಂತೆ ತಡೆಹಿಡಿದು ಕಾಪಾಡು. ನೀನೇ ನನಗೆ ಕನಸನ್ನು ದಯಪಾಲಿಸು ಯೆರೆಮಿಾಯ 33:3ನೇ ವಾಕ್ಯದ ಪ್ರಕಾರ ನನಗೆ ತಿಳಿಯದ ಸಕಲ ಗೂಡಾರ್ಥಗಳನ್ನು ಗೋಚರ ಪಡಿಸು ನಾನು ಮಲಗಿಕೊಂಡರೂ ನನ್ನ ಆತ್ಮ ನಿನ್ನನ್ನೇ ಸ್ತುತಿಸುವಂತೆ ಸಹಾಯ ಮಾಡು. ನನ್ನ ಸುತ್ತಲೂ, ನನ್ನ ಮನೆಯ ಸುತ್ತಲೂ, ನನ್ನ ಸಭೆಯ ಸುತ್ತಲೂ ನಿನ್ನ ದೂತರನ್ನು ದಂಡಿಳಿಸಿ ಕಾವಲು ಕೊಟ್ಟು ರಕ್ಷಿಸ ಬೇಕೆಂದು ಬೇಡುತ್ತೇನೆ.

ಒಂದು ವೇಳೆ ನಾನು ನಾಳೆ ಬೆಳಗ್ಗೆ ಈ ಲೋಕದಲ್ಲಿ ಕಣ್ಣು ಬಿಡಲಿಲ್ಲವಾದ ಪಕ್ಷಕ್ಕೆ ನಿನ್ನ ರಾಜ್ಯದಲ್ಲಿ ನಿನ್ನನ್ನು ನನ್ನ ಕಣ್ಣು ನಿರಂತರವಾಗಿ ಕಾಣುವಂತೆ ಕೃಪೆತೋರು ಯೇಸಪ್ಪಾ. ಆಮೆನ್.

ಎಬಿನೇಜರ್ ಸ್ತೋತ್ರ (100 ಭಾರಿ ಹೇಳ ಬೇಕು)

ಯೆಹೋವಾ ರೆಹೆಬೋತ್ ಸ್ತೋತ್ರ (ಆದಿ 26:22) (100 ಭಾರಿ ಹೇಳ ಬೇಕು)

ಪರಿಶುದ್ಧಾತ್ಮನೇ ನಿನ್ನ ಸಹಾಯಕ್ಕಾಗಿ ಸ್ತೋತ್ರ (100 ಭಾರಿ ಹೇಳ ಬೇಕು)

ಯೇಸುವಿನ ರಕ್ತಕ್ಕೆ ಜಯ. ಸ್ತೋತ್ರ (100 ಭಾರಿ ಹೇಳ ಬೇಕು)

ಯೇಸುಕ್ರಿಸ್ತನ ನಾಮದಲ್ಲಿ ಪರಿಶುದ್ಧಾತ್ಮನ ಸಹಾಯದಿಂದ ಬೇಡಿಹೊಂದಿದ್ದೇನೆ ನಮ್ಮ ಜೀವವುಳ್ಳ ತಂದೆಯೇ ಆಮೆನ್.



# 6. ಪಾಪಗಳಿಂದ ಸಂಪೂರ್ಣ ಬಿಡುಗಡೆಗಾಗಿ

"ಪ್ರೀತಿಸ್ವರೂಪನಾದ ದೇವರೇ ನನ್ನನ್ನು ಕರುಣಿಸು; ಕರುಣಾನಿಧಿಯೇ, ನನ್ನ ದ್ರೋಹವನ್ನೆಲ್ಲಾ ಅಳಿಸಿಬಿಡು. ನನ್ನ ಪಾಪವನ್ನು ಸಂಪೂರ್ಣವಾಗಿ ತೊಳೆದು ಬಿಡು, ನನ್ನ ದೋಷವನ್ನು ಪರಿಹರಿಸಿ ನನ್ನನ್ನು ಶುದ್ಧಿಗೊಳಿಸು. ನಾನು ದ್ರೋಹಿ ಎಂದು ನಾನೇ ಒಪ್ಪಿಕೊಂಡಿದ್ದೇನೆ; ನನ್ನ ಪಾಪವು ಯಾವಾಗಲೂ ನನ್ನ ಮುಂದೆ ಇದೆ. ನಿನಗೇ ಕೇವಲ ನಿನಗೇ ತಪ್ಪುಮಾಡಿದ್ದೇನೆ. ನಿನ್ನ ದೃಷ್ಟಿಗೆ ಕೆಟ್ಟದ್ದಾಗಿರುವದನ್ನೇ ಮಾಡಿದ್ದೇನೆ. ನಿನ್ನ ನಿರ್ಣಯ ನ್ಯಾಯವಾಗಿಯೂ ನಿನ್ನ ತೀರ್ಪು ನಿಷ್ಕಳಂಕವಾಗಿಯೂ ಇರುತ್ತದಲ್ಲಾ. ಹುಟ್ಟಿದಂದಿನಿಂದ ನಾನು ಪಾಪಿಯೇ; ಮಾತೃಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ. ಯಥಾರ್ಥಚಿತ್ತವೇ ನಿನಗೆ ಸಂತೋಷ; ಸುಜ್ಞಾನದ ರಹಸ್ಯಗಳನ್ನು ನನಗೆ ತಿಳಿಯಪಡಿಸು. ಹಿಸ್ಸೋಪ್ ಗಿಡದ ಬರಲಿನಿಂದ ನೀರನ್ನು ಚಿಮಕಿಸಿಯೋ ಎಂಬಂತೆ ನನ್ನ ಅಶುದ್ಧತ್ವವನ್ನು ತೆಗೆದುಬಿಡು, ಆಗ ಶುದ್ಧನಾಗಿರುವೆನು. ನನ್ನನ್ನು ತೊಳೆ, ಆಗ ಹಿಮಕ್ಕಿಂತಲೂ ಬೆಳ್ಳಗಾಗುವೆನು.

ನನ್ನಲ್ಲಿ ಸಂಭ್ರಮೋತ್ಸವದ ಧ್ವನಿ ಉಂಟಾಗುವಂತೆ ಮಾಡು; ಆಗ ನೀನು ಜಜ್ಜಿದ ಎಲುಬುಗಳು ಆನಂದಪಡುವವು. ನನ್ನ ದೋಷಕ್ಕೆ ವಿಮುಖನಾಗು; ನನ್ನ ಪಾಪಗಳನ್ನೆಲ್ಲಾ ಅಳಿಸಿಬಿಡು. ದೇವರೇ ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು; ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನಪಡಿಸು. ನಿನ್ನ ಸನ್ನಿಧಿಯಿಂದ ನನ್ನನ್ನು ತಳ್ಳಬೇಡ; ನಿನ್ನ ಪರಿಶುದ್ಧಾತ್ಮವನ್ನು ನನ್ನಿಂದ ತೆಗೆಯಬೇಡ; ನಿನ್ನ ರಕ್ಷಣಾನಂದವನ್ನು ನಾನು ತಿರಿಗಿ ಅನುಭವಿಸುವಂತೆ ಮಾಡು; ನನ್ನಲ್ಲಿ ಸಿದ್ಧಮನಸ್ಸನ್ನು ಹುಟ್ಟಿಸಿ ನನಗೆ ಆಧಾರನಾಗು. ಆಗ ನಿನ್ನ ಮಾರ್ಗವನ್ನು ದ್ರೋಹಿಗಳಿಗೆ ಬೋಧಿಸುವೆನು; ಪಾಪಿಗಳು ನಿನ್ನ ಕಡೆಗೆ ತಿರುಗಿಕೊಳ್ಳುವರು.

ದೇವರೇ, ನನ್ನ ರಕ್ಷಣಾಕರ್ತನೇ, ಪ್ರಾಣಹತ್ಯದ ಅಪರಾಧದಿಂದ ನನ್ನನ್ನು ಬಿಡಿಸು; ಆಗ ನನ್ನ ನಾಲಿಗೆಯು ಉತ್ಸಾಹದಿಂದ ನಿನ್ನ ಸತ್ಯಸಂಧತೆಯನ್ನು ಕೊಂಡಾಡುವದು. ಕರ್ತನೇ ನನ್ನ ಬಾಯಿ ನಿನ್ನನ್ನು ಸ್ತೋತ್ರಮಾಡುವಂತೆ

ನನ್ನ ತುಟಿಗಳನ್ನು ತೆರೆಯಮಾಡು. ನಿನಗೆ ಯಜ್ಞಗಳಲ್ಲಿ ಅಪೇಕ್ಷೆಯಿಲ್ಲ, ಇದ್ದರೆ ಸಮರ್ಪಿಸೇನು; ಸರ್ವಾಂಗಹೋಮಗಳಲ್ಲಿ ನಿನಗೆ ಸಂತೋಷವಿಲ್ಲ. ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ; ದೇವರೇ, ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ.

ಚಿಯೋನ್ ಪಟ್ಟಣವನ್ನು ಕಟಾಕ್ಷಿಸಿ ಅದಕ್ಕೆ ಶುಭವನ್ನುಂಟುಮಾಡು; ಯೆರೂಸಲೇಮಿನ ಪೌಳಿಗೋಡೆಯನ್ನು ಕಟ್ಟಿಸು. ಜನರು ನ್ಯಾಯವಾದ ಯಜ್ಞಗಳನ್ನೂ ಸರ್ವಾಂಗ ಹೋಮಗಳನ್ನೂ ಸಮರ್ಪಿಸಿ ನಿನಗೆ ಸಂತೋಷವನ್ನುಂಟುಮಾಡುವರು. ನಿನ್ನ ಯಜ್ಞವೇದಿಯ ಮೇಲೆ ಹೋರಿಗಳನ್ನು ಸಮರ್ಪಿಸುವರು." (ಕೀರ್ತನೆ 51; 1-19)

ಯೇಸಪ್ಪಾ ನಾನು ದೊಡ್ಡ ಪಾಪಿಯಾಗಿದ್ದೇನೆ, ತಳ್ಳಲ್ಪಟ್ಟವಳಾ/ನಾ/ಗಿಯೂ, ಯಾರಿಗೂ ಬೇಡವಾದ ವ್ಯಕ್ತಿಯಾಗಿಯೂ ನಿನ್ನ ಬಳಿಗೆ ಬಂದಿದ್ದೇನೆ, ನಾನು ಅನಾಥಳಾ/ನಾ/ಗಿದ್ದೇನೆ. ದಯವಿಟ್ಟು ನನ್ನ ಪ್ರಾರ್ಥನೆಯನ್ನು ಕೇಳು.

ನೀನು ಮನುಷ್ಯರ ಭಯಭಕ್ತಿಗೆ ಪಾತ್ರನಾಗಿರುವುದರಿಂದ ನನ್ನ ಎಲ್ಲಾ ಪಾಪವನ್ನು ಕ್ಷಮಿಸಬೇಕೆಂದು ವಿಜ್ಞಾಪಿಸುತ್ತಿದ್ದೇನೆ. ತಂದೆ-ತಾಯಿ ತನ್ನ ಮಕ್ಕಳಿಗೆ ಬುದ್ಧಿ ಕಲಿಸುವ ಹಾಗೆ ನೀನು ನನಗೆ ಬುದ್ಧಿ ಕಲಿಸಿಕೊಡಬೇಕೆಂದು ಬೇಡುತ್ತಿದ್ದೇನೆ, ನಿನ್ನ ಬಳಿಗೆ ಬರುವ ನನ್ನನ್ನು ಸಂಪೂರ್ಣವಾಗಿ ರಕ್ಷಿಸುತ್ತೀಯಾ ಎಂದು ನಾನು ನಂಬುತ್ತೇನೆ, ಕೈ ಬಿಡದೇ ನನ್ನನ್ನು ರಕ್ಷಿಸು. "ತಂದೆಗಳ ದೋಷ ಫಲವನ್ನು ಅವರ ತರುವಾಯ ಮಕ್ಕಳ ಮಡಿಲಿಗೆ ಹಾಕುವವನೇ" (ಯೆರೆ 32:18) ದಯವಿಟ್ಟು ನನ್ನ ಪಾಪವನ್ನು ಕ್ಷಮಿಸಿ ನನ್ನ ದೋಷವನ್ನೆಲ್ಲಾ ಪರಿಹರಿಸಿ ನನ್ನನ್ನು ಶಿಕ್ಷೆಯಿಂದ ತಪ್ಪಿಸಬೇಕೆಂದು ನನ್ನನ್ನೇ ನಿನ್ನ ಪಾದ ಸನ್ನಿಧಿಯಲ್ಲಿ ತಗ್ಗಿಸಿಕೊಂಡು ಒಪ್ಪಿಸಿಕೊಟ್ಟು ಬೇಡಿಕೊಳ್ಳುತ್ತಿದ್ದೇನೆ. ನನ್ನ ತಂದೆ-ತಾಯಿ ಮುಖಾಂತರ ನನ್ನ ತಲೆಮಾರುಗಳ ಮುಖಾಂತರ ನನ್ನ ಮೇಲೆ ಬಂದಿರುವ ಶಾಪಗಳಿಂದ ನನ್ನನ್ನು ವಿಮುಕ್ತಿಗೊಳಿಸು, ನನ್ನ ಒಡಹುಟ್ಟಿದವರಿಂದ, ನೆರೆಯವರಿಂದ, ಸ್ನೇಹಿತರಿಂದ ಬಂದ ಶಾಪಗಳಿಂದ ಎಲ್ಲಾ ದೋಷಗಳಿಂದ ನನ್ನನ್ನು ಸಂಪೂರ್ಣವಾಗಿ ಬಿಡಿಸಿ ನಿನ್ನ ಪರಿಶುದ್ಧ ರಕ್ತದಿಂದ ತೊಳೆದು ಶುದ್ಧಮಾಡು.

ಯೇಸುವೇ. ನೀನು ನನಗೋಸ್ಕರ ಕಲ್ವಾರಿ-ಶಿಲುಬೆಯಲ್ಲಿ ಬಲಿಯಾದೆ



ಅಪ್ಪಾ ಅದನ್ನು ಮರೆತು ತಂದೆ-ತಾಯಿ ಮಾಡುವ ಮೂಢನಂಬಿಕೆಯ ಸಂಪ್ರದಾಯಕ್ಕೆ ಸಿಲುಕಿ ನನಗೆ ನಾನೇ ಮೋಸಮಾಡಿಕೊಳ್ಳದಂತೆ ನನ್ನನ್ನು ನಿನ್ನ ಅಧೀನಕ್ಕೆ ತೆಗೆದುಕೋ ತಂದೇ. ನೀನೇ ನಿಜವಾದ ದೇವರು ಎಂದು ತಿಳಿದೂ ಸಹಾ ಶರೀರಭಾವದ ಕರ್ಮಗಳಿಗೆ ಒಳಗಾಗಿ ನಿನ್ನನ್ನು ಮರೆತು ಬಾಳದಂತೆ ನಿನ್ನ ಎಲ್ಲಾ ಆಜ್ಞೆಗಳನ್ನು ಗೌರವಿಸಿ ಅದರ ಪ್ರಕಾರ ನಾನು ನಡೆಯಲು ಸಹಾಯಮಾಡಬೇಕೆಂದು ವಿಜ್ಞಾಪಿಸುತ್ತಿದ್ದೇನೆ.

"ಕಣ್ಣು ದೇಹಕ್ಕೆ ದೀಪವಾಗಿದೆ; ಹೀಗಿರುವಲ್ಲಿ ನಿನ್ನ ಕಣ್ಣು ನೆಟ್ಟಗಿದ್ದರೆ ನಿನ್ನ ದೇಹವೆಲ್ಲಾ ಬೆಳಕಾಗಿರುವದು. ನಿನ್ನ ಕಣ್ಣು ಕೆಟ್ಟದ್ದಾಗಿದ್ದರೆ ನಿನ್ನ ದೇಹವೆಲ್ಲಾ ಕತ್ತಲಾಗಿರುವದು." (ಮತ್ತಾಯ 6:22,23) ಎಂದು ನೀನು ಹೇಳಿರುವುದರಿಂದ ನನ್ನ ಕಣ್ಣುಗಳಿಂದ ನಾನು ಮಾಡುತ್ತಿರುವ ತಪ್ಪಿನಿಂದ ನನ್ನನ್ನು ಬಿಡಿಸು. ಕರ್ತನೇ ನನ್ನ ಕಣ್ಣುಗಳು ಅಸಹ್ಯವಾದ ದೃಶ್ಯಗಳನ್ನು ನೋಡಿ-ನೋಡಿ, ಯಾರ್‍ಯಾರನ್ನು ಯಾವ್ಯಾವ ರೀತಿಯಲ್ಲಿ ಪ್ರೀತಿ ಮಾಡಬೇಕೋ ಅರ್ಥವಾಗುತ್ತಿಲ್ಲ. ತಂದೆ-ತಾಯಿಯನ್ನು ಗೌರವಿಸದೇ, ಸತ್ಯ ದೇವರನ್ನು ಮರೆತು ನಡೆಯುವ ಸ್ವಭಾವವು ನನ್ನಲ್ಲಿ ದಿನೇ-ದಿನೇ ಹೆಚ್ಚಾಗುತ್ತಿದೆ. ಮನೆಯವರ ಪ್ರೀತಿ ನನ್ನಿಂದ ದೂರವಾಗಿದೆ.

ಕರ್ತನೇ ನನ್ನ ಕಣ್ಣುಗಳನ್ನು ನಿನ್ನ ನಿಯಂತ್ರಣಕ್ಕೆ ಒಪ್ಪಿಸಿ ಕೊಡುತ್ತಿದ್ದೇನೆ, ದಯವಿಟ್ಟು ನನ್ನ ಕಣ್ಣುಗಳಿಂದ ನೋಡುವ ದೃಶ್ಯಗಳು ನೀನು ಮೆಚ್ಚುವ ರೀತಿಯಲ್ಲೇ ಇರುವ ಹಾಗೆ ಮಾರ್ಪಡಿಸು. ನನ್ನ ಕಣ್ಣುಗಳು ಯಾವ ರೀತಿಯಲ್ಲೂ ಪಾಪದ ಕಾರ್ಯಗಳನ್ನು ನೋಡಬಾರದು ನನ್ನ ಮನಸ್ಸು ಕತ್ತಲಾಗಬಾರದು ಇಂತಹ ಕತ್ತಲೆಯ ಕಾರ್ಯಗಳಿಂದ ನನ್ನನ್ನು ತಪ್ಪಿಸು.

ಯೇಸಪ್ಪಾ ನೀನು ನನಗೋಸ್ಕರ ಭೂಮಿಗೆ ಬರಲು ಒಂದು ಕುಟುಂಬವನ್ನು ಆರಿಸಿಕೊಂಡು ಕನ್ನಿಕೆಯಾದ ಮರಿಯಳ ಗರ್ಭದಲ್ಲಿ ಪವಿತ್ರಾತ್ಮನಿಂದ ಹುಟ್ಟಿ ಬಂದೆ, (ಮತ್ತಾಯ 1:21) 'ಯೇಸು' ಎನ್ನುವ ನಾಮದಿಂದ ನನ್ನ ಹೃದಯವನ್ನು ಕದಲಿಸುವುದಕ್ಕೆ ನೀನು ಬಂದಿದ್ದೀಯಾ ಅಪ್ಪಾ. ನನ್ನನ್ನು ಪಾಪದಿಂದ ಬಿಡಿಸಲು, ಕೆಟ್ಟ ಮಾರ್ಗದಿಂದ ನನ್ನನ್ನು ತಪ್ಪಿಸಿ ಕಾಪಾಡಲು ನೀನು ಭೂಮಿಗೆ ರಕ್ಷಕನಾಗಿ ಬಂದಿರುವುದನ್ನು ಮರೆತು ನನ್ನ ಇಷ್ಟದ ಪ್ರಕಾರ ನಾನು ನಡೆದುಕೊಂಡದ್ದಕ್ಕಾಗಿ ನನ್ನನ್ನು ಕ್ಷಮಿಸು.

ನನ್ನ ತುಟಿಗಳನ್ನು ತೆರೆಯಮಾಡು. ನಿನಗೆ ಯಜ್ಞಗಳಲ್ಲಿ ಅಪೇಕ್ಷೆಯಿಲ್ಲ, ಇದ್ದರೆ ಸಮರ್ಪಿಸೇನು; ಸರ್ವಾಂಗಹೋಮಗಳಲ್ಲಿ ನಿನಗೆ ಸಂತೋಷವಿಲ್ಲ. ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ; ದೇವರೇ, ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ.

ಚಿಯೋನ್ ಪಟ್ಟಣವನ್ನು ಕಟಾಕ್ಷಿಸಿ ಅದಕ್ಕೆ ಶುಭವನ್ನುಂಟುಮಾಡು; ಯೆರೂಸಲೇಮಿನ ಪೌಳಿಗೋಡೆಯನ್ನು ಕಟ್ಟಿಸು. ಜನರು ನ್ಯಾಯವಾದ ಯಜ್ಞಗಳನ್ನೂ ಸರ್ವಾಂಗ ಹೋಮಗಳನ್ನೂ ಸಮರ್ಪಿಸಿ ನಿನಗೆ ಸಂತೋಷವನ್ನುಂಟುಮಾಡುವರು. ನಿನ್ನ ಯಜ್ಞವೇದಿಯ ಮೇಲೆ ಹೋರಿಗಳನ್ನು ಸಮರ್ಪಿಸುವರು." (ಕೀರ್ತನೆ 51; 1-19)

ಯೇಸಪ್ಪಾ ನಾನು ದೊಡ್ಡ ಪಾಪಿಯಾಗಿದ್ದೇನೆ, ತಳ್ಳಲ್ಪಟ್ಟವಳಾ/ನಾ/ಗಿಯೂ, ಯಾರಿಗೂ ಬೇಡವಾದ ವ್ಯಕ್ತಿಯಾಗಿಯೂ ನಿನ್ನ ಬಳಿಗೆ ಬಂದಿದ್ದೇನೆ, ನಾನು ಅನಾಥಳಾ/ನಾ/ಗಿದ್ದೇನೆ. ದಯವಿಟ್ಟು ನನ್ನ ಪ್ರಾರ್ಥನೆಯನ್ನು ಕೇಳು.

ನೀನು ಮನುಷ್ಯರ ಭಯಭಕ್ತಿಗೆ ಪಾತ್ರನಾಗಿರುವುದರಿಂದ ನನ್ನ ಎಲ್ಲಾ ಪಾಪವನ್ನು ಕ್ಷಮಿಸಬೇಕೆಂದು ವಿಜ್ಞಾಪಿಸುತ್ತಿದ್ದೇನೆ. ತಂದೆ-ತಾಯಿ ತನ್ನ ಮಕ್ಕಳಿಗೆ ಬುದ್ಧಿ ಕಲಿಸುವ ಹಾಗೆ ನೀನು ನನಗೆ ಬುದ್ಧಿ ಕಲಿಸಿಕೊಡಬೇಕೆಂದು ಬೇಡುತ್ತಿದ್ದೇನೆ, ನಿನ್ನ ಬಳಿಗೆ ಬರುವ ನನ್ನನ್ನು ಸಂಪೂರ್ಣವಾಗಿ ರಕ್ಷಿಸುತ್ತೀಯಾ ಎಂದು ನಾನು ನಂಬುತ್ತೇನೆ, ಕೈ ಬಿಡದೇ ನನ್ನನ್ನು ರಕ್ಷಿಸು. "ತಂದೆಗಳ ದೋಷ ಫಲವನ್ನು ಅವರ ತರುವಾಯ ಮಕ್ಕಳ ಮಡಿಲಿಗೆ ಹಾಕುವವನೇ" (ಯೆರೆ 32:18) ದಯವಿಟ್ಟು ನನ್ನ ಪಾಪವನ್ನು ಕ್ಷಮಿಸಿ ನನ್ನ ದೋಷವನ್ನೆಲ್ಲಾ ಪರಿಹರಿಸಿ ನನ್ನನ್ನು ಶಿಕ್ಷೆಯಿಂದ ತಪ್ಪಿಸಬೇಕೆಂದು ನನ್ನನ್ನೇ ನಿನ್ನ ಪಾದ ಸನ್ನಿಧಿಯಲ್ಲಿ ತಗ್ಗಿಸಿಕೊಂಡು ಒಪ್ಪಿಸಿಕೊಟ್ಟು ಬೇಡಿಕೊಳ್ಳುತ್ತಿದ್ದೇನೆ. ನನ್ನ ತಂದೆ-ತಾಯಿ ಮುಖಾಂತರ ನನ್ನ ತಲೆಮಾರುಗಳ ಮುಖಾಂತರ ನನ್ನ ಮೇಲೆ ಬಂದಿರುವ ಶಾಪಗಳಿಂದ ನನ್ನನ್ನು ವಿಮುಕ್ತಿಗೊಳಿಸು, ನನ್ನ ಒಡಹುಟ್ಟಿದವರಿಂದ, ನೆರೆಯವರಿಂದ, ಸ್ನೇಹಿತರಿಂದ ಬಂದ ಶಾಪಗಳಿಂದ ಎಲ್ಲಾ ದೋಷಗಳಿಂದ ನನ್ನನ್ನು ಸಂಪೂರ್ಣವಾಗಿ ಬಿಡಿಸಿ ನಿನ್ನ ಪರಿಶುದ್ಧ ರಕ್ತದಿಂದ ತೊಳೆದು ಶುದ್ಧಮಾಡು.

ಯೇಸುವೇ. ನೀನು ನನಗೋಸ್ಕರ ಕಲ್ವಾರಿ-ಶಿಲುಬೆಯಲ್ಲಿ ಬಲಿಯಾದೆ



ಅಪ್ಪಾ ಅದನ್ನು ಮರೆತು ತಂದೆ-ತಾಯಿ ಮಾಡುವ ಮೂಢನಂಬಿಕೆಯ ಸಂಪ್ರದಾಯಕ್ಕೆ ಸಿಲುಕಿ ನನಗೆ ನಾನೇ ಮೋಸಮಾಡಿಕೊಳ್ಳದಂತೆ ನನ್ನನ್ನು ನಿನ್ನ ಅಧೀನಕ್ಕೆ ತೆಗೆದುಕೋ ತಂದೇ. ನೀನೇ ನಿಜವಾದ ದೇವರು ಎಂದು ತಿಳಿದೂ ಸಹಾ ಶರೀರಭಾವದ ಕರ್ಮಗಳಿಗೆ ಒಳಗಾಗಿ ನಿನ್ನನ್ನು ಮರೆತು ಬಾಳದಂತೆ ನಿನ್ನ ಎಲ್ಲಾ ಆಜ್ಞೆಗಳನ್ನು ಗೌರವಿಸಿ ಅದರ ಪ್ರಕಾರ ನಾನು ನಡೆಯಲು ಸಹಾಯಮಾಡಬೇಕೆಂದು ವಿಜ್ಞಾಪಿಸುತ್ತಿದ್ದೇನೆ.

"ಕಣ್ಣು ದೇಹಕ್ಕೆ ದೀಪವಾಗಿದೆ; ಹೀಗಿರುವಲ್ಲಿ ನಿನ್ನ ಕಣ್ಣು ನೆಟ್ಟಗಿದ್ದರೆ ನಿನ್ನ ದೇಹವೆಲ್ಲಾ ಬೆಳಕಾಗಿರುವದು. ನಿನ್ನ ಕಣ್ಣು ಕೆಟ್ಟದ್ದಾಗಿದ್ದರೆ ನಿನ್ನ ದೇಹವೆಲ್ಲಾ ಕತ್ತಲಾಗಿರುವದು." (ಮತ್ತಾಯ 6:22,23) ಎಂದು ನೀನು ಹೇಳಿರುವುದರಿಂದ ನನ್ನ ಕಣ್ಣುಗಳಿಂದ ನಾನು ಮಾಡುತ್ತಿರುವ ತಪ್ಪಿನಿಂದ ನನ್ನನ್ನು ಬಿಡಿಸು. ಕರ್ತನೇ ನನ್ನ ಕಣ್ಣುಗಳು ಅಸಹ್ಯವಾದ ದೃಶ್ಯಗಳನ್ನು ನೋಡಿ-ನೋಡಿ, ಯಾರ್ಯಾರನ್ನು ಯಾವ್ಯಾವ ರೀತಿಯಲ್ಲಿ ಪ್ರೀತಿ ಮಾಡಬೇಕೋ ಅರ್ಥವಾಗುತ್ತಿಲ್ಲ. ತಂದೆ-ತಾಯಿಯನ್ನು ಗೌರವಿಸದೇ, ಸತ್ಯ ದೇವರನ್ನು ಮರೆತು ನಡೆಯುವ ಸ್ವಭಾವವು ನನ್ನಲ್ಲಿ ದಿನೇ-ದಿನೇ ಹೆಚ್ಚಾಗುತ್ತಿದೆ. ಮನೆಯವರ ಪ್ರೀತಿ ನನ್ನಿಂದ ದೂರವಾಗಿದೆ.

ಕರ್ತನೇ ನನ್ನ ಕಣ್ಣುಗಳನ್ನು ನಿನ್ನ ನಿಯಂತ್ರಣಕ್ಕೆ ಒಪ್ಪಿಸಿ ಕೊಡುತ್ತಿದ್ದೇನೆ, ದಯವಿಟ್ಟು ನನ್ನ ಕಣ್ಣುಗಳಿಂದ ನೋಡುವ ದೃಶ್ಯಗಳು ನೀನು ಮೆಚ್ಚುವ ರೀತಿಯಲ್ಲೇ ಇರುವ ಹಾಗೆ ಮಾರ್ಪಡಿಸು. ನನ್ನ ಕಣ್ಣುಗಳು ಯಾವ ರೀತಿಯಲ್ಲೂ ಪಾಪದ ಕಾರ್ಯಗಳನ್ನು ನೋಡಬಾರದು ನನ್ನ ಮನಸ್ಸು ಕತ್ತಲಾಗಬಾರದು ಇಂತಹ ಕತ್ತಲೆಯ ಕಾರ್ಯಗಳಿಂದ ನನ್ನನ್ನು ತಪ್ಪಿಸು.

ಯೇಸಪ್ಪಾ ನೀನು ನನಗೋಸ್ಕರ ಭೂಮಿಗೆ ಬರಲು ಒಂದು ಕುಟುಂಬವನ್ನು ಆರಿಸಿಕೊಂಡು ಕನ್ನಿಕೆಯಾದ ಮರಿಯಳ ಗರ್ಭದಲ್ಲಿ ಪವಿತ್ರಾತ್ಮನಿಂದ ಹುಟ್ಟಿ ಬಂದೆ, (ಮತ್ತಾಯ 1:21) 'ಯೇಸು' ಎನ್ನುವ ನಾಮದಿಂದ ನನ್ನ ಹೃದಯವನ್ನು ಕದಲಿಸುವುದಕ್ಕೆ ನೀನು ಬಂದಿದ್ದೀಯಾ ಅಪ್ಪಾ. ನನ್ನನ್ನು ಪಾಪದಿಂದ ಬಿಡಿಸಲು, ಕೆಟ್ಟ ಮಾರ್ಗದಿಂದ ನನ್ನನ್ನು ತಪ್ಪಿಸಿ ಕಾಪಾಡಲು ನೀನು ಭೂಮಿಗೆ ರಕ್ಷಕನಾಗಿ ಬಂದಿರುವುದನ್ನು ಮರೆತು ನನ್ನ ಇಷ್ಟದ ಪ್ರಕಾರ ನಾನು ನಡೆದುಕೊಂಡದ್ದಕ್ಕಾಗಿ ನನ್ನನ್ನು ಕ್ಷಮಿಸು.

ನನ್ನ ಎಲ್ಲಾ ಮಾರ್ಗದಲ್ಲಿ ನೀನು ಯಾವಾಗಲೂ ಇದ್ದು ನನ್ನನ್ನು ಗಮನಿಸುತ್ತಿದ್ದೀಯಾ ಎನ್ನುವ ಭಯ ನನಗೆ ಯಾವಾಗಲೂ ಇರಲಿ. ಸ್ನಾನಿಕನಾದ ಯೋಹಾನನ ಮುಖಾಂತರ "ಎಲೈ ಸರ್ಪಜಾತಿಯವರೇ, ಮುಂದೆ ಕಾಣಬರುವ ದೈವಕೋಪದಿಂದ ತಪ್ಪಿಸಿ ಕೊಳ್ಳುವದಕ್ಕೆ ನಿಮಗೆ ಉಪದೇಶ ಮಾಡಿದವರಾರು? ಹಾಗಾದರೆ ನಿಮ್ಮ ಮನಸ್ಸನ್ನು ದೇವರ ಕಡೆಗೆ ತಿರುಗಿತೆಂಬದನ್ನು ತಕ್ಕ ಫಲದಿಂದ ತೋರಿಸಿರಿ"(ಮತ್ತಾಯ 3:7,8) ಎಂದು ಮಾತನಾಡಿಸಿರುವುದರಿಂದ ನನ್ನ ಮುಂದಿನ ಸಕಲ ಕಾರ್ಯಗಳಲ್ಲಿ ನಾನು ನಿನ್ನ ಮಗಳೆಂ/ನೆಂ/ದು ಕಂಡುಬರುವ ರೀತಿಯಲ್ಲಿ ನಡೆದುಕೊಳ್ಳುವುದಕ್ಕೆ ಸಹಾಯಮಾಡು.

ಅಪ್ಪಾ ನನ್ನ ಸಕಲ ಪಾಪವನ್ನು ನಿನ್ನ ರಕ್ತದಿಂದ ತೊಳೆದು ಶುದ್ಧೀಕರಿಸಿ ನನ್ನನ್ನು ನೂತನ ಪಡಿಸು. ನಾನು ಇಷ್ಟು ದಿನ ನಡೆಸುತ್ತಿದ್ದಂತಹ ಎಲ್ಲಾ ಮೂಢ ಸಂಪ್ರದಾಯದಿಂದ ಹೊರಬಂದು ನಿನ್ನ ಮಾರ್ಗದಲ್ಲಿ ಜೀವಿಸುವುದಕ್ಕೆ ಸಹಾಯಮಾಡು, ನಿನ್ನ ಕೋಪಕ್ಕೆ ನಾನು ಗುರಿಯಾಗದಂತೆ, ನಿನ್ನ ಪ್ರೀತಿಗೆ ಪಾತ್ರಳಾ/ನಾ/ಗಲು ಸಹಾಯಮಾಡು. ನಿನ್ನ ಪ್ರೀತಿ ಸತ್ಯತೆಗಳ ನಿಮಿತ್ತವಾಗಿ ನಿನ್ನ ಹೆಸರನ್ನೇ ಘನಪಡಿಸುತ್ತಾ ನಿನ್ನ ಚಿತ್ತದ ಪ್ರಕಾರವಾಗಿ ನಡೆಯಲು ಸಹಾಯಮಾಡು.

ನನ್ನನ್ನು ದೂರದಿಂದಲೇ ಬಲ್ಲವನಾಗಿದ್ದೀ; ನಾನು ಕೂತುಕೊಳ್ಳುವುದೂ ಏಳುವುದೂ ನಿನಗೆ ಗೊತ್ತದೆ; ನನ್ನ ಎಲ್ಲಾ ಆಲೋಚನೆಗಳನ್ನು ನೀನು ಬಲ್ಲವನಾಗಿರುತ್ತೀ, ನಾನು ನಡೆಯುವುದನ್ನೂ ಮಲಗುವುದನ್ನೂ ಶೋಧಿಸಿ ಗ್ರಹಿಸಿಕೊಳ್ಳುತ್ತೀ; ನನ್ನ ನಡತೆಯೆಲ್ಲಾ ನಿನಗೆ ಗೋಚರವಾಗಿದೆ; ನನ್ನ ನಾಲಗೆಯ ಮಾತುಗಳಲ್ಲಿ ನೀನು ಅರಿಯದೆ ಇರುವಂಥದು ಒಂದೂ ಇಲ್ಲ. ಎಲ್ಲಾ ತರಹದ ಮೂಢನಂಬಿಕೆಯಿಂದ ನನ್ನನ್ನು ನನ್ನ ಕುಟುಂಬವನ್ನು ಬಿಡಿಸಿ ರಕ್ಷಿಸು.

"ನಿಮ್ಮ ಪಾಪಗಳು ಕಡುಕೆಂಪಾಗಿದ್ದರೂ ಹಿಮದ ಹಾಗೆ ಬಿಳುಪಾಗುವವು" ಎಂದು ಯೆಶಾಯ1:18 ರಲ್ಲಿ ಹೇಳಿದ ಪ್ರಕಾರ ನನ್ನನ್ನು ಶುದ್ಧಮಾಡು ಯೇಸಪ್ಪಾ. ನಿನಗೆ ವಿರುದ್ಧವಾದ ಯಾವುದೇ ಪಾಪ ನಾನು ಇನ್ನು ಮುಂದೆ ಎಂದಿಗೂ ಮಾಡದಂತೆ ನನ್ನನ್ನು ತಡೆದು ರಕ್ಷಿಸು. ಅಪ್ಪಾ ನಾನು ನನ್ನ



ಜೀವನದಲ್ಲಿ ಮಾಡಿರುವಂತಹ ಎಲ್ಲಾ ಪಾಪಗಳನ್ನು ನೆನಪಿಸಿಕೊಂಡರೆ ಅವೆಲ್ಲಾ ಎಷ್ಟೋ ಘೋರವಾಗಿ ಕಂಡುಬರುತ್ತಿದೆ, ನೀನು ಮಾಡಬೇಡವೆಂದು ಹೇಳಿರುವ ಕೆಲಸವನ್ನೇ ನಾನು ಮಾಡಿ ಶಾಪಕ್ಕೆ ಒಳಗಾಗಿದ್ದೇನೆ. ನನ್ನ ಕುಟುಂಬವು ಶಾಪಕ್ಕೆ, ರೋಗಕ್ಕೆ ಒಳಗಾಗಿದೆ ದಯವಿಟ್ಟು ನನ್ನನ್ನು ಇಂತಹ ತಪ್ಪುಗಳಿಂದ ಬಿಡಿಸು. ನಿನ್ನ ಧರ್ಮದ ಬಲಗೈಯಿಂದಲೇ ನನ್ನನ್ನು ರಕ್ಷಿಸು. ನನ್ನ ಮನವು ಬಲಹೊಂದಿಕೊಳ್ಳಲು ಸಹಾಯಮಾಡು. ನಿನ್ನ ಮಾತುಗಳಲ್ಲಿ ನಾನು ನನ್ನ ಮನೆಯವರು ಭರವಸೆಯಿಂದಿರಲು ಸಹಾಯಮಾಡು.

ನಿನ್ನ ಕೈಗಳು ನನ್ನನ್ನು ರೂಪಿಸಿ ನಿಲ್ಲಿಸಿದವು. ನಾನು ಪೂರ್ಣ ಮನಸ್ಸಿನಿಂದ ನಿನ್ನ ದಯೆಯನ್ನು ಅಪೇಕ್ಷಿಸಿದ್ದೇನೆ; ನಿನ್ನ ನುಡಿಗನುಸಾರವಾಗಿ ನನ್ನನ್ನು ನಡೆಸು. ಪಾಪದ ಪಾಲಿಗೆ ಸಿಲುಕಿ ಹೋಗಿದ್ದೇನೆ, ಲೋಕದ ಆಶಾ-ಪಾಶಗಳು ನನ್ನನ್ನು ಮುತ್ತಿಕೊಂಡಿದೆ ನಿನಗೆ ವಿರುದ್ಧವಾದ ಮಾರ್ಗದಲ್ಲಿದ್ದೇನೆ. ನನಗೆ ನಾನೇ ಮೋಸಮಾಡಿಕೊಂಡು ನನ್ನ ಶರೀರದಲ್ಲಿ ಅಡಕವಾಗಿರುವ ಆತ್ಮವನ್ನು ನನಗೆ ತಿಳಿಯದ ಹಾಗೆ ಹಾಳುಮಾಡಿಕೊಳ್ಳುತ್ತಿದ್ದೇನೆ. ಮಣ್ಣಿಗೆ-ಮಣ್ಣಾಗುವ ಈ ದೇಹದ ಆಶೆಗೆ ಒಳಗಾಗಿ ನಿಷ್ಪ್ರಯೋಜನವಾದ ಕಾರ್ಯಗಳನ್ನು ನಾನು ಮಾಡುತ್ತಿದ್ದೇನೆ ಗಲಾತ್ಯ 5:19 ರಲ್ಲಿ ಹೇಳುವ ಪ್ರಕಾರ- ಜಾರತ್ವ, ಬಂಡುತನ, ನಾಚಿಕೆಗೇಡಿತನ, ವಿಗ್ರಹಾರಾಧನೆ, ಮಾಟ, ಹಗೆತನ, ಜಗಳ, ಹೊಟ್ಟೆಕಿಚ್ಚು, ಸಿಟ್ಟು, ಕಕ್ಷಭೇದ, ಭಿನ್ನಮತ, ಮತ್ಸರ, ಕುಡಿಕತನ, ದುಂದೌತನ, ಇಂಥವುಗಳು ನನ್ನನ್ನು ನಾಶನಕ್ಕೆ ಎಳೆಯುತ್ತಿದೆ. ಇದರಿಂದ ನನ್ನನ್ನು ಬಿಡಿಸು ಯೇಸಪ್ಪಾ ಈ ಪಾಪಗಳು ನನ್ನ ಆತ್ಮವನ್ನು ಆಳಬಾರದು ಇದರಿಂದ ನನ್ನನ್ನು ವಿಮುಕ್ತಿಗೊಳಿಸು. ನಾನು ಮನೆಯಲ್ಲಿ, ಸ್ನೇಹಿತರ ಮಧ್ಯದಲ್ಲಿ ಸುಳ್ಳಾಡುತ್ತಿದ್ದೇನೆ. ಕೆಲಸ ಕಾರ್ಯದಲ್ಲಿ ನಾನು ಹಣ ಸಂಪಾದಿಸುವುದಕೋಸ್ಕರ ಮೋಸ ಮಾಡುತ್ತಿದ್ದೇನೆ. ಮನೆಯಲ್ಲಿ ಪ್ರೀತಿ ತೋರಿಸಿದರೂ ನಾನು ಅವರೊಟ್ಟಿಗೆ ಜಗಳ ಮಾಡುತ್ತಾ ಕಕ್ಷಬೇಧ ಮಾಡುತ್ತಿದ್ದೇನೆ. ಸ್ನೇಹಿತರೊಟ್ಟಿಗೆ ಸೇರಿ ಇಷ್ಟ ಬಂದಹಾಗೆಲ್ಲಾ ನಡೆಯುತ್ತಾ ತಂದೆ-ತಾಯಿಯನ್ನು ಮೋಸ ಮಾಡುತ್ತಿದ್ದೇನೆ. ಕುಡಿದು ಅಮಲೇರಿ ನನ್ನನ್ನೇ ನಾನು ಮರೆತು ನೀಚವಾದ ಕಾರ್ಯಗಳನ್ನು ಮಾಡಿದ್ದೇನೆ. ಇಂತಹ ಕಾರ್ಯಗಳನ್ನು ಮಾಡಿದ್ದಕ್ಕಾಗಿ ನನ್ನನ್ನು ಕ್ಷಮಿಸು ತಂದೆ.

"ಹೊರಗಿನಿಂದ ಮನುಷ್ಯನೊಳಕ್ಕೆ ಹೋಗಿ ಅವನನ್ನು ಹೊಲಡಮಾಡತಕ್ಕಂಥದು ಒಂದೂ ಇಲ್ಲ; ಆದರೆ ಮನುಷ್ಯನೊಳಗಿಂದ ಹೊರಡುವಂಥವುಗಳೇ ಮನುಷ್ಯನನ್ನು ಹೊಲೆ ಮಾಡುವಂಥವುಗಳಾಗಿವೆ" ಎಂದು ಮಾರ್ಕ 7:15,16 ರಲ್ಲಿ ತಿಳಿಸಿದ ಪ್ರಕಾರ ನಾನು ಕಣ್ಣುಗಳಿಂದ ನೋಡಿದ ದೃಶ್ಯಗಳು ನನ್ನ ಮನಸ್ಸು ಮೋಹಿಸಿ ಆಳವಾದ ಗುಂಡಿಗೆ ನನ್ನನ್ನು ಬೀಳಿಸಿದೆ ಅಪ್ಪಾ, ನೀನು ಬೋಧಕರ ಮುಖಾಂತರ ನನ್ನ ತಪ್ಪುಗಳನ್ನೆಲ್ಲಾ ತಿಳಿಸುವಾಗ ಅದನ್ನು ತಾತ್ಸಾರ ಮಾಡಿ, ದ್ರೋಹದಿಂದ ನನಗೇ ಜ್ಞಾನ ಇರುವುದು ಎಲ್ಲವೂ ನನಗೆ ತಿಳಿದಿದೆ ಎನ್ನುವ ಅಹಂಕಾರದಿಂದ ಎಷ್ಟೋ ಭಾರಿ ನಡೆದಿದ್ದೇನೆ, ಕಳ್ಳತನ ಮಾಡುತ್ತಾ, ಮತ್ತೊಬ್ಬರ ಮನಸ್ಸನ್ನು ನೋವು ಮಾಡಿ ದ್ರವ್ಯಾಶೆ ಕೆಡುಕುತನದ ಆಲೋಚನೆಗೆ ಒಳಗಾಗಿ ಸೊಕ್ಕಿನಿಂದಲೂ ಬುದ್ಧಿಗೇಡಿತನವಾಗಿಯೂ ನಡೆಯುತ್ತಿದ್ದೇನೆ. ನಿನ್ನ ಮಾತಿಗೂ ಕಿವಿಕೊಡದೇ ನನ್ನ ಇಷ್ಟ ಬಂದ ರೀತಿಯಲ್ಲಿ ಎಲ್ಲಾ ಪಾಪಗಳನ್ನು ಮಾಡುತ್ತಾ ಜೀವಿಸುತ್ತಿದ್ದೇನೆ. ಯೇಸಪ್ಪಾ ನನ್ನ ತಪ್ಪುಗಳನ್ನೆಲ್ಲಾ ನೆನಪಿಸಿಕೊಂಡರೆ ಅವೆಲ್ಲಾ ಎಷ್ಟೋ ಘೋರವಾಗಿದೆ ದಯವಿಟ್ಟು ನನ್ನನ್ನು ರಕ್ಷಿಸು. ಈ ಎಲ್ಲಾ ಪಾಪಗಳಿಂದ ನನಗೆ ಬಿಡುಗಡೆಮಾಡಿ ನೂತನವಾದ ಪರಿಶುದ್ಧ ಜೀವನವನ್ನು ನಡೆಸಲು ಸಹಾಯ ಮಾಡು.

"ಎಲ್ಲೈ ಕಷ್ಟ ಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಯನ್ನು ಕೊಡುವೆನು. ಎಂದು ಮತ್ತಾಯ 11:28 ರಲ್ಲಿ ಹೇಳಿರುವ ಪ್ರಕಾರ ನನ್ನ ಪಾಪಗಳನ್ನು ನನ್ನಿಂದ ತೊಲಗಿಸು. ನಿನ್ನ ಮಗಳಾ/ನಾ/ಗಿ ಅಂಗೀಕರಿಸಿಕೋ ಅಪ್ಪ. ನಾನು ಪಾಪಿಯೆಂದು ನಾನೇ ಒಪ್ಪಿಕೊಂಡಿದ್ದೇನೆ. "ನಾನು ನೀತಿವಂತರನ್ನು ಕರೆಯುವುದಕ್ಕೆ ಬಂದವನಲ್ಲ. ಪಾಪಿಗಳನ್ನು ಕರೆಯುವುದಕ್ಕೆ ಬಂದಿದ್ದೇನೆ"(ಮತ್ತಾಯ 9:13) ಎಂದು ಹೇಳಿದ ದೇವರೇ ನಾನು ನಿಜವಾಗಿ ಒಪ್ಪಿಕೊಳ್ಳುತ್ತಿದ್ದೇನೆ ನೀನೇ ನನ್ನ ಸೃಷ್ಟಿಕರ್ತನೆಂದು ನಂಬಿದ್ದೇನೆ. ಪಾಪಿಯಾದ ನನ್ನನ್ನು ಕೈ ಬಿಡಬೇಡ ನನ್ನನ್ನು ನಿನ್ನ ಮಗುವಾಗಿ ಅಂಗೀಕರಿಸಿಕೋ. ಅಪ್ಪಾ ನನ್ನ ಕಣ್ಣಿನಲ್ಲಿರುವ ತೊಲೆಯನ್ನು ತೆಗೆದುಹಾಕಿಕೊಳ್ಳಲು; ಹೃದಯದಲ್ಲಿ ಇರುವ ನೀಚಕಾರ್ಯಗಳು ನನ್ನಿಂದ ಬಿಟ್ಟುಹೋಗಲು, ನನಗೆ ಸಹಾಯ ಮಾಡಬೇಕೆಂದು ಬೇಡಿಕೊಳ್ಳುತ್ತಿದ್ದೇನೆ.



"ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವೂ ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ" ಎಂದು ಮತ್ತಾ 28:19,20 ವಾಕ್ಯದ ಪ್ರಕಾರ ನೀನು ನನ್ನ ಬಳಿಗೆ ನಿನ್ನ ಸೇವಕರನ್ನು ಕಳುಹಿಸಿದಕ್ಕಾಗಿ ಸ್ತೋತ್ರ. ಘೋರವಾದ ಪಾಪದಿಂದ ಬಿಡಿಸಲು ನೀನು ಶಿಲುಬೆಯಲ್ಲಿ ಯಜ್ಞವಾಗಿ ಆ ರಕ್ತದಿಂದ ನನ್ನ ಪಾಪವನ್ನು ತೊಳೆದದ್ದಕ್ಕಾಗಿ ಸ್ತೋತ್ರ. ನೂತನ ಮನಸ್ಸನ್ನು ಹೊಂದಿಕೊಂಡು ನಿನ್ನಲ್ಲಿ ಒಡಂಬಡಿಕೆಯಾಗಲು ನೀರಿನೊಳಗೆ ದೀಕ್ಷಾಸ್ನಾನವನ್ನು ತೆಗೆದುಕೊಳ್ಳಬೇಕೆಂಬ ನಿರ್ಬಂಧವನ್ನು ನೀನು ಮಾಡಿದ್ದಕ್ಕಾಗಿ ನಿನಗೆ ಸ್ತೋತ್ರ. ಜೀವಬಾಧ್ಯರ ಪಟ್ಟಿಯಲ್ಲಿ ನನ್ನ ಹೆಸರನ್ನು ಬರೆದಿರುವುದಕ್ಕಾಗಿ ನಿನಗೆ ಸ್ತೋತ್ರ ತಂದೆ. ನಾನು ಮತ್ತೇ ಯಾವ ಪಾಪದಲ್ಲಿಯೂ ಬೀಳದಂತೆ, ಮನುಷ್ಯನು ಮಾಡುವ ಯಾವ ನಿಯಮ-ನಿಷ್ಠೆಗಳಿಗೆ ಒಳಗಾಗದಂತೆ, ಸಂಪ್ರದಾಯ ಕಾರ್ಯಗಳಲ್ಲಿ ಸೇರದಂತೆ ನನ್ನನ್ನು ಕಾಪಾಡು ಯೇಸಪ್ಪಾ ನಾನು ದುಷ್ಟರ ಆಲೋಚನೆಯಂತೆ ನಡೆಯದೆ, ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ, ಧರ್ಮನಿಂದಕರೊಡನೆ ಕೂತುಕೊಳ್ಳದೆ ಧರ್ಮಶಾಸ್ತ್ರದಲ್ಲಿ ಆನಂದ ಪಡುತ್ತಾ ಅದನ್ನೇ ಉಸಿರಿರುವವರೆಗೂ ನನ್ನ ಮನಸ್ಸಿನಲ್ಲಿ ಧ್ಯಾನಮಾಡುವುದಕ್ಕೆ ಸಹಾಯಮಾಡು(ಕೀರ್ತ 1:1,2)

ಯಾರಿಗೂ ನಾನು ಅನ್ಯಾಯ ಮಾಡಬಾರದು. ನಿನ್ನ ವಾಕ್ಯ ಹೇಳುವ ಪ್ರಕಾರ ನಾನು ನಡೆಯಬೇಕು. ನೀರಿನ ಕಾಲುವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗೇ ನಾನು ಒಳ್ಳೇ ಮರವಾಗಿ ನಿನ್ನಲ್ಲಿ ಬೆಳೆಯಬೇಕು. ತಕ್ಕ ಕಾಲಕ್ಕೆ ಒಳ್ಳೇ ಫಲವನ್ನು ಕೊಡುವಾಗ(ಕೀರ್ತ1:3) ನೀನು ನನ್ನನ್ನು ಮೆಚ್ಚಿ ಭಲಾ ನಂಬಿಗಸ್ಥ ಆಳೇ ಎಂದು ಹೇಳುವ ರೀತಿಯಲ್ಲಿ ನಾನು ಮಾರ್ಪಡಬೇಕು. ಯೇಸಪ್ಪಾ ನಾನು ಯಾವಾಗಲೂ ಭಯ-ಭಕ್ತಿಯಿಂದ ನಿನ್ನೊಂದಿಗೆ ಇರಬೇಕು. ಅನ್ಯಜನರು ನಿನಗೆ ವಿರುದ್ಧವಾಗಿ ಮಾತಾಡುತ್ತಾ ದೊಂಬಿ ಮಾಡಿದರೂ ನಾನು ಆ ರೀತಿ ಮಾತನಾಡದಂತೆ ನಿನ್ನಲ್ಲಿ ಸ್ಥಿರವಾಗಿ ನಿಲ್ಲುವಂತೆ

ಸಹಾಯ ಮಾಡು.

"ಭಯಪಡಿರಿ, ಪಾಪ ಮಾಡಬೇಡಿರಿ, ಮೌನವಾಗಿರಿ; ಹಾಸಿಗೆಯ ಮೇಲೆ ಇರುವಾಗ ಹೃದಯದಲ್ಲೇ ಆಲೋಚಿಸಿಕೊಳ್ಳಿರಿ. ನ್ಯಾಯವಾದ ಯಜ್ಞಗಳನ್ನು ಸಮರ್ಪಿಸಿರಿ; ಕರ್ತನಲ್ಲಿಯೇ ಭರವಸವಿಡಿರಿ ಎಂದು ಕೀರ್ತ 4:4,5 ರಲ್ಲಿ ಹೇಳುವ ಪ್ರಕಾರ ನಾನು ಯಾವುದೇ ಪಾಪ ಮಾಡದಂತೆ ನಿನ್ನಲ್ಲಿ ಭಯಪಡುತ್ತಾ ನನ್ನ ಆಲೋಚನೆಯಲ್ಲೂ ಶುದ್ಧವಾಗಿ ಕಾಣುವಂತೆ ಸಹಾಯಮಾಡು, ಯಾವುದೇ ಕಾರಣಕ್ಕೂ ನಿನಗೆ ವಿರುದ್ಧವಾಗಿ ನಾನು ಇನ್ನು ಮುಂದೆ ಪಾಪ ಮಾಡಬಾರದು. ನೀನು ನ್ಯಾಯವನ್ನು ಸ್ಥಾಪಿಸುವ ದೇವರಾಗಿದ್ದೀ; ನಿನ್ನಲ್ಲಿ ನಾನು ನೆಲೆಗೊಂಡು ನ್ಯಾಯವಾದ ಕಾರ್ಯಗಳನ್ನು ಮಾಡುವುದಕ್ಕೆ ಸಹಾಯಮಾಡು, ಕೈ ಬಿಡದೇ ನನ್ನನ್ನು ನಡೆಸು. ನೀನು ಯಾವ ದುಷ್ಟತ್ವದಲ್ಲಿ ಸಂತೋಷಿಸುವ ದೇವರಲ್ಲ; ಯಾವುದೇ ಕೆಟ್ಟ ಪಾಪ ಕಾರ್ಯಗಳು ನಿನ್ನ ಬಳಿಯಲ್ಲಿ ತಂಗಲಾರದು. ಅದಕ್ಕಾಗಿ ನಿನ್ನನ್ನು ನಾನು ಕೊಂಡಾಡುತ್ತಾ ಪರಿಶುದ್ಧವಾಗಿರಲು ಕಲಿಸಿಕೊಡು. ಪಾಪ ಮಾಡಿ ನಿನ್ನಿಂದ ದೂರವಾಗದಂತೆ ನನ್ನನ್ನು ನಾನು ನಿನ್ನ ವಾಕ್ಯದಲ್ಲಿ ಭದ್ರಪಡಿಸಿಕೊಳ್ಳಲು ಸಹಾಯಮಾಡು.

ಭೂಮಿಯಲ್ಲಿ ಇರುವ ಪ್ರತಿಯೊಂದು ವಸ್ತುಗಳು ಶಾಶ್ವತವಲ್ಲಾ ಎಂದು ಅರ್ಥಮಾಡಿಸಿದ್ದೀಯಾ, ಎಷ್ಟೇ ಅದನ್ನು ಮುಚ್ಚಿಟ್ಟ ಕಾಪಾಡಿಕೊಂಡರೂ ಎಲ್ಲವೂ ತುಕ್ಕು ಹಿಡಿದು ನಾಶವಾಗುತ್ತದೆ. ಭೂಮಿಯಲ್ಲಿ ಕಾಣುವ ಸುಂದರವಾದ ವಸ್ತುಗಳು, ಆಭರಣಗಳು ಸ್ತ್ರೀ-ಪುರುಷರು-ಹಣ, ಎಲ್ಲವೂ ಕಣ್ಣು ನೋಡಿ-ನೋಡಿ ತೃಪ್ತಿಗೊಳ್ಳದು ಕಿವಿಯು ಕೇಳಿ-ಕೇಳಿ ದಣಿಯದು. ಇದ್ದದ್ದೇ ಇರುವುದು ನಡೆದದ್ದೇ ನಡೆಯುವುದು, ಲೋಕದಲ್ಲಿ ಹೊಸದೇನೂ ಇಲ್ಲ. ಇಗೋ, ಹೊಸದು ಎನಿಸಿಕೊಳ್ಳುವ ವಸ್ತುವಿದ್ದರೂ ಅದು ಪೂರ್ವದಲ್ಲಿ ನಮಗಿಂತ ಮುಂಚಿನ ಯುಗಗಳಲ್ಲಿಯೂ ಇದ್ದದ್ದೇ, ಎಂದು ನೀನು ತಿಳಿಸಿರುವುದಕ್ಕಾಗಿ ನಾನು ನಿನ್ನಲ್ಲಿ ಭದ್ರವಾಗಿ ನಿಂತು ಯಾವುದಕ್ಕೂ ಅಂಜದೆ ಯಾವುದಕ್ಕೂ ಬಿದ್ದುಹೋಗದೇ ಯಾವಾಗಲೂ ನಿನ್ನ ಜೊತೆಯಲ್ಲಿ ನೆಲೆಯಾಗಿ ನಿಲ್ಲಲು ಸಹಾಯಮಾಡು. ನೀನು ಪಟ್ಟ ಪ್ರಯಾಸವನ್ನೂ ನನ್ನ ಎಲ್ಲಾ ಕೆಲಸಗಳಲ್ಲಿಯೂ ನಾನು ಪಟ್ಟ ಪ್ರಯಾಸವನ್ನೂ ಹೋಲಿಸಿ ದೃಷ್ಟಿಯಿಟ್ಟೆನು! ನಿನ್ನ ಕಲ್ವಾರಿ



ತ್ಯಾಗವನ್ನು ಧ್ಯಾನಿಸುವಾಗ ನಾನು ಪಟ್ಟ ಪ್ರಯಾಸವಂತೂ ವ್ಯರ್ಥ ಎಂದು ತಿಳಿದುಕೊಂಡೆನು. ಬೆಳಕು ಕತ್ತಲಿಗಿಂತ ಶ್ರೇಷ್ಠವಾಗಿದೆ ನಾನು ಪಟ್ಟ ಪ್ರಯಾಸವು ಕತ್ತಲಾಗಿದೆ, ನೀನಾದರೋ ಎಲ್ಲವನ್ನು ಎಲ್ಲರೂ ಕಾಣುವಂತೆ ಬೆಳಕಿನಲ್ಲಿಯೇ ಮಾಡಿದ್ದೀಯಾ. ಆದ್ದರಿಂದ ನಾನು ಬೆಳಕಿನಲ್ಲಿಯೇ ಜೀವಿಸಬೇಕು. ನನ್ನ ಎಲ್ಲಾ ಕಾರ್ಯಗಳು ಬೆಳಕಿನ ರೀತಿಯಲ್ಲೇ ಕಾಣಬೇಕು ಎಂದು ತೀರ್ಮಾನಿಸಿ ನಿನ್ನನ್ನು ನನ್ನ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿ ಕೊಂಡಿದ್ದೇನೆ. ನಿನ್ನನ್ನು ಬಿಟ್ಟು ನಾನು ಪಡುವ ಪ್ರಯಾಸದಿಂದ ಏನೂ ಲಾಭವಿಲ್ಲ? ಎಲ್ಲಾ ಕೆಲಸವು ತೊಂದರೆಯೇ. ರಾತ್ರಿಯಲ್ಲೂ ಮನಸ್ಸಿಗೆ ನೆಮ್ಮದಿಯಿಲ್ಲ ಹಾಗಾಗಿ ಎಲ್ಲಾ ನನ್ನ ಮಿತ್ಯಾಮಾರ್ಗವನ್ನೆಲ್ಲಾ ಹರೆ ಮಾಡಿ ನಿನ್ನ ಆಲೋಚನೆ ಪ್ರಕಾರವಾಗಿ ನಡೆಯಲು ತೀರ್ಮಾನಿಸಿದ್ದೇನೆ. ಯಾಕೆಂದರೆ ಪ್ರತಿಯೊಂದು ಕಾರ್ಯಕ್ಕೂ ಕಾಲವು ಕ್ಲುಪ್ತವಾಗಿದೆ ಎಂದು ನೀನು ನನಗೆ ಅರ್ಥಮಾಡಿಸಿದ್ದೀಯಾ.

ಯೇಸಪ್ಪಾ ನಿನ್ನ ಮಾತುಗಳೆಲ್ಲವೂ ಸತ್ಯವೆಂದು ಬಲ್ಲೆನು; ಅದಕ್ಕೆ ಯಾವುದನ್ನೂ ಸೇರಿಸಲಾರೆನು; ಅದರಿಂದ ಯಾವುದನ್ನೂ ತೆಗೆಯಲಾರೆನು. ಯಾಕೆಂದರೆ ನಿನ್ನ ನಿಯಮಕ್ಕೆ ನಾನು ಯಾವಾಗಲೂ ಭಯ-ಭಕ್ತಿಯುಳ್ಳವಳಾಗಿ/ನಾಗಿ ನಡೆದುಕೊಳ್ಳಲೇ ಬೇಕು ಎನ್ನುವ ನಿರ್ಬಂದ ನನಗಿದೆ. ಆದ್ದರಿಂದ ಮನುಷ್ಯನು ತಮ್ಮ ಜೀವ-ಮಾನದಲ್ಲೆಲ್ಲಾ ಉಲ್ಲಾಸವಾಗಿ ಸುಖವನ್ನನುಭವಿಸುವದಕ್ಕಿಂತ ಇನ್ನೇನೂ ಅವನಿಗೆ ಮೇಲಲ್ಲವೆಂದು ನಾನು ಗ್ರಹಿಸಿದ್ದೇನೆ. ಪ್ರಸಂಗಿ 7:1-2 ರಲ್ಲಿ "ಸುಗಂಧತೈಲಕ್ಕಿಂತ ಒಳ್ಳೆಯ ಹೆಸರು ಉತ್ತಮ: ಜನನದಿನಕ್ಕಿಂತ ಮರಣದಿನ ಮೇಲು, ಔತಣದ ಮನೆಗಿಂತ ಮರಣ ದುಃಖದ ಮನೆಗೆ ಹೋಗುವುದು ಲೇಸು; ಎಲ್ಲಾ ಮನುಷ್ಯರಿಗೂ ಕೊನೆಗೆ ಇದೇ ಗತಿ; ಎಂದು ನೀನು ನನಗೆ ತಿಳಿಸುವುದರಿಂದ ಈ ಭೂಮಿಯಲ್ಲಿ ನಾನು ಜೀವಿಸುವಾಗ ನಿನ್ನಲ್ಲಿ ಒಳ್ಳೆ ಹೆಸರನ್ನು ಪಡೆದುಕೊಳ್ಳುವುದಕ್ಕೆ ಇನ್ನು ಮುಂದೆ ಪ್ರಯಾಸ ಪಡುತ್ತೇನೆ, ಕಷ್ಟದಲ್ಲಿ ಇರುವವರಿಗೆ ನಿನ್ನ ವಾಕ್ಯದಿಂದ ಅವರನ್ನು ಸಂತೈಸುತ್ತೇನೆ. ನಿನ್ನ ಸನ್ನಿಧಿಗೆ ಬರುವಾಗ ನನ್ನ ಹೆಜ್ಜೆಯನ್ನು ಗಮನಿಸುತ್ತಾ ಮತ್ತೊಬ್ಬರನ್ನು ನಿನ್ನ ವಾಕ್ಯದಲ್ಲಿ ನಡೆಸುವುದಕ್ಕೆ ಸಿದ್ಧವಾಗುತ್ತೇನೆ. ಕರ್ತನೇ ಮನುಷ್ಯನಿಗೆ ಲೋಕದಲ್ಲಿ ಅನುಗ್ರಹಿಸುವ ದಿನಗಳಲ್ಲೆಲ್ಲಾ ಅವನು ಪಡುವ

ಪ್ರಯಾಸದಲ್ಲ ಸಂತೋಷವೇ ಸೇರಿರುವದು. ರಾತ್ರಿ-ಹಗಲು ಕಣ್ಣಿಗೆ ನಿದ್ರೆ ಕೊಡದೇ ಲೋಕದ ಕೆಲಸ ಕಾರ್ಯಗಳಲ್ಲಿ ಹೊಟ್ಟೆಗಾಗಿ. ಗೇಣುಬಟ್ಟೆಗಾಗಿ, ಆಹಾರ-ವಸ್ತ್ರಕ್ಕಾಗಿ, ಸುಖ-ಭೋಗಕ್ಕಾಗಿ ದುಡಿಯುತ್ತಾನೆ. ಉತ್ತಮವಾದ ಜ್ಞಾನವನ್ನು ಪಡೆಯಲೂ ಪ್ರಯಾಸಪಟ್ಟು ನೋಡಿದರೂ ಲೋಕದಲ್ಲಿ ನಡೆಯುವುದನ್ನು ಸಹ ಮನುಷ್ಯನು ಗ್ರಹಿಸಲಾಗದೆ ಹೋಗುತ್ತಿದ್ದಾನೆ. ಆದರೆ ಇಂಥವರ ಮಧ್ಯದಲ್ಲಿ ನನ್ನನ್ನು ಆರಿಸಿಕೊಂಡು ನೀತಿವಂತಳಾ/ನಾಗಿ ಮಾಡಿದ್ದಕ್ಕಾಗಿ ಸ್ತೋತ್ರ ಅಪ್ಪಾ.

ನಿನ್ನ ಆಹಾರವನ್ನು ನೀರಿನ ಮೇಲೆ ಚೆಲ್ಲು, ಬಹು ದಿನದ ಮೇಲೆ ಅದು ನಿನಗೆ ಸಿಕ್ಕುವುದು ಎಂದು ಹೇಳಿದ್ದೀಯಾ ಕರ್ತನೇ ನೀನು ನನಗೆ ಬೋಧಿಸಿದ ಮಾತುಗಳನ್ನು ಮತ್ತೊಬ್ಬರಿಗೆ ತಿಳಿಸುವಾಗ ಅವರ ಹೃದಯದಲ್ಲಿ ಕಾರ್ಯ ಮಾಡು. ಯೌವ್ವನ ಪ್ರಾಯದಲ್ಲಿ ಇರುವ ಮಕ್ಕಳು ನನ್ನ ಲೀತಿ ಮನತಿರುಗಿ ನಿನ್ನ ವಾಕ್ಯಕ್ಕೆ ವಿಧೇಯರಾಗಬೇಕು. ನಿನ್ನನ್ನು ಯೌವ್ವನ ಪ್ರಾಯದಲ್ಲೇ ತಿಳಿದುಕೊಳ್ಳುವಾಗ ಅವರು ಯಾವುದೇ ಕಾರಣಕ್ಕೂ ಪಾಪಕ್ಕೆ ಬೀಳುವುದಿಲ್ಲ. ಪಾಪವು ಕೊಡುವ ಸಂಬಳ ಮರಣ; ಮರಣವನ್ನು ಜಯಿಸಿರುವ ಯೇಸುವಿನಿಂದ ಪಾಪಕ್ಕೆ ಬಿಡುಗಡೆ ಎಂದು ಯೌವನಸ್ಥರಿಗೆ ನಾನು ತಿಳಿಯಪಡಿಸಲು ನನಗೆ ಸಹಾಯಮಾಡು. ಪ್ರಸಂಗಿ 11:9 ರಲ್ಲಿ " ಯೌವ್ವನಸ್ಥನೇ, ಪ್ರಾಯದಲ್ಲಿ ಆನಂದಿಸು; ಯೌವ್ವನದ ದಿನಗಳಲ್ಲಿ ಹೃದಯವು ನಿನ್ನನ್ನು ಹರ್ಷಗೊಳಿಸಲಿ; ಮನಸ್ಸಿಗೆ ತಕ್ಕಂತೆಯೂ ಕಣ್ಣಿಗೆ ಸರಿಬೀಳುವ ಹಾಗೆಯೂ ನಡೆದುಕೋ; ಆದರೆ ಈ ಎಲ್ಲಾ ವಿಷಯಗಳಲ್ಲಿಯೂ ದೇವರು ನಿನ್ನನ್ನು ನ್ಯಾಯ ವಿಚಾರಣೆಗೆ ಗುರಿಮಾಡುವನೆಂದು ಯಾವಾಗಲೂ ತಿಳಿದಿರಬೇಕು ಎಂದು ಎಚ್ಚರಿಕೆ ಕೊಟ್ಟಿರುವುದಕ್ಕಾಗಿ ಸ್ತೋತ್ರ ತಂದೆ, ಅದಕ್ಕಾಗಿ ನಿನ್ನನ್ನು ತಿಳಿಯದೇ ಇರುವ ವ್ಯಕ್ತಿಗೆ ಈ ನಿನ್ನ ಮಾತುಗಳನ್ನು ನಾನು ತಿಳಿಸುವಾಗ ಅನೇಕರು ಬದಲಾವಣೆಯಾಗಿ ನಿನಗೆ ಸಾಕ್ಷಿಯಾಗಿ ನಿಲ್ಲಲ್ಲು ಸಹಾಯಮಾಡು.

"ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾ-ಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪಾಪ ಮಾಡಲು ಪ್ರೇರೇಪಿಸಲ್ಪಡುತ್ತಾನೆ (ಯಾಕೋ 1:14) ನಾನು ಇಂತಹ ಆಶಾ-ಪಾಶದಿಂದ ಮುರುಳುಗೊಂಡು ಪಾಪ



ಮಾಡದಂತೆ ತಪ್ಪಿಸಿ ಕಾಪಾಡು. ಪಾಪವು ಕೊಡುವ ಸಂಬಳ ಮರಣ (1:4) ಈ ಸಂಬಳ ನನಗೆ ಬೇಡ ನಿನಗೆ ವಿರುದ್ಧವಾಗಿರುವ ಯಾವ ಆಶೆಯೂ ನನ್ನಲ್ಲಿ ಹುಟ್ಟದಂತೆ ತಪ್ಪಿಸಿ ಕಾಪಾಡು ತಂದೆಯೇ ಆಮೆನ್.

ಪರಲೋಕದಲ್ಲಿ ನೀನು ಎಷ್ಟು ಪರಿಶುದ್ಧನಾಗಿದ್ದೀಯೋ ನನ್ನನ್ನೂ ಅಷ್ಟೇ ಪರಿಶುದ್ಧ ಪಡಿಸು ತಂದೆಯೇ (1 ಪೇತ್ರ. 1:16) ಇದೇ ನಿನ್ನ ಚಿತ್ತ ಎಂದು ನನಗೆ ತಿಳಿಯಪಡಿಸಿದ್ದಕ್ಕಾಗಿ ನಿನಗೆ ಸ್ತೋತ್ರ ತಂದೆಯೇ. ಆಮೆನ್.

ನನ್ನ ಮನಸ್ಸನ್ನು ನಿನ್ನ ಅಧೀನಕ್ಕೆ ತೆಗೆದಿಕೋ ಯೇಸಪ್ಪಾ "ಒಳ್ಳೆಯವನು ತನ್ನ ಹೃದಯವೆಂಬ ಒಳ್ಳೆಯ ಬೊಕ್ಕಸದೊಳಗಿಂದ ಒಳ್ಳೆಯದನ್ನು ತರುತ್ತಾನೆ. ಕೆಟ್ಟವನು ಕೆಟ್ಟ ಬೊಕ್ಕಸದೊಳಗಿಂದ ಕೆಟ್ಟದ್ದನ್ನು ತರುತ್ತಾನೆ; ಹೃದಯದಲ್ಲಿ ತುಂಬಿರುವುದೇ ಬಾಯಲ್ಲಿ ಹೊರಡುವದು." (ಲೂಕ 6:45) ನಾನು ಕೆಟ್ಟ ವ್ಯಕ್ತಿಯಾಗಿ ಪಾಪಗಳಿಂದ ನನ್ನನ್ನು ನಾನು ಹೊಲಸು ಮಾಡಿಕೊಳ್ಳಲು ನನಗೆ ಇಷ್ಟವಿಲ್ಲ. ಯಾಕೆಂದರೆ ಪರಲೋಕಕ್ಕೆ ಹೊಲೆಯಾದದ್ದೊಂದೂ ಸೇರುವುದಿಲ್ಲ, ಅಸಹ್ಯವಾದದ್ದನ್ನೂ ಸುಳ್ಳಾದದ್ದನ್ನೂ ನಡಿಸುವವನು ಸೇರುವುದಿಲ್ಲ (ಪ್ರಕಟಣೆ 21:27) ಅದಕ್ಕಾಗಿ ನನ್ನಲ್ಲಿ ಒಳ್ಳೆಯ ಮನಸ್ಸನ್ನು ಕೊಡು. ಯಾವ ಹೊಲಸೂ ಯಾವ ಅಸಹ್ಯವೂ ಯಾವ ಸುಳ್ಳೂ ನನ್ನ ಮೇಲೆ ದಬ್ಬಾಳಿಕೆ ಮಾಡದಂತೆ ಯೇಸುವೇ ನನ್ನ ಆಲೋಚನೆಗಳನ್ನು ಶುದ್ಧೀಕರಿಸಿ ನನ್ನ ಮೇಲೆ ನೀನು ಆಳ್ವಿಕೆ ಮಾಡು, ನಿನ್ನ ಆಲೋಚನೆಗಳು ಎಷ್ಟು ಪರಿಶುದ್ಧವಾಗಿದೆಯೋ ನನ್ನ ಆಲೋಚನೆಗಳನ್ನು ಅಷ್ಟೇ ಪರಿಶುದ್ಧಪಡಿಸು ನಿನ್ನ ಮಾತು ಯಾವ ರೀತಿ ಸತ್ಯವಾಗಿಯೂ ನೀತಿಯಾಗಿಯೂ ಇದೆಯೋ ಹಾಗೆಯೇ ನನ್ನನ್ನೂ ಮಾರ್ಪಡಿಸು.

ಪಾಪಕ್ಕೆ ದಾಸಳಾ/ನಾ/ಗಿ ಜೀವಿಸುತ್ತಿದ್ದಂತಹ ನನ್ನನ್ನು ನೀತಿಗೆ ದಾಸಳಾ/ನಾ/ಗಿ ಮಾರ್ಪಡಿಸು, ಕರ್ತನೇ ನಾನು ನಿನ್ನನ್ನು ಅರಿಯುವುದಕ್ಕೆ ಮುಂಚೆ ಅಧರ್ಮಮಾಡುವುದಕ್ಕಾಗಿ ನನ್ನನ್ನು ಬಂಡುತನಕ್ಕೂ ಅಧರ್ಮಕ್ಕೂ ದಾಸಳ/ನ/ನ್ನಾಗಿ ಒಪ್ಪಿಸಿಕೊಟ್ಟಿದ್ದೇ ಆದರೆ ಈಗ ಪರಿಶುದ್ಧ ವ್ಯಕ್ತಿಯಾಗಿ ಜೀವಿಸಲು ನನ್ನನ್ನು ನಾನು ನಿನಗೆ ಪರಿಪೂರ್ಣವಾಗಿ ಒಪ್ಪಿಸಿಕೊಟ್ಟಿದ್ದೇನೆ. ಪಾಪಕ್ಕೆ ದಾಸಳಾ/ನಾ/ಗಿದ್ದಾಗ ನೀತಿಯ ಹಂಗು ನನ್ನಲ್ಲಿರಲಿಲ್ಲ. ಈಗ ಪರಿಶುದ್ಧತೆಯ ಮಾರ್ಗವನ್ನು ಅನುಸರಿಸುತ್ತಿರುವುದರಿಂದ ಪಾಪದ ಹಂಗು

ನನ್ನಲ್ಲಿ ಇರದಂತೆ ನನ್ನನ್ನು ಮಾರ್ಪಡಿಸು. ನಾನು ಮಾಡಿರುವಂತ ಸಕಲ ಪಾಪದ ವಿಚಾರವಾಗಿ ನನಗೆ ನಾಚಿಕೆ ಉಂಟು. ಆದರೆ ನನ್ನ ಪಾಪದಲ್ಲಿ ನಾನು ಸಾಯಬಾರದೆಂದು ನನ್ನ ಯೇಸುವೇ ನೀನು ಕಲ್ವಾರಿ ಶಿಲುಬೆಯಲ್ಲಿ ಮರಣಹೊಂದಿ ನನ್ನನ್ನು ನಿನ್ನ ರಕ್ತದಿಂದ ಕ್ರಯಕ್ಕೆ ಕೊಂಡುಕೊಂಡಿರುವುದಕ್ಕಾಗಿ ನಿನಗೆ ಸ್ತೋತ್ರ. (1 ಕೊರಿ 6:20) ಯೇಸುವೇ ನಾನು ಪರಿಶುದ್ಧ ಜೀವನವನ್ನು ನಡೆಸುವಂತೆ ನನಗೆ ಸಹಾಯ ಮಾಡು.

'ಯೆಹೋವನ ಭಯವು ಪಾಪ ದ್ವೇಷವನ್ನು ಹುಟ್ಟಿಸುತ್ತದೆ.' (ಜ್ಞಾನೋಕ್ತಿ 8:13) ಆದುದರಿಂದ ಕರ್ತನೇ ನಾನು ಪಾಪದ ಬಗ್ಗೆ ಯೋಚಿಸುವಾಗೆಲ್ಲಾ ನಿನ್ನ ಮೇಲೆ ಭಯ ಹೆಚ್ಚಾಗಲಿ. ಆಗ ನಾನು ಪಾಪದಿಂದ ದೂರವಿರಲು ಸಾಧ್ಯವಾಗುತ್ತದೆ. ದೇವರೇ ನಿನಗೆ ದಾಸಳಾ/ನಾ/ಗಿ ಪರಿಶುದ್ಧವಾಗಿರುವದೇ ನನಗೆ ಫಲ; ಇದರಿಂದ ಕಡೆಗೆ ದೊರೆಯುವುದು ನಿತ್ಯಜೀವವಾದುದರಿಂದ (ರೋಮ 6:19-23) ನಿನಗೆ ಪ್ರತಿಯೊಂದು ಮಂಡಲದಲ್ಲಿ ವಿಧೇಯಳಾ/ನಾ/ಗಲು ಸಹಾಯ ಮಾಡು ತಂದೆಯೇ, ಆಮೆನ್.

ಶರೀರ ಭಾವಾಧೀನರು ದೇವರಿಗೆ ಮೆಚ್ಚಿಕೆಯಾಗಿರಲಾರರು (ರೋಮಾ8:8) ಶರೀರಭಾವವನ್ನು ಅನುಸಿರುಸವವರು ಅದಕ್ಕೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ(ರೋಮಾ 8:5) ಶರೀರಭಾವದವುಗಳ ಮೇಲೆ ಮನಸ್ಸಿಡುವುದು ಮರಣ (ರೋಮಾ 8:6) ಶರೀರ ಭಾವದವುಗಳ ಮೇಲೆ ಮನಸ್ಸಿಡುವುದು ದೇವರಿಗೆ ಶತ್ರುತ್ವವು (ರೋಮಾ 8:7) ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವುದು ನಿಶ್ಚಯ (ರೋಮಾ 8:13) ಶರೀರಭಾವಕ್ಕೆ ಒಳಪಟ್ಟು ಅದರ ಕಾರ್ಯಗಳನ್ನು ಯಾವಕಾರಣಕ್ಕೂ ನಾನು ಮಾಡದಂತೆ ನನ್ನನ್ನು ತಪ್ಪಿಸಿ ನಡೆಸು ಯೇಸಪ್ಪಾ.

ನಾನು ಶರೀರಭಾವದ ಮೇಲೆ ಹೆಚ್ಚು ಕಾಳಜಿವಹಿಸಿ ಶರೀರ ಹೇಳುವಂತ ಪಾಪಗಳನ್ನು ನನ್ನ ಮನಸ್ಸು ಒಂದು ಕಾರಣಕ್ಕೂ ಅಂಗೀಕಾರ ಮಾಡಿಕೊಳ್ಳದಂತೆ ಸಹಾಯಮಾಡು. ಶರೀರ ಭಾವಾಧೀನರು ನಿನಗೆ ಮೆಚ್ಚಿಕೆಯಾಗಿರಲಾರರು (ರೋಮಾ 8:8) ಶರೀರದ ಭಾವನೆಗೆ ನಾನು ಅಧೀನವಾಗದಂತೆ ನನ್ನ ಯೇಸುಕ್ರಿಸ್ತನೇ ನೀನು ನನಗಾಗಿ ಬರೆದಿಟ್ಟಿರುವ ಆಜ್ಞೆಗಳಿಗೆ ನಾನು ಪ್ರತಿಯೊಂದು ಕ್ಷಣದಲ್ಲೂ ಅಧೀನವಾಗಿರುವಂತೆ ಸಹಾಯ



ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಶರೀರಭಾವವನ್ನು ಅನುಸರಿಸುವವರು ಅದಕ್ಕೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ (ರೋಮಾ 8;5) ನಾನಾದರೋ ನೀನು ಹೇಳುವ ಕಟ್ಟಳೆಗಳನ್ನು ಅನುಸರಿಸುವುದಕ್ಕೆ ಮನಸ್ಸನ್ನು ಮಾಡಿದ್ದೇನೆ ಪರಿಶುದ್ಧ ಆತ್ಮನಿಗೆ ಸಂಬಂಧ ಪಟ್ಟವುಗಳ ಮೇಲೆ ನನ್ನ ಮನಸ್ಸನ್ನು ಯಾವಾಗಲೂ ಇಟ್ಟುಕೊಳ್ಳಲು ಇಷ್ಟಪಡುತ್ತಿದ್ದೇನೆ. ಹಾಗಾಗಿ ಎರಡನೇ ಮರಣ ನನಗೆ ಬೇಡ ಶರೀರಭಾವದ ಮೇಲೆ ಮನಸ್ಸಿಟ್ಟುಕೊಂಡರೆ ಅದರ ಪ್ರತಿಫಲ ಮರಣ(8:5) ದೇವರಿಗೆ ಶತ್ರುತ್ವವು (8:7) ಶರೀರಭಾವವನ್ನು ಅನುಸರಿಸಿ ನಡೆದರೆ ಸಾಯುವುದು ನಿಶ್ಚಯ (8:13) ನಾನು ಸಾಯಲು ನನಗೆ ಇಷ್ಟವಿಲ್ಲ ನನ್ನ ದೇವರು ನನಗಾಗಿ ಬಲಿಯಾಗಿರುವುದರಿಂದ ನಾನು ಎರಡನೇ ಮರಣಕ್ಕೆ ಹೋಗದಂತೆ ಎರಡನೇ ಬರೋಣಕ್ಕೆ ನನ್ನನ್ನು ಸಿದ್ಧಪಡಿಸಿಕೊಳ್ಳಲು ಮನಸ್ಸುಮಾಡಿರುವುದರಿಂದ ಕರ್ತನೇ ನೀನೇ ನನ್ನನ್ನು ಪಾಪ-ಮರಣಗಳಿಂದ ತಪ್ಪಿಸಿ ನಿತ್ಯಜೀವಕ್ಕೆ ಭಾಧ್ಯಸ್ಥಳಾ/ನಾ/ಗಿ ನಿಲ್ಲಲು ಸಹಾಯಮಾಡಬೇಕೆಂದು ವಿಜ್ಞಾಪಿಸುತ್ತಿದ್ದೇನೆ.

ಕರ್ತನೇ ನಾನು ಹುಟ್ಟಿದಂದಿನಿಂದ ತಿಳಿದೂ ತಿಳಿಯದೇ ಮಾಡಿರುವ ಸಕಲ ಪಾಪಗಳು ನನ್ನ ಕಣ್ಣ ಮುಂದೆ ಇದೆ. ನಿನ್ನ ದೃಷ್ಟಿಯಲ್ಲಿ ನಾನು ದ್ರೋಹಿಯಾದೆನು. ನನ್ನ ಮನಸ್ಸಾಕ್ಷಿಗೂ ನಾನು ದ್ರೋಹಿಯಾಗಿರುವುದು ತಿಳಿದದೆ ಹಾಗಾಗಿ ನಾನು ಪಶ್ಚತ್ತಾಪ ಪಡುತ್ತಿದ್ದೇನೆ. ನರಳುತ್ತಿದ್ದೇನೆ "ಪಾಪಗಳನ್ನು ಕ್ಷಮಿಸಿಬಿಡುವದಕ್ಕೆ ಮನುಷ್ಯಕುಮಾರನಿಗೆ ಭೂಲೋಕದಲ್ಲಿ ಅಧಿಕಾರ ಉಂಟು." (ಲೂಕ5:24) ನನ್ನನ್ನು ದಯವಿಟ್ಟು ಕ್ಷಮಿಸು. ನಿನಗೆ ವಿರುದ್ಧವಾಗಿ ಎಷ್ಟೋ ತಪ್ಪುಗಳು ನನ್ನ ಮೂಲಕ ನಡೆದಿದೆ. ನಿನ್ನ ಕೃಪೆಯಿಂದ ಕ್ಷಮಾಪಣೆ ಸಿಗುತ್ತದೆಂದು ನಿನ್ನ ಬಳಿಯಲ್ಲಿ ನನ್ನ ದುಃಖವನ್ನು ಹೇಳಿಕೊಳ್ಳುತ್ತಿದ್ದೇನೆ. ಕರ್ತನೇ ನೀನು ನನ್ನನ್ನು ಪಾಪ-ಮರಣ-ಶಿಕ್ಷೆ-ರೋಗದಿಂದ ತಪ್ಪಿಸಲು ಬಂದಿರುವ ದೇವರಾಗಿರುವುದಕ್ಕಾಗಿ ಸ್ತೋತ್ರ. ಯೇಸಪ್ಪಾ ನಿನ್ನನ್ನು ಅರಿಯುವುದಕ್ಕೆ ಮೊದಲು ನಾನು ಅನೇಕ ಪಾಪಗಳನ್ನು ಮಾಡಿದ್ದೇನೆ. ಆದರೆ ನಿನ್ನ ಪರಿಶುದ್ಧರಕ್ತವು ನನ್ನ ಪಾಪಗಳನ್ನೆಲ್ಲಾ ಕ್ಷಮಿಸಿಬಿಟ್ಟಿದೆ ಎಂದು ನಾನು ನಂಬುತ್ತೇನೆ. ನಿನ್ನನ್ನು ಅರಿತ ಮೇಲೂ ನಿನಗೆ ವಿರೋಧವಾಗಿ ಅನೇಕಾನೇಕ ಅಪರಾಧಗಳು ನನ್ನಿಂದ ನಡೆಯುತ್ತಲೇ ಇದೆ.

ನಾನು ಪಾಪ ಮಾಡಲಿಲ್ಲವೆಂದು ಹೇಳಿದರೆ ಕರ್ತನನ್ನು ಸುಳ್ಳುಗಾರನನ್ನಾಗಿ ನಿಲ್ಲಿಸಿದ ಹಾಗಾಗುವುದು (1ಯೋಹಾನ 1:10) ಆದುದರಿಂದ ನನ್ನ ತಪ್ಪನ್ನು ನಾನೇ ಒಪ್ಪಿಕೊಳ್ಳುತ್ತಿದ್ದೇನೆ. ಕರ್ತನೇ ನೀನು ಸತ್ಯವಂತನಾಗಿರುವುದರಿಂದ ನಿನ್ನ ಬಳಿಯಲ್ಲಿ ಏನನ್ನೂ ನಾನು ಮರೆಮಾಡಲು ಸಾಧ್ಯವಿಲ್ಲ. ನನ್ನನ್ನು ದಯವಿಟ್ಟು ಕ್ಷಮಿಸು ಯೇಸುವೇ. ಅಪ್ಪಾ ನೀನು ನಂಬಿಗಸ್ಥನೂ ನೀತಿವಂತನೂ ಆಗಿರುವುದರಿಂದ ನಿನ್ನ ಮುಂದೆ ನನ್ನ ಎಲ್ಲಾ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿಕೊಳ್ಳುತ್ತಿದ್ದೇನೆ. ನಿನ್ನ ಪರಿಶುದ್ಧ ರಕ್ತವು ನನ್ನ ಸಕಲ ಪಾಪಗಳನ್ನು ನಿವಾರಣೆ ಮಾಡಿ ನನ್ನನ್ನು ಈಗಲೇ ಶುದ್ಧೀಕರಿಸಲಿ ಮತ್ತು ನನ್ನ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನನ್ನನ್ನು ಶುದ್ಧಿಮಾಡಲಿ ಎಂದು ಬೇಡಿಕೊಳ್ಳುತ್ತಿದ್ದೇನೆ. ಯೇಸುಕ್ರಿಸ್ತನೇ ನನ್ನ ಸಹಾಯಕನೇ ನೀನೇ ನನ್ನ ಪಾಪಗಳನ್ನು ನಿವಾರಣೆಮಾಡುವುದಕ್ಕೆ ಯಜ್ಞವಾಗಿದ್ದಕ್ಕಾಗಿ ಸ್ತೋತ್ರ. ನನ್ನ ಪಾಪಗಳು ಮಾತ್ರವಲ್ಲಾ ಸಮಸ್ತ ಶಾಪಗಳನ್ನೂ ಸಹ ನಿವಾರಣಮಾಡಿರುವುದಕ್ಕಾಗಿ ನಿನಗೆ ಸ್ತೋತ್ರ. ಕತ್ತಲೆಯಲ್ಲಿ ಜೀವಿಸುತ್ತಿರುವ ನನ್ನನ್ನು ಬೆಳಕಿನ ಕಡೆಗೆ ನಡೆಯುವಂತೆ ಮಾರ್ಗವನ್ನು ತೋರಿಸಿದಕ್ಕಾಗಿ ನಿನಗೆ ಸ್ತೋತ್ರ.

"ಯಾವನ ದ್ರೋಹವು ಪರಿಹಾರವಾಗಿದೆಯೋ ಯಾವನ ಪಾಪವು ಕ್ಷಮಿಲ್ಪಟ್ಟಿದೆಯೋ ಅವನೇ ಧನ್ಯನು. ಕರ್ತನು ಯಾವನ ಲೆಕ್ಕಕ್ಕೆ ಅಪರಾಧವನ್ನು ಎಣಿಸುವುದಿಲ್ಲವೋ ಯಾವನ ಹೃದಯದಲ್ಲಿ ಕಪಟವಿರುವದಿಲ್ಲವೋ ಅವನು ಧನ್ಯನು. ನಾನು ನನ್ನ ಪಾಪವನ್ನು ಅರಿಕೆಮಾಡದೆ ಇದ್ದಾಗ ದಿನವೆಲ್ಲಾ ನರಳುವುದರಿಂದ ನನ್ನ ಎಲುಬುಗಳು ಸವೆದುಹೋಗುತ್ತಿದ್ದವು." (ಕೀರ್ತನೆ 32: 1-4) ಹೀಗಿರುವಲ್ಲಿ ಯೆಹೋವನ ಸನ್ನಿಧಿಯಲ್ಲಿ ನನ್ನ ದ್ರೋಹವನ್ನು ಒಪ್ಪಿಕೊಳ್ಳುವೆನು ಅಂದುಕೊಂಡು ನನ್ನ ಪಾಪವನ್ನು ಮರೆಮಾಡದೆ ನಿನಗೆ ನನ್ನ ದೋಷವನ್ನು ತಿಳಿಸಿದೆನು. ನೀನು ನನ್ನ ಅಪರಾಧ ಪಾಪಗಳನ್ನು ಪರಿಹರಿಸಿ ಬಿಟ್ಟಿ. (ಕೀರ್ತನೆ 32:5)

ಯೇಸುವೇ ಮರಣಾಧೀನವಾದ ದೇಹದಿಂದ ನನಗೆ ಬಿಡುಗಡೆಯನ್ನು ದಯಪಾಲಿಸು. ನನಗೆ ಎಲ್ಲಾ ಕೆಟ್ಟ ಚಟಗಳಿಂದ ಬಿಡುಗಡೆಯನ್ನು ಅನುಗ್ರಹಿಸು, ಯೇಸುವೇ ನಿನಗೆ ಮಾತ್ರ ನಾನು ದಾಸಳಾ/ನಾ/ಗಿರುವಂತೆ ನನ್ನ ಮನಸ್ಸು ನಿನ್ನ ಆಜ್ಞೆಗಳಿಗೆ ಒಳಪಡುವಂತೆ ಸಹಾಯಮಾಡು. ದುರಾತ್ಮನಿಗೆ ನಾನು



ದಾಸಳಾ/ನಾ/ಗಿರಲು ನನಗೆ ಇಷ್ಟವಿಲ್ಲ. ಎಲ್ಲಾ ಪಾಪಗಳಿಂದ ಬಿಡುಗಡೆಮಾಡಿ ನನ್ನನ್ನು ನಿನ್ನ ರೆಕ್ಕೆಗಳಲ್ಲಿ ಭದ್ರಮಾಡಿಕೋ. ಎರಡು ಯಜಮಾನರನ್ನು ನಾನು ಸೇವಿಸುವ ವ್ಯಕ್ತಿಯಾಗಿರಬಾರದು (ಮತ್ತಾ 6:24) ಕರ್ತನೇ ನಿನ್ನನ್ನು ಪೂರ್ಣವಾಗಿ ಹೊಂದಿಕೊಂಡು ಪೂರ್ಣವಾಗಿ ಪ್ರೀತಿಸುತ್ತಾ ದುಷ್ಟನನ್ನು ದ್ವೇಷಿಸಿ ಅವನನ್ನು ಅವನ ಕಾರ್ಯಗಳನ್ನು ಪರಿಪೂರ್ಣವಾಗಿ ತಾತ್ಸಾರಮಾಡುವಂತೆ ನನಗೆ ಬುದ್ಧಿಯನ್ನು ಅನುಗ್ರಹಿಸು. ನನಗೆ ಏಕಚಿತ್ತ ಮನಸ್ಸನ್ನು ಸಹ ಅನುಗ್ರಹಿಸು ನನ್ನಲ್ಲಿರುವ ಛಂಚಲತ್ವವನ್ನು ತೆಗೆದುಹಾಕು ಎರಡು ಮನಸ್ಸನ್ನು ತೆಗೆದುಹಾಕು ನನ್ನ ಶರೀರವು ನಿನಗೆ ಆಲಯವಾಗಿರುವುದರಿಂದ ನಿನ್ನ ಆಲಯವನ್ನು ಪ್ರತಿಕ್ಷಣವೂ ಪರಿಶುದ್ಧವಾಗಿಟ್ಟುಕೊಳ್ಳಲು ಕಲಿಸಿಕೊಡು. ನನ್ನ ಆಲೋಚನೆ-ಬುದ್ಧಿ-ಜ್ಞಾನ-ನಡವಳಿಕೆ-ಮಾತು, ಇವೆಲ್ಲವು ನಿನ್ನ ಚಿತ್ತದ ಪ್ರಕಾರವಾಗಿ ನಿನ್ನ ಅಧೀನದಲ್ಲಿರಲಿ.

ಪರಲೋಕದಲ್ಲಿ ನಿನ್ನ ಮುಂದೆ ನಾನು ಬಂದು ನಿಲ್ಲುವಾಗ "ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ಥ್ಯವಾಗಿ ತೆಗೆದುಕೊಳ್ಳಿರಿ" (ಮತ್ತಾಯ 25:34) ಎಂದು ನೀನು ನನ್ನನ್ನು ಕಂಡು ಹೇಳುವ ಹಾಗೆಯೂ ನೀತಿವಂತರಿಗಾಗಿ ಏರ್ಪಡಿಸಿರುವ ಸಾಲಿನಲ್ಲಿ ನಿನ್ನ ಬಲಗಡೆಯಲ್ಲಿ ನಿಂತುಕೊಂಡು ಪರಲೋಕ ರಾಜ್ಯಕ್ಕೆ ಬಾಧ್ಯಸ್ಥಳಾ/ನಾ/ಗುವಂತೆಯೂ ನನ್ನನ್ನು ಪರಿಶುದ್ಧಪಡಿಸಬೇಕೆಂದು ವಿಜ್ಞಾಪಿಸುತ್ತಿದ್ದೇನೆ. ಪರಿಶುದ್ಧಾತ್ಮನನ್ನು ದೂಷಿಸುವವನಿಗೆ ಕ್ಷಮಾಪಣೆಯಿಲ್ಲ ಮತ್ತು ಯೇಸುವನ್ನು ನಂಬದೇ ಇರುವವರಿಗೆ ನಿತ್ಯರಾಜ್ಯವಿಲ್ಲದಿರುವುದರಿಂದ ಇಂತಹ ಮರಣಕರವಾದಂತಹ ಪಾಪವನ್ನು ನಾನು ಎಂದಿಗೂ ಮಾಡದಂತೆ ತಡೆಯಬೇಕೆಂದು ವಿಜ್ಞಾಪಿಸುತ್ತಾ ನನ್ನನ್ನು ಪರಿಶುದ್ಧತೆಯ ಮಾರ್ಗದಲ್ಲಿ ನಡೆಸಬೇಕೆಂದು ನನ್ನನ್ನು ನಾನು ನಿನ್ನ ಅಧೀನಕ್ಕೆ ಒಪ್ಪಿಸಿಕೊಟ್ಟು ಪವಿತ್ರಾತ್ಮನ ಸಹಾಯದಿಂದ ಯೇಸುಕ್ರಿಸ್ತನ ಮುದ್ದಾದ ನಾಮದಲ್ಲಿ ಪ್ರಾರ್ಥಿಸುತ್ತಿದ್ದೇನೆ ಜೀವವುಳ್ಳ ತಂದೆಯೇ ಆಮೆನ್.

## 7. ನಾಲಿಗೆ

ಪರಿಶುದ್ಧಾತ್ಮನೇ ನನ್ನನ್ನೇ ನಿನ್ನ ಕೈಯಲ್ಲಿ ಒಪ್ಪಿಸಿದ್ದೇನೆ. ನೀನು ನನಗಾಗಿ ಇಟ್ಟಿರುವ ಆಶೀರ್ವಾದಕ್ಕೆ ಏನಾದರೂ ದೋಷವಿರುವುದಾದರೆ ನನಗೆ ತೋರ್ಪಡಿಸು ಅದನ್ನು ತಿದ್ದುಕೊಳ್ಳುವುದಕ್ಕೆ ನನಗೆ ಸಹಾಯ ಮಾಡು ನನ್ನ ಪ್ರಾರ್ಥನೆ ನಿನ್ನ ಪಾದ ಸನ್ನಿಧಿಯಲ್ಲಿ ಮುಟ್ಟಬೇಕು ಯೇಸಪ್ಪಾ! ಸತ್ಯವೇದದಲ್ಲಿ ನನಗೆ ನೀನು ತಿಳಿಸಿದ ಪ್ರಕಾರ ನಾನು ದುಡುಕಿ ಮಾತಾಡುವುದರಿಂದ ನನ್ನ ನಾಲಿಗೆ ಪಾಪಕ್ಕೆ ಒಳಪಟ್ಟಿರುವುದರಿಂದ ನನ್ನನ್ನು ಕ್ಷಮಿಸು. ಯೇಸಪ್ಪಾ ಅನೇಕ ವಿಷಯಗಳಲ್ಲಿ ನಾನು ತಪ್ಪು ಮಾಡುತ್ತಿದ್ದೇನೆ ದಯವಿಟ್ಟು ಕ್ಷಮಿಸು ನಿನ್ನಲ್ಲಿ ಅನೇಕ ಭಾರಿ ತೀರ್ಮಾನ ಮಾಡಿಕೊಂಡೆ ಆ ತೀರ್ಮಾನದ ಮೇಲೆ ನಿಂತುಕೊಳ್ಳಲು ಆಗಲಿಲ್ಲ; ಅದರಿಂದ ಅನೇಕ ಶಿಕ್ಷೆಯನ್ನು ಅನುಭವಿಸಿದೆ. ಇನ್ನು ಮುಂದೆ ಆ ತಪ್ಪುಗಳನ್ನು ಮಾಡುವುದಿಲ್ಲ ದಯವಿಟ್ಟು ನನ್ನನ್ನು ಕ್ಷಮಿಸು. ನಿನ್ನ ಕರುಣೆಯಿಂದ ರಕ್ಷಿಸು. ನಿನ್ನ ವಾಕ್ಯದಿಂದ ನನ್ನ ಬಾಯಿಗೆ ಕಡಿವಾಣ ಹಾಕು; ಆಗ ನಿನ್ನ ನಿಯಂತ್ರಣದಲ್ಲಿ ನಾನು ಭದ್ರವಾಗಿ ನಿಲ್ಲಲು ಸಾಧ್ಯವಾಗುತ್ತದೆ. ನನ್ನ ಜೀವನದಲ್ಲಿ ನೀನು ನಾವಿಕನಾಗಿ ಚುಕ್ಕಾಣಿಯೆಂಬ ನನ್ನ ನಾಲಿಗೆಯನ್ನು ನಿನ್ನ ಅಧೀನಕ್ಕೆ ತೆಗೆದುಕೋ, ಆಗ ನಾನು ನಿನಗೆ ನಂಬಿಗಸ್ಥಳಾ/ನಾ/ಗಿ ಜೀವಿಸುವುದಕ್ಕೆ ಸಾಧ್ಯವಾಗುತ್ತದೆ. ಯೇಸಪ್ಪಾ ನನ್ನ ನಾಲಿಗೆಯನ್ನು ನಿನ್ನ ಹತೋಟಿಗೆ ತೆಗೆದುಕೋ. ನನ್ನ ನಾಲಿಗೆಯಿಂದ ಅನೇಕರನ್ನು ದೂಷಿಸಿದ್ದೇನೆ, ಬೈದಿದ್ದೇನೆ, ಶಾಪಹಾಕಿದ್ದೇನೆ ಇದೆಲ್ಲವನ್ನು ನಾನು ಬಿಟ್ಟು-ಬಿಡಲು ನನ್ನನ್ನು ನಿನಗೆ ಸಂಪೂರ್ಣವಾಗಿ ಒಪ್ಪಿಸಿಕೊಟ್ಟಿದ್ದೇನೆ. ಯಾವುದೇ ಕಾರಣಕ್ಕೂ ನನ್ನ ಜೊತೆಯಲ್ಲಿರುವವರನ್ನು ದ್ವೇಷಿಸದೆ ಪ್ರೀತಿಸುವಂತೆ ನನಗೆ ಸಹಾಯ ಮಾಡು, ನನ್ನ ತಪ್ಪುಗಳನ್ನು ಕ್ಷಮಿಸು ಯೇಸಪ್ಪಾ. ಯೇಸಪ್ಪಾ (ಮತ್ತಾಯ 12:37) "ನಿನ್ನ ಮಾತುಗಳಿಂದಲೇ ನೀತಿವಂತನೆಂದು ತೀರ್ಪು ಹೊಂದುವಿ; ನಿನ್ನ ಮಾತುಗಳಿಂದಲೇ ಅಪರಾಧಿಯೆಂದು ತೀರ್ಪುಹೊಂದುವಿ" ಎಂದು ನೀನು ಹೇಳಿರುವುದರಿಂದ ನನ್ನ ಮಾತುಗಳು ಬಹು ಜಾಗರೂಕತೆಯಿಂದ ಇರುವಂತೆ ನನಗೆ ಪ್ರತಿ ಸಂಧರ್ಭದಲ್ಲೂ ಕಲಿಸಿಕೊಡು.



ಯೇಸಪ್ಪಾ ನನ್ನ ನಾಲಿಗೆಯಿಂದ ಬಂದಿರುವ ಮಾತುಗಳು ಎಷ್ಟು ತಪ್ಪಾಗಿದೆ ಎಂದು ಈಗ ಅರ್ಥವಾಗುತ್ತಿದೆ. ಇನ್ನು ಮುಂದೆ ನನ್ನ ಬಾಯಿಂದ ಬರುವ ಮಾತುಗಳು ನ್ಯಾಯವಾಗಿಯೂ ನೀತಿಯಾಗಿಯೂ ಹೊರಬರುವಂತೆ ಸಹಾಯ ಮಾಡು. ನಾನು ನೀತಿವಂತಳಾಗಿ ಈ ಲೋಕದಲ್ಲಿ ಜೀವಿಸಬೇಕು ಉತ್ತಮವಾದ ತೀರ್ಪನ್ನು ನಿನ್ನಿಂದ ಪಡೆದುಕೊಳ್ಳಲು ನನ್ನನ್ನು ಬಲಪಡಿಸಿ ನಡೆಸುವಂತವನಾಗು.

ಯೇಸಪ್ಪಾ ನನ್ನ ಹೃದಯವನ್ನು ಶುದ್ಧಿಮಾಡು, ನನ್ನ ಪಾಪವನ್ನು ಸಂಪೂರ್ಣವಾಗಿ ತೊಳೆದುಕೊಂಡು ನಿರ್ಮಲವಾಗುವಂತೆ ಸಹಾಯಮಾಡು. ನಾನು ಆಡಿರುವ ಮಾತುಗಳನ್ನೆಲ್ಲಾ ಲಕ್ಷ್ಯಕ್ಕೆ ತಾರದಿರು; ನನ್ನ ತುಟಿಗಳು ವಂಚನೆಯ ಮಾತುಗಳನ್ನಾಡಿರುವುದರಿಂದಲೂ, ಗುಣುಗುಟ್ಟಿ-ರುವುದರಿಂದಲೂ, ಬಡಾಯಿ ಮಾತುಗಳನ್ನು ಕೊಚ್ಚಿಕೊಂಡಿ-ರುವದರಿಂದಲೂ, ನನ್ನನ್ನು ಕ್ಷಮಿಸು. ನನ್ನ ಮಾತುಗಳಿಗೆ ಕಡಿವಾಣ ಹಾಕು ಯೇಸಪ್ಪಾ! ಹಾಸ್ಯ ಮಾಡುವವರ ಜೊತೆಯಲ್ಲಿ ನಾನು ನಿಲ್ಲದಂತೆ, ಕೆಡುಕಿನ ವಿಷಯಗಳನ್ನು ಮಾತಾಡದಂತೆ ಬಲತ್ಕಾರಪಡಿಸುವ ವ್ಯಕ್ತಿಗಳ ಜೊತೆಯಲ್ಲಿ ಸೇರಿ ಹೆಮ್ಮೆಪಡದಂತೆ ನನ್ನನ್ನು ಕಾಪಾಡು ಯೇಸಪ್ಪಾ. ಬಡಾಯಿ ಮಾತುಗಳನ್ನು ದೂಷಣೆಯ ಮಾತುಗಳನ್ನು ಆಡುವ ಬಾಯಿ ನನ್ನದು ಆಗಿರುವದರಿಂದ ನನ್ನನ್ನು ಕ್ಷಮಿಸು. ಇನ್ನು ಮುಂದೆ ಈ ಪಾಪವು ನನ್ನ ಮೇಲೆ ಅಧಿಕಾರ ನಡೆಸದಂತೆ ನಿನ್ನ ಅಧೀನದಲ್ಲಿ ನನ್ನನ್ನು ನಡೆಸು ಯೇಸಪ್ಪಾ ತಪ್ಪಾದ ಮಾರ್ಗದಲ್ಲಿ ನಡೆಯುವವರ ಸಹವಾಸದಿಂದ ನನ್ನನ್ನು ತಪ್ಪಿಸು. ಮರುಳುಗೊಳಿಸುವಂತಹ ವ್ಯಕ್ತಿಗಳಿಂದ ನನ್ನನ್ನು ದೂರಮಾಡು. ಯಾಕೆಂದರೆ ಗುಣುಗುಟ್ಟುವ ವ್ಯಕ್ತಿಗಳು ನನ್ನ ಗತಿ ಏನಾಗುತ್ತದೋ ಎಂದು ದುರಾಶೆಯಿಂದ ನೋಡುವವರ ಮಧ್ಯದಲ್ಲಿ ನಾನು ಜಯಶಾಲಿಯಾಗಬೇಕು, ಮುಖಸ್ತುತಿ ಮಾಡುವ ವ್ಯಕ್ತಿಗಳು, ಸ್ವಪ್ರಯೋಜನಕ್ಕಾಗಿಯೇ ಜೀವಿಸುವಂತ ಜನರ ಮಧ್ಯದಲ್ಲಿ ನಾನು ಜೀವಿಸುತ್ತಾ ಇದ್ದೇನೆ. ಯೇಸಪ್ಪಾ ಸುಳ್ಳುಬಾಯಿಯೂ ವಂಚಿಸುವ ನಾಲಿಗೆ ನನಗೆ ಬೇಡ, ನಾನು ಯಾವ ಶಿಕ್ಷೆಗೂ ಒಳಗಾಗಬಾರದು ನನ್ನನ್ನು ಇದರಂದ ತಪ್ಪಿಸು ಯೇಸಪ್ಪಾ.

ಯೇಸಪ್ಪಾ (ಜ್ಞಾನೋ 16:27) "ನೀಚನು ಕೇಡೆಂಬ ಕುಣಿಯನ್ನು

ತೋಡುತ್ತಾನೆ; ಅವನ ತುಟಿಗಳಲ್ಲಿ ಬೆಂಕಿಯುರಿಯುತ್ತದೆ" ಆದ್ದರಿಂದ ನಾನು ನೀಚಳಾ/ನಾ/ಗಿ ಬಾಳಬಾರದು. ನಿನಗೆ ನಾನು ನೀತಿವಂತಳಾ/ನಾ/ಗಿ ಬಾಳಬೇಕು ದುರಾತ್ಮನ ಕಾರ್ಯಗಳು ನನ್ನಲ್ಲಿ ಬರಬಾರದು; ನಿನ್ನ ಕಾರ್ಯಗಳು ಮಾತ್ರ ನನ್ನಲ್ಲಿ ಬೆಳೆದು ಬರಬೇಕು. ಚಾಡಿಕೋರನ ಮಾತು ರುಚಿಯಾಗಿದೆ ಎಂದು ಅರ್ಥವಾಗುತ್ತದೆ; ಅದು ನಿಧಾನವಾಗಿ ಒಳಗೆ ಹೋಗಿ ನಾಶಮಾಡುತ್ತದೆ ಎಂದು ಗ್ರಹಿಸಲು ಸಹಾಯ ಮಾಡಿದ್ದಕ್ಕಾಗಿ ನಿನಗೆ ಸ್ತೋತ್ರ. ಯೇಸಪ್ಪಾ ಜ್ಞಾನಹೀನಳಾ/ನಾ/ಗಿ ತಪ್ಪುಮಾಡಿದೆ ನನ್ನನ್ನು ಕ್ಷಮಿಸು. ನನ್ನ ಜ್ಞಾನವನ್ನು ಚುರುಕುಗೊಳಿಸು. (ಜ್ಞಾನೋ 15:2) "ಜ್ಞಾನಿಗಳ ನಾಲಿಗೆಯು ತಿಳುವಳಿಕೆಯನ್ನು ಸಾರ್ಥಕಮಾಡುವದು"ಆದ್ದರಿಂದ ನನ್ನನ್ನು ನಿನ್ನ ಸಾಧನವಾಗಿ ಮಾರ್ಪಡಿಸು ಯೇಸಪ್ಪಾ. ನನ್ನ ನಾಲಿಗೆ ಸಂತೈಸುವ ಜೀವವೃಕ್ಷದ ಹಾಗೆ ಬೆಳೆದು ಬರಲಿ ಆಮೆನ್. ಯೇಸಪ್ಪಾ ನನ್ನನ್ನು ನಿನ್ನ ರಕ್ತದಿಂದ ತೊಳೆದು ಉತ್ತಮವಾದ ಫಲಕೊಡುವ ವೃಕ್ಷವನ್ನಾಗಿ ಬೆಳೆಸು. ನೀನು ನನ್ನ ನಾಲಿಗೆಯಲ್ಲಿ ಜೀವಮರಣ ಇಟ್ಟಿರುವುದರಿಂದ ನಾನು ಆಡುವ ಜೀವವುಳ್ಳ ಮಾತುಗಳಿಂದ ಇನ್ನು ಮುಂದೆ ಫಲವನ್ನು ಅನುಭವಿಸುವಂತೆ ನನ್ನನ್ನು ಅನುಗ್ರಹಿಸು. ಮರಣವನ್ನು ಉಂಟು ಮಾಡುವ ಮಾತುಗಳನ್ನು ನಾನಾಡದಂತೆ ನನ್ನ ನಾಲಿಗೆಯನ್ನು ಕಾಯ್ದುಕೊಳ್ಳುವಂತೆ ಶಕ್ತಿಕೊಡು, ತೊಂದರೆಗಳಿಂದ ರಕ್ಷಿಸಿಕೊಳ್ಳುವಂತೆ ಸಹಾಯಮಾಡು. ಯೇಸಪ್ಪಾ ಯಾವುದೇ ಕಾರಣಕ್ಕೂ ನಿನ್ನನ್ನು ಬಿಟ್ಟು ಅಗಲದಂತೆ ನಿನ್ನ ಚಿತ್ತದ ಪ್ರಕಾರ ನಡೆದುಕೊಂಡು, ನನ್ನ ನಾಲಿಗೆಯಿಂದ ಒಳ್ಳೆ ಫಲಕೊಡುವಂತಹ ಮಾತುಗಳನ್ನು ನಾನಾಡಲು ನನಗೆ ಕಲಿಸಿಕೊಡು. ನಿನ್ನ ನಿಯಂತ್ರಣದಲ್ಲಿ ದಿನ-ದಿನಕ್ಕೂ ನೂತನವಾಗಿ ಬೆಳೆಯುತ್ತಾ ಸಾಕ್ಷಿಯಾಗಿ ನಿಲ್ಲುವಂತೆ ಸಹಾಯಮಾಡಬೇಕೆಂದು ಯೇಸುಕ್ರಿಸ್ತನ ಅತೀ ಪರಿಶುದ್ಧ ನಾಮದಲ್ಲಿ ಪ್ರಾರ್ಥಿಸಿ ಬೇಡಿಹೊಂದಿದ್ದೇನೆ ಜೀವವುಳ್ಳ ತಂದೆಯೇ ಆಮೆನ್.

(ಯಾಕೋಬ 3:2-8) (ಮತ್ತಾಯ 5:22,12:37) (ಜ್ಞಾನೋಕ್ತಿ 20:9, 16:27, 18:6,8,21, 15:2.4, 21:23, 26:28) (ಪ್ರಸಂಗಿ 7:21) (ಕೀರ್ತನೆ 12:3,4,73:8,9,120:2-4) (ಪ್ರಕಟಣೆ 13:5) (2ಪೇತ್ರ 2:18) (ಯೂದ 16)



## 8. ಸ್ವಸ್ಥತೆ

ನನ್ನನ್ನು ಬಹಳವಾಗಿ ಪ್ರೀತಿ ಮಾಡುವ ಪರಲೋಕದ ತಂದೆಯೇ ನಿನ್ನ ಅತಿ ಮಧುರವಾದ ನಾಮಕ್ಕೆ ಸ್ತೋತ್ರ. ಯೇಸಪ್ಪಾ ಈ ಸಮಯದಲ್ಲಿ ನಿನ್ನ ಪಾದ ಸನ್ನಿಧಿಯಲ್ಲಿ ಕುಳಿತು ಪ್ರಾರ್ಥಿಸುವಂತೆ ಆಸಕ್ತಿಯನ್ನೂ ಸಮಯವನ್ನೂ ನನಗೆ ಅನುಗ್ರಹಿಸಿದ್ದಕ್ಕಾಗಿ ಸ್ತೋತ್ರ. ಯೇಸಪ್ಪಾ ನನ್ನ ಶರೀರದಲ್ಲಿ ಆಗುತ್ತಿರುವಂತಹ ನೋವುಗಳನ್ನು ತೆಗೆದುಹಾಕು. ನಾನು ನಿನ್ನಲ್ಲಿ ಬಲವಾಗಿ ಬೆಳೆಯಬೇಕು, ನಿನ್ನ ಸೇವೆಯನ್ನು ಮಾಡಬೇಕು ನನ್ನ ಜೀವನದಲ್ಲಿ ಆಗುವಂತಹ ಒಂದೊಂದು ಅದ್ಭುತ ಕಾರ್ಯಗಳನ್ನು ಮತ್ತೊಬ್ಬರಿಗೆ ತಿಳಿಸಿ ಅವರನ್ನು ನಿನ್ನ ರಾಜ್ಯಕ್ಕೆ ಸೇರಿಸಬೇಕು. ನಿನ್ನ ಸತ್ಯತೆಗಳನ್ನು ಹೆಚ್ಚಾಗಿ ತಿಳಿಸಬೇಕು ಯೇಸಪ್ಪಾ ನೀನೇ ನನಗೆ ಆರೋಗ್ಯಧಾಯ-ಕನಾಗಿರುವುದಕ್ಕಾಗಿ ನಿನಗೆ ಸ್ತೋತ್ರ. ನನ್ನ ಶರೀದಲ್ಲಿ ಅನಾರೋಗ್ಯ ಇರುವುದರಿಂದ ಅದನ್ನು ಗುಣಪಡಿಸಲು ನೀನು ಶಕ್ತನಾಗಿದ್ದೀಯಾ ಎಂದು ನಾನು ನಂಬುತ್ತೇನೆ. ನನ್ನ ಶರೀರದಲ್ಲಿ ಭಾದೆ ಪಡಿಸುವಂತಹ ರೋಗವನ್ನು ಸಂಪೂರ್ಣವಾಗಿ ನನ್ನಿಂದ ತೆಗೆದುಹಾಕು,

"ನೀವು ನಿಮ್ಮ ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ ಆತನ ದೃಷ್ಟಿಗೆ ಸರಿಬೀಳುವುದನ್ನು ಮಾಡಿ ಆತನ ಆಜ್ಞೆಗಳಿಗೆ ವಿಧೇಯರಾಗಿದ್ದು ಆತನ ಕಟ್ಟಳೆಗಳನ್ನೆಲ್ಲಾ ಅನುಸರಿಸಿ ನಡೆದರೆ ನಾನು ಐಗುಪ್ತ್ಯರಿಗೆ ಉಂಟುಮಾಡಿದ ವ್ಯಾಧಿಗಳಲ್ಲಿ ಒಂದನ್ನೂ ನಿಮಗೆ ಬರಗೊಡಿಸುವುದಿಲ್ಲ." ಎಂದು ಈ ವಾಕ್ಯದ ಪ್ರಕಾರ ನನಗೆ ತಿಳಿಸಿದ್ದೀಯಾ ಈ ನಿನ್ನ ಎಲ್ಲಾ ಮಾತುಗಳನ್ನು ನಾನು ಗೌರವಿಸುತ್ತಿದ್ದೇನೆ ನಿನ್ನ ಆಜ್ಞೆಗಳಿಗೆ ವಿಧೇಯಳಾ/ನಾ/ಗುತ್ತೇನೆ ನನ್ನ ಸರ್ವಶಕ್ತನೇ ನನಗೆ ಸಂಪೂರ್ಣ ಆರೋಗ್ಯದಲ್ಲಿ ನಡೆಸು. ನನ್ನ ಶರೀರಕ್ಕೆ ಬಂದಿರುವ ರೋಗವನ್ನು ಸ್ವಸ್ಥಪಡಿಸು ನಾನು ಯಾವುದೇ ಕಾರಣಕ್ಕೂ ರೋಗದಲ್ಲಿ ನರಳಬಾರದು, ಸೈತಾನನು ನನ್ನ ಮೇಲೆ ಅಧಿಕಾರ ತೆಗೆದು ಕೊಳ್ಳಬಾರದು. ನನ್ನ ಪೂರ್ವಿಕರ ಶಾಪ ನನ್ನ ಮೇಲೆ ಇರಬಾರದು. ಇವೆಲ್ಲಾದರಿಂದ ನನ್ನನ್ನು ಬಿಡಿಸು. ಈ ಲೋಕದಲ್ಲಿ ನನಗೆ ಅಂತ ಯಾರು ಇಲ್ಲ; ನಾನು ಪಡುವ ಪ್ರಯಾಸದಲ್ಲಿ ನೀನು ಮಾತ್ರ ನನ್ನ

ಜೊತೆಯಾಗಿರುವೆ ಎಂದು ನಾನು ಮನಃಪೂರ್ವಕವಾಗಿ ನಂಬುತ್ತಿದ್ದೇನೆ.

"ದುಡಿದು ಹೊಲಗೇಯುವವರಿಗೆ ಹೊಟ್ಟೆ ತುಂಬಾ ಉಣ್ಣುವನು; (ಜ್ಞಾನೋ 12:11)" ಎಂದು ಜ್ಞಾನೋಕ್ತಿಯಲ್ಲಿ ಹೇಳಿದ ಪ್ರಕಾರ ತಿನ್ನುವುದಕ್ಕೆ ಯಾವ ಕೊರತೆ ನೀನು ಕೊಟ್ಟಿಲ್ಲ. ಆದರೆ ನಾನು ಮಾಡಿರುವ ತಪ್ಪಿನಿಂದ ಈ ರೋಗ ನನ್ನನ್ನು ಪೀಡಿಸುತ್ತಿದೆ ಇದರಿಂದ ದಯವಿಟ್ಟು ನನಗೆ ಬಿಡುಗಡೆ ಮಾಡು. ಗುಣಹೊಂದಿಕೊಳ್ಳುವುದಕ್ಕೆ ಕರ್ತನೇ ನಿನ್ನ ಶಕ್ತಿಯು ನನ್ನಲ್ಲಿ ಇಳಿದುಬರಲಿ. ಈಗಲೇ ಕಾರ್ಯನಡೆಸಲಿ. 'ಯಾಕೆಂದರೆ ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ, ಕ್ಷೇಮವಿಲ್ಲದವರಿಗೆ ಬೇಕು;' ಅದಕ್ಕಾಗಿ ನನಗೆ ನೀನು ವೈದ್ಯನಾಗಿ ಜೊತೆಯಾಗಿದ್ದು ಸ್ವಸ್ಥತೆಯನ್ನು ಅನುಗ್ರಹಿಸು ಯೇಸಪ್ಪಾ. ನಿನ್ನ ಗಾಯವುಳ್ಳ ಹಸ್ತದಿಂದ ನನ್ನ ತಲೆಯನ್ನು ಮುಟ್ಟುವುದಾದರೆ ನಾನು ಗುಣವಾಗುತ್ತೇನೆ, ನಿನ್ನ ರಕ್ತದಿಂದ ನನ್ನ ಪಾಪಗಳು ಶುದ್ಧವಾಗಲಿ, ನನ್ನನ್ನು ಕ್ಷಮಿಸು ಯೇಸಪ್ಪಾ! ಈ ಲೋಕದಲ್ಲಿ ಎಷ್ಟೋ ಜನರು ರೋಗಿಯಾಗಿ ನರಳುತ್ತಿದ್ದಾರೆ ಆದರೆ ಅವರ ಮಧ್ಯದಲ್ಲಿ ನನ್ನನ್ನು ನೀನು ನೋಡಿ ಗುಣಪಡಿಸಲು ಈ ಹೊತ್ತು ನನ್ನ ಬಳಿ ಬಂದಿರುವುದಕ್ಕಾಗಿ ನಿನಗೆ ಸ್ತೋತ್ರ.

ಯೇಸಪ್ಪಾ ನನ್ನ ಜೀವನದಲ್ಲಿ ನೀನು ನಾವಿಕನಾಗಿ ನಡೆಸುವಂತವನಾಗು. ನೀನು ಕುಂಬಾರನು; ನಾನು ಜೇಡಿಮಣ್ಣು ನಿನ್ನ ಚಿತ್ತದ ಪ್ರಕಾರವಾಗಿ ನನ್ನನ್ನು ರೂಪಿಸಿ, ಉತ್ತಮವಾದ ಆರೋಗ್ಯವನ್ನು ಕೊಟ್ಟು ನಿನಗೆ ಸಾಕ್ಷಿಯಾಗಿ ನಿಲ್ಲುವಂತೆ ಸಹಾಯಮಾಡಬೇಕೆಂದು ವಿಜ್ಞಾಪಿಸುತ್ತಿದ್ದೇನೆ. "ನೀನು ನಂಬಿದಂತೆ ನಿನಗಾಗಲಿ, ನೀವು ಸಂಶಯ ಪಡದೆ ನಂಬಿದರೆ ನಾನು ಅಂಜೂರದ ಮರಕ್ಕೆ ಮಾಡಿದಂಥದನ್ನು ನೀವು ಮಾಡುವಿರಿ. ಇದು ಮಾತ್ರವಲ್ಲದೆ ಈ ಬೆಟ್ಟಕ್ಕೆ ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿದರೆ ಅದೂ ಆಗುವುದು. ನೀವು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನೇಲ್ಲಾ ಹೊಂದುವಿರಿ" ಎಂದು ಹೇಳಿರುವುದರಿಂದ ನನ್ನಲ್ಲಿರುವ ಸಂಶಯವನ್ನು ತೆಗೆದುಹಾಕು. ಯಾವುದೇ ಸಂಶಯ ಪಡದೇ ನಿನ್ನ ಬಳಿಯಲ್ಲಿ ವಿಜ್ಞಾಪಿಸಲು ಕಲಿಸಿಕೊಟ್ಟಿದ್ದಕ್ಕಾಗಿ ನಿನಗೆ ಸ್ತೋತ್ರ. ಯೇಸುವೇ ನಾನು ನಿನ್ನನ್ನು ನಂಬಿದ್ದೇನೆ. ನಿನ್ನನ್ನು



ಕ್ಷಮಿಸಿ ನನ್ನಲ್ಲಿ ನಂಬಿಕೆಯನ್ನು ಹೆಚ್ಚಿಸು' ಎಂದು ವಿಜ್ಞಾಪಿಸುತ್ತಿದ್ದೇನೆ. "ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು; ಸಮಾಧಾನದಿಂದ ಹೋಗು; ನಿನ್ನನ್ನು ಕಾಡಿದ ರೋಗವು ಹೋಗಿ ನಿನಗೆ ಗುಣವಾಯಿತು" ಎಂದು ಹೇಳಿ ನನ್ನನ್ನು ಧೈರ್ಯಪಡಿಸಬೇಕೆಂದು ಬೇಡುತ್ತಿದ್ದೇನೆ.

ನನ್ನ ರೋಗ ವಾಸಿ ಆಗುವುದಿಲ್ಲ ಎಂದು ಭಯಪಟ್ಟೆ ಆದರೆ ಯೇಸಪ್ಪಾ ನೀನು ನನ್ನ ಪ್ರಾರ್ಥನೆ ಕೇಳಿ "ನಂಬುವವನಿಗೆ ಎಲ್ಲಾ ಆಗುವುದು" ಎಂದು ದೃಢಪಡಿಸಿ ನನ್ನನ್ನು ಈಗಲೇ ಗುಣಮಾಡಿದ್ದಕ್ಕಾಗಿ ನಿನಗೆ ಸ್ತೋತ್ರ. ಯೇಸಪ್ಪಾ ನೀನು ಮಾಡುವಂತಹ ಒಂದೊಂದು ಅದ್ಭುತಗಳನ್ನು ವರ್ಣಿಸಲು ಅಸಾಧ್ಯ. ಆದರೆ "ಜ್ಞಾನವು ಸಕಲ ಜ್ಞಾನಾವಲಂಬಿಗಳ ಮೂಲಕ ಜ್ಞಾನವೇ ಎಂದು ಗೊತ್ತಾಗುವ ರೀತಿಯಲ್ಲಿ" ಜ್ಞಾನವಂತನಾದ ನೀನು ನನ್ನನ್ನು ಸಕಲ ಅನಾರೋಗ್ಯದಿಂದ ಬಿಡುಗಡೆ ಮಾಡಿ ಗುಣಪಡಿಸಿದ್ದಕ್ಕಾಗಿ ನಿನಗೆ ಸ್ತೋತ್ರ.

ನಿನ್ನ ಕಾರ್ಯಗಳನ್ನು ನಾನು ಮತ್ತೊಬ್ಬರಿಗೆ ಹೇಳಿ ಅವರನ್ನು ಪ್ರೀತಿಸಿ ಆದರಿಸುವಾಗ ಉತ್ತಮವಾದ ಆರೋಗ್ಯವನ್ನು ನನ್ನ ಮುಖಾಂತರ ಅನೇಕರು ಹೊಂದಿಕೊಳ್ಳುವ ಹಾಗೆ ನನಗೆ ಜ್ಞಾನವನ್ನು ಸಮೃದ್ಧಿಯಾಗಿ ಕೊಟ್ಟು ನಡೆಸುವ ದೇವರು ನೀನಾಗಿರುವುದಕ್ಕಾಗಿ ನಿನಗೆ ಸ್ತೋತ್ರ. ನೀವು ಕ್ರಿಸ್ತನವರೆಂದು "ನಿಮಗೆ ಯಾವನಾದರೂ ಒಂದು ತಂಬಿಗೆ ನೀರನ್ನು ಕುಡಿಯುವದಕ್ಕೆ ಕೊಟ್ಟರೆ ಬರತಕ್ಕ ಪ್ರತಿಫಲವು ಅವನಿಗೆ ತಪ್ಪುವುದೇ ಇಲ್ಲ" ಮಾರ್ಕ9:11ರ ವಾಕ್ಯದ ಪ್ರಕಾರ ನನ್ನನ್ನು ಸ್ವಸ್ಥಪಡಿಸಿದ ದೇವರೇ ನನ್ನ ಹಾಗೆಯೇ ಮತ್ತೊಬ್ಬರನ್ನು ಗುಣಪಡಿಸುವಿಯೆಂದು ನಾನು ತಿಳಿಸಲು ಹೋಗುವಾಗ ಅವರು ನನ್ನನ್ನು ಆದರಿಸುವಾಗ ಸತ್ಕರಿಸುವಾಗ ಅವರು ನಿನ್ನ ನಾಮದಿಂದ ಬಿಡುಗಡೆಯು ಪ್ರತಿಫಲವನ್ನು ಹೊಂದಿಕೊಳ್ಳುವುದಕ್ಕೆ ಸಹಾಯ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ ತಂದೆಯೇ. ಆಮೆನ್.

ಯೇಸಪ್ಪಾ ನನಗೆ ಎರಡರಷ್ಟಾಗಿ ಪ್ರತಿಫಲವನ್ನು ಕೊಟ್ಟು ಆರೋಗ್ಯದಾಯಕನಾಗಿ ನನ್ನ ಸಂಗಡವಿದ್ದು ಕಾರ್ಯ ನಡೆಸಬೇಕೆಂದು ಬೇಡಿಕೊಳ್ಳುತ್ತಿದ್ದೇನೆ. ನಿನ್ನ ರಾಜ್ಯಕ್ಕಾಗಿ ದುಡಿಯಲು ನನ್ನನ್ನು ಸಂಪೂರ್ಣ ಆರೋಗ್ಯದಿಂದ ನಡೆಸ ಬೇಕೆಂದು ವಿಜ್ಞಾಪಿಸುತ್ತಿದ್ದೇನೆ. ವಾಕ್ಯ ಹಿಡಿದು ಪ್ರಾರ್ಥಿಸಿ, ನನ್ನನ್ನು ಬಾಧೆ ಪಡಿಸಿದಂತ ರೋಗದಿಂದ ಬಿಡುಗಡೆ

ಹೊಂದಿಕೊಳ್ಳಲು ಸಹಾಯ ಮಾಡಿದ್ದಕ್ಕಾಗಿ ನಿನಗೆ ಸ್ತೋತ್ರ. ಸದಾಕಾಲ ನಾನು ನಿನಗೆ ನಂಬಿಗಸ್ಥಳಾಗಿ ಕಾಣುವಂತೆ ಹೆಚ್ಚು ನಿನ್ನ ಸನ್ನಿಧಿಯಲ್ಲಿ ಕುಳಿತು ನಂಬಿಕೆಯಿಂದ ಪ್ರಾರ್ಥಿಸುವಂತೆ ಪವಿತ್ರಾತ್ಮನ ಶಕ್ತಿಯಿಂದ ತುಂಬಿಸಿ ನನ್ನನ್ನು ನಿನ್ನ ಮಾರ್ಗದಲ್ಲಿ ನಡೆಸಬೇಕಾಗಿ ಯೇಸುಕ್ರಿಸ್ತನ ಅತೀ ಪರಿಶುದ್ಧ ನಾಮದಲ್ಲಿ ಪ್ರಾರ್ಥಿಸಿ ಬೇಡಿಹೊಂದಿದ್ದೇನೆ ನನ್ನ ಜೀವವುಳ್ಳ ಪರಲೋಕದ ತಂದೆಯೇ! ಆಮೆನ್... ಆಮೆನ್.

(ವಿಮೋ 15:26) (ಜ್ಞಾನೋ 28:19) (ಲೂಕ 4:27,40, 5:17,20,31, 7:35) (ಮತ್ತಾಯ 8:2,3,13, 21:21,22) (ಮಾರ್ಕ 5:34, 9:23,41)



## 9.ಜ್ಞಾನಕ್ಕಾಗಿ

ಅಗಮ್ಯವಾದ ಬೆಳಕಿನಲ್ಲಿ ವಾಸ ಮಾಡುವ ನನ್ನ ಪರಲೋಕದ ತಂದೆಯೇ ನಿನ್ನ ಅತೀ ಪರಿಶುದ್ಧ ನಾಮಕ್ಕೆ ಸ್ತೋತ್ರವಾಗಲಿ.

ನನ್ನಲ್ಲಿ ಜ್ಞಾನ ಇಲ್ಲಪ್ಪಾ ನನಗೆ ಜ್ಞಾನವನ್ನು ದಯಪಾಲಿಸು.

ಯೇಸಪ್ಪಾ ನಿನ್ನ ಪಾದಸನ್ನಿಧಿಯಲ್ಲಿ ಕುಳಿತು ಪ್ರಾರ್ಥಿಸುವಂತಹ ಸುಂದರವಾದ ಸಮಯವನ್ನು ನನಗೆ ಕೊಟ್ಟಿರುವುದಕ್ಕಾಗಿ ನಿನಗೆ ಸ್ತೋತ್ರ. ಕರ್ತನೇ ಜ್ಞಾನವನ್ನು ಕೊಡುವಾತನು ನೀನಾಗಿದ್ದೀಯಾ, ನಿನ್ನ ಬಾಯಿಂದಲೇ ತಿಳುವಳಿಕೆಯೂ ವಿವೇಕವೂ ಹೊರಟು ಬರುತ್ತವೆ. ನನ್ನಲ್ಲಿ ನಿನ್ನ ಜ್ಞಾನವನ್ನು ತುಂಬಿಸು. ಈ ಲೋಕದ ಜನರ ಮಧ್ಯದಲ್ಲಿ ನಾನು ಯಾವ ರೀತಿ ಜೀವಿಸಿ ನಿನಗೆ ಸಾಕ್ಷಿಯಾಗಿ ನಿಲ್ಲಬೇಕು, ನಿನ್ನ ಸತ್ಯತೆಯನ್ನು ಹೇಗೆ ತಿಳಿಸಬೇಕು ಎನ್ನುವ ಜ್ಞಾನ ನನ್ನಲ್ಲಿ ದಿನೇ-ದಿನೇ ಬೆಳೆದುಬರಲಿ. ನಿನ್ನ ಜ್ಞಾನವು ನನ್ನ ಹೃದಯದೊಳಗೆ ಪ್ರವೇಶಿಸಲಿ; ತಿಳುವಳಿಕೆಯು ನನ್ನ ಆತ್ಮಕ್ಕೆ ಅಂದವಾಗಿ ಬೆಳೆದು ಹೊರಗೆ ನೋಡುವಂತಹ ಜನರಿಗೆ ಪ್ರಕಾಶಿಸಲಿ, ಅವರು ನನ್ನ ಹಾಗೆ ನಿನ್ನನ್ನು ಕಂಡು ಕೊಳ್ಳುವಂತೆ ಸಹಾಯಮಾಡು. ಈ ಲೋಕದಲ್ಲಿ ನಾನಿರುವ ದಿನಗಳವರೆಗೂ ನಿನ್ನ ಜ್ಞಾನವನ್ನು ಪಡೆದುಕೊಂಡು ಜೀವನವನ್ನು ಸಾಗಿಸಿ ಧನ್ಯಳಾ/ನಾ/ಗಲು ಸಹಾಯಮಾಡು. ಈ ಜನರ ಮಧ್ಯದಲ್ಲಿ ವಿವೇಕದಿಂದ ನಾನು ಮಾತಾಡಿ ಅವರನ್ನು ಸಂಪಾದಿಸಿ ನಿನ್ನ ದೃಷ್ಟಿಯಲ್ಲಿ ನಾನು ಭಾಗ್ಯವಂತಳಾ/ನಾ/ಗಲು ಆಶೀರ್ವದಿಸು. ಯೇಸಪ್ಪಾ ಯಾರಿಗೂ ಬೇಡವಾದ ನನ್ನನ್ನು ನೀನು ಉಪಯೋಗಿಸುವಾಗ ನನ್ನಲ್ಲಿ ನೀನು ಇಟ್ಟಿರುವ ಜ್ಞಾನವನ್ನು ಎಲ್ಲರೂ ನೋಡಿ ಸನ್ಮಾನಕ್ಕೆ ನನ್ನನ್ನು ಬಾಧ್ಯಳ/ನ/ನ್ನಾಗಿ ನಿಲ್ಲಿಸುವಾಗ ನಿನ್ನ ನಾಮ ಮಹಿಮೆಗೊಳ್ಳಲಿ. ನನ್ನನ್ನು ತಳ್ಳಿಹಾಕಿದ ಜನರು ಅವಮಾನಕ್ಕೆ ಒಳಗಾಗಲಿ. ಹೀಗೆ ನಿನ್ನ ನಾಮದಲ್ಲಿ ಜ್ಞಾನವನ್ನು ನಿನ್ನಿಂದ ನಾನು ಪಡೆದುಕೊಂಡು ನಡೆಯುವಾಗ ಯಾವ ಕೊರತೆಯೂ ನನಗೆ ಆಗುವುದಿಲ್ಲವೆಂದು ನಂಬುತ್ತೇನೆ. ಸಮೃದ್ಧಿಯಿಂದ ನನ್ನ ಕಣಜಗಳು ತುಂಬಲ್ಪಡಲಿ. ಮನೆಯಲ್ಲಿಯೂ ಆಹಾರಕ್ಕೂ ದವಸ ಧಾನ್ಯಕ್ಕೂ ಕೊರತೆ ಉಂಟಾಗದಿರಲಿ; ಯೇಸಪ್ಪಾ ಎಷ್ಟೇ ಸಮೃದ್ಧಿಯಾಗಿ ಬೆಳೆದು ಬಂದರೂ ನಿನ್ನ

ಶಿಕ್ಷೆಯನ್ನು ತಾತ್ಸಾರ ಮಾಡದೇ ಗದರಿಸುವಾಗ ಬೇಸರ ಮಾಡಿಕೊಳ್ಳದೇ ಪ್ರೀತಿಯಿಂದ ನಿನ್ನ ಪಾದದಲ್ಲಿ ತಗ್ಗಿಸಿಕೊಂಡು ನಡೆದುಕೊಳ್ಳುವಂತೆ ಕೃಪೆತೋರು. "ತಂದೆಯು ತನ್ನ ಮುದ್ದು ಮಗನನ್ನು ಗದರಿಸುವಂತೆ ಕರ್ತನು ತಾನು ಪ್ರೀತಿಸುವವನನ್ನೇ ಗದರಿಸುತ್ತಾನೆ" ಆದುದರಿಂದ ನಾನು ಎಚ್ಚರಿಕೆಯಿಂದ ನಡೆಯಲು ಕಲಿಸಿಕೊಡು.

ಯೇಸಪ್ಪಾ ಏನೇ ಕೊರತೆಯಾದರೂ, ಎಷ್ಟೇ ಇಕ್ಕಟ್ಟುಗಳು ಕಷ್ಟಗಳು ಬಂದರೂ ನಿನ್ನ ಪ್ರೀತಿಯನ್ನು ತಾತ್ಸಾರ ಮಾಡದೇ ನನ್ನನ್ನು ಗದರಿಸಿ ಎಚ್ಚರಿಸುವಾಗ ಅರ್ಥಮಾಡಿಕೊಂಡು ನಿನ್ನ ಆಶೀರ್ವಾದವನ್ನು ಹೊಂದಿಕೊಳ್ಳುವ ಕೃಪೆಯನ್ನು ನನಗೆ ಅನುಗ್ರಹಿಸು. ಅಜ್ಞಾನಿಯ ಹಾಗೆ ನಡೆದುಕೊಳ್ಳದೇ, ದುಡುಕಿ ಮಾತನಾಡದೇ, ನನ್ನ ಹಾಗೆಯೇ ನಿನ್ನ ಜ್ಞಾನವನ್ನು ಹೊಂದಿರುವ ಜನರನ್ನು ಪ್ರೀತಿಸಿ; ನಿನ್ನ ಜ್ಞಾನದ ಉಪದೇಶವನ್ನು ಹೆಚ್ಚು ಅವರಿಗೆ ತಿಳಿಸುತ್ತಾ ಜನರ ಮಧ್ಯದಲ್ಲಿ ನೀತಿವಂತಳಾ/ನಾ/ಗಿ, ತಿಳುವಳಿಕೆಯನ್ನು ಪಡೆಯುತ್ತಾ ಅನೇಕರನ್ನು ತಿಳುವಳಿಕೆಯಲ್ಲಿ ನಡೆಸುತ್ತಾ ನಿನ್ನ ರಾಜ್ಯವನ್ನು ಕಟ್ಟಲು ನನಗೆ ಸಹಾಯಮಾಡು.

ನೀನು ಜ್ಞಾನದಿಂದ ಕೊಟ್ಟಿರುವ ಆಜ್ಞೆಗಳನ್ನು ಕೈಕೊಂಡು ನಡೆಸಲು ನನಗೆ ಬುದ್ಧಿಯನ್ನು ಚುರುಕುಗೊಳಿಸು. ಜನರು ಹರಟೆಯ ಮಾತುಗಳಿಂದ ನೀನು ಬೋಧಿಸುವ ಜ್ಞಾನವನ್ನು ಅರ್ಥಮಾಡಿಕೊಳ್ಳದೇ ಮೂರ್ಖರಾಗಿ ನಡೆದು ಸರಿಯಾದ ರೀತಿಯಲ್ಲಿ ಬೆಳೆಯದೇ ಬಿದ್ದು ಹೋಗುತ್ತಿದ್ದಾರೆ. ನಾನು ಆ ರೀತಿ ಆಗಬಾರದು. ನೀನು ತಿಳಿಸಿರುವ ಸಂಗತಿಗಳನ್ನು, ನೀನು ಕಲಿಸಿಕೊಟ್ಟಿರುವ ಉಪದೇಶವನ್ನು ಸಾರುತ್ತಾ ನಿನಗೆ ನಂಬಿಗಸ್ಥಳಾ/ನಾ/ಗಿ ಕಾಣಲು ಸಹಾಯಮಾಡು. ಯೇಸಪ್ಪಾ ನಾನು ಯಾರ ಮುಂದೆಯೂ ಹೆಮ್ಮೆ ಪಡುವ ರೀತಿಯಲ್ಲಿ ಕಾಣಬಾರದು; ದೀನತೆಯಿಂದ ನಡೆದುಕೊಳ್ಳುವಂತೆ ನನಗೆ ಕಲಿಸಿಕೊಡು, ಕಾರಣ "ಧರ್ಮಾತ್ಮನ ಫಲ ಜೀವವೃಕ್ಷ;" (ಜ್ಞಾನೋ 11:30)

"ಜ್ಞಾನಿಯು ಆತ್ಮಗಳನ್ನು ಆಕರ್ಷಿಸುವನು" ಆದುದರಿಂದ ನಾನು ನಿನ್ನ ರಾಜ್ಯಕ್ಕೆ ಆತ್ಮಗಳನ್ನು ಆದಾಯ ಮಾಡಬೇಕು. ನೀನು ಈ ಲೋಕದಲ್ಲಿರುವಾಗ ಯಾವ ರೀತಿ ಜನರನ್ನು ಆಕರ್ಷಿಸಿ ನಿನ್ನ ಪ್ರೀತಿಯನ್ನು ತುಂಬಿಸಿ ಅದ್ಭುತಗಳನ್ನು ನಡೆಸುತ್ತಾ ತಂದೆ ಆಜ್ಞೆಯನ್ನು ಕೈಗೊಂಡು ನಡೆದು, ಈ



ಲೋಕವನ್ನು ಜಯಿಸಿದೆಯೋ ಅದೇ ರೀತಿ ಯೇಸುವೇ ನಿನ್ನ ನಾಮದಲ್ಲಿ ನಾನು ನಿನ್ನ ಮಗಳಾ/ನಾ/ಗಿ ಸದಾಕಾಲ ನಿನ್ನ ಹಾಗೆ ಸೇವೆ ಮಾಡುತ್ತಾ ಆತ್ಮಗಳನ್ನು ಪರಲೋಕ ರಾಜ್ಯಕ್ಕಾಗಿ ಗೆಲ್ಲಲು ಸಹಾಯಮಾಡು.

ನಿನ್ನ ಜ್ಞಾನವನ್ನು ಹೊಂದಿಕೊಳ್ಳುತ್ತಾ ನಿನ್ನ ಸಹವಾಸದಲ್ಲೇ ನಾನು ಬೆಳೆಯಬೇಕು. ಯಾವುದೇ ಕಾರಣಕ್ಕೂ ಜ್ಞಾನಹೀನರ ಒಡನಾಟ ನನಗೆ ಬೇಡ, ಅದರಿಂದ ನಾನು ಸಂಕಟ ಪಡುವುದು ಬೇಡ ಯೇಸಪ್ಪಾ, ನನಗೆ ನೀನು ಮಾತ್ರ ಸಾಕು. ಜ್ಞಾನಹೀನರ ಮಧ್ಯದಲ್ಲಿ ಹೋಗುವುದಾದರೆ ಗರ್ವವು ತುಂಬಿಕೊಳ್ಳುತ್ತದೆ; ಆದರೆ ನಿನ್ನ ಜ್ಞಾನದಲ್ಲಿ ಇರುವುದಾದರೆ ಅವರ ಬಾಯಿಂದ ಬರುವ ಗರ್ವದ ಮಾತುಗಳಿಗೆ ಸೋತುಹೋಗದಂತೆ ನೀನು ನನಗೆ ಕೊಟ್ಟಿರುವ ಜ್ಞಾನದ ತುಣಿಗಳ ಮುಖಾಂತರ ಜ್ಞಾನಹೀನರಿಂದ ನನ್ನನ್ನು ತಪ್ಪಿಸಿಕೊಳ್ಳಲು ನನಗೆ ಸಹಾಯಮಾಡು.

ನಿನ್ನ ವಿವೇಕವು ನನ್ನ ಹೃದಯಕ್ಕೆ ಜ್ಞಾನಾಶ್ರಯವು ಆಗಿರಲಿ. ಜ್ಞಾನಹೀನನು ಎಲ್ಲವನ್ನು ದುಡುಕಿ ಮಾತಾಡಿ ಒಳಗುಟ್ಟನ್ನು ರಟ್ಟು ಮಾಡುತ್ತಾನೆ. ನಾನಾದರೋ ಜ್ಞಾನಹೀನಳಾ/ನಾ/ಗದಂತೆ ನನಗೆ ಸಹಾಯಮಾಡು. ನನ್ನನ್ನು ಯಾರಾದರೂ ನಂಬಿ ಅವರ ರಹಸ್ಯವನ್ನೆಲ್ಲಾ ನನ್ನ ಬಳಿಯಲ್ಲಿ ಹೇಳಿಕೊಳ್ಳುವುದಾದರೆ ಅಂತಹ ರಹಸ್ಯಗಳನ್ನು ನಾನು ಎಂದಿಗೂ ಯಾರ ಮುಂದೆಯೂ ಹೇಳದಂತೆ ಜ್ಞಾನದಿಂದ ನಡೆಯಲು ಸಹಾಯ ಮಾಡಬೇಕೆಂದು ವಿಜ್ಞಾಪಿಸುತ್ತಿದ್ದೇನೆ.

ನೀನು ಶಿಕ್ಷಿಸುವಾಗ ಅದನ್ನು ಅಂಗೀಕರಿಸದೇ ತನ್ನನ್ನೇ ತಾನು ನಿರಾಕರಿಸಿಕೊಂಡು ಇಷ್ಟ ಬಂದ ರೀತಿಯಲ್ಲಿ ನಡೆದುಕೊಂಡು ಗದರಿಸುವಾಗ ಕೇಳದೇ ಹೋದರೆ ಜೀವನ ನಶಿಸಿ ಹೋಗುತ್ತೇ; ನಿನ್ನ ಗದರಿಕೆಯನ್ನು ಕೇಳಿ ಮುಂದೆ ಹೋಗುವುದಾದರೆ ಬುದ್ಧಿ ಪಡೆದುಕೊಂಡು ನಿನ್ನ ಭಯದಲ್ಲಿ ಜೀವಿಸುತ್ತಾ ಜ್ಞಾನವನ್ನು ಹೊಂದಿಕೊಂಡು ಮತ್ತೊಬ್ಬರಿಗೆ ಉಪದೇಶಿಸುತ್ತಾ ಗೌರವಕ್ಕೆ ಮೊದಲು ವಿನಯವನ್ನು ಕಲಿತುಕೊಂಡು ನಿನ್ನ ಮಾರ್ಗದಲ್ಲಿ ನಡೆಯಲು ಸಾಧ್ಯವಾಗುತ್ತದೆ. ನಿನ್ನ ಜೀವದ ಮಾತುಗಳನ್ನು ಕೇಳುತ್ತಾ ನಿನ್ನ ಗದರಿಕೆಗೆ ಕಿವಿಗೊಡುವುದಾದರೆ ಜ್ಞಾನಿಗಳ ಮಧ್ಯದಲ್ಲಿ ನಾನು ಜೀವಿಸಲು ಸಾಧ್ಯವಾಗುತ್ತದೆ. ಆಗ ಜ್ಞಾನ ಹೃದಯರಿಗೆ ಜಾಣರೆಂಬ ಬಿರುದು ಬರುವದು;

ಸವಿ ತುಣಿಯಿಂದ ಉಪದೇಶ ಶಕ್ತಿಯು ಹೆಚ್ಚುವುದು ಎನ್ನುವ ನಿನ್ನ ಮಾತು ನನ್ನಲ್ಲಿ ನೆರವೇರುತ್ತದೆ.

ಯೇಸಪ್ಪಾ, ನನ್ನನ್ನು ನೀನು ಸಮೃದ್ಧಿಯಾಗಿ ಬೆಳೆಸುತ್ತಿರುವುದಕ್ಕಾಗಿ ನಿನಗೆ ಸ್ತೋತ್ರ. ನನ್ನಲ್ಲಿ ಹೊನ್ನು ಉಂಟು, ಹವಳದ ರಾಶಿ ಉಂಟು ಆದರೆ ಜ್ಞಾನದ ತುಟಿಗಳೇ ಅಮೂಲ್ಯಾಭರಣ ಆಗಿರುವುದರಿಂದ ನನಲ್ಲಿ ನಿನ್ನ ಜ್ಞಾನವು ಆಳವಾದ ನೀರಾಗಿ ತುಂಬಿರಲಿ; ಜ್ಞಾನದ ಬುಗ್ಗೆ ಸದಾ ಹರಿಯುವ ತೊರೆಯಾಗಿರಲಿ, ನನ್ನ ನಡತೆಯು ಶುದ್ಧವೂ ಸತ್ಯವೂ ಆಗಿ ನಿನ್ನ ಗುಣವನ್ನು ತೋರ್ಪಡಿಸಲಿ. ನಾನು ತಪ್ಪು ಮಾಡುವಾಗ ನನಗೆ ದಂಡನೆಯಾದರೆ ನೋಡಿದ ಜನರು ನಿನ್ನ ಜ್ಞಾನವನ್ನು ಪಡೆದುಕೊಂಡು ನಿನ್ನ ಮಕ್ಕಳಾಗಿ ಜೀವಿಸಲು ಸಾಧ್ಯವಾಗುತ್ತದೆಂದು ತಿಳಿದು. ನೀನು ಕೊಡುವ ದಂಡನೆಗೆ ನಾನು ಗುಣುಗುಟ್ಟದೇ ಇರುವ ಹಾಗೆ ನನಗೆ ಜ್ಞಾನವನ್ನು ದಯಪಾಲಿಸು.

ನನ್ನ ಮನೆಯಲ್ಲಿ ಎಣ್ಣೆಯೂ ಶ್ರೇಷ್ಠ ಸಂಪತ್ತೂ ಯಾವಾಗಲೂ ಇರುವಂತೆ ನನ್ನನ್ನು ಆಶೀರ್ವದಿಸು.

"ಕಂದಾ ಜೇನು ಚನ್ನಾಗಿದೆಯಲ್ಲವೆ, ಜೇನುತುಪ್ಪವು ನಿನ್ನ ಬಾಯಿಗೆ ಸಿಹಿಯಷ್ಟೇ, ಅದನ್ನು ತಿನ್ನು, ಜ್ಞಾನವು ನಿನ್ನ ಆತ್ಮಕ್ಕೆ ಹೀಗೆಯೇ ಇರುವುದೆಂದು ತಿಳಿದುಕೋ; ಅದನ್ನು ಪಡೆದುಕೊಂಡರೆ ಮುಂದೆ ಫಲಕಾಲ ಬರುವದು, ನಿನ್ನ ನಿರೀಕ್ಷೆಯು ನಿರರ್ಥಕವಾಗದು" ಎನ್ನುವ ಭರವಸೆಯ ಮಾತು ನನ್ನಲ್ಲಿ ನೀನು ತುಂಬಿರುವುದಕ್ಕಾಗಿ ನಿನಗೆ ಸ್ತೋತ್ರ. ಯೇಸಪ್ಪಾ ನಾನು ನಿನಗೆ ವಿರುದ್ಧವಾದ ಯಾವುದೇ ಮಾರ್ಗದಲ್ಲಿ ನಡೆಯಬಾರದು. ನನ್ನಲ್ಲೇ ಭರವಸವಿಟ್ಟು ನಾನು ನಡೆಯಬಾರದು. ನಿನ್ನ ಜ್ಞಾನದಿಂದ ಮಾತ್ರ ನಡೆಯುವಂತೆ ಸಹಾಯಮಾಡು, ಎಂತಹ ಪರಿಸ್ಥಿತಿಗಳು ಎದುರಾಗಿ ಬರುವುದಾದರೂ ಅದನ್ನು ಜಯಿಸುವಂತಹ ಜ್ಞಾನದಿಂದ ನನ್ನನ್ನು ತುಂಬಿಸು. ಮೂಢನ ರೀತಿಯಲ್ಲಿ ಕೋಪದಿಂದ ಹಾಳುಮಾಡಿಕೊಳ್ಳದಂತೆ; ಜಾಣಳ/ನ ರೀತಿಯಲ್ಲಿ ಜ್ಞಾನದಿಂದ ಉಳಿಸಿಕೊಳ್ಳುವ ಹಾಗೆ ನನ್ನನ್ನು ಈ ಜನರ ಮಧ್ಯದಲ್ಲಿ ನಡೆಸು ಯೇಸಪ್ಪಾ!

"ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರಕುವದು; ದೇವರು ಹಂಗಿಸದೆ ಎಲ್ಲರಿಗೂ ಉದಾರಮನಸ್ಸಿನಿಂದ ಕೊಡುವವನಾಗಿದ್ದಾನೆ." ಎಂದು ನೀನು



ಹೇಳಿರುವುದರಿಂದ ಯೇಸಪ್ಪಾ ನಿನ್ನ ಪಾದ ಸನ್ನಿಧಿಯಲ್ಲಿ ಪ್ರತಿದಿನ ಬೇಡುತ್ತಾ ನಿನ್ನ ಜ್ಞಾನವನ್ನು ಪಡೆದುಕೊಂಡು ಅನೇಕರಿಗೆ ನಾನು "ದೇವರು ಜ್ಞಾನಿಗಳನ್ನು ನಾಚಿಕೆಪಡಿಸುವದಕ್ಕಾಗಿ ಈ ಲೋಕದ ಬುದ್ಧಿಹೀನರನ್ನು ಆರಿಸಿಕೊಂಡಿದ್ದಾನೆ; ದೇವರು ಬಲಿಷ್ಟರನ್ನು ನಾಚಿಕೆಪಡಿಸುವದಕ್ಕಾಗಿ ಈ ಲೋಕದ ಬಲಹೀನರನ್ನು ಆರಿಸಿಕೊಂಡಿದ್ದಾನೆ;" ಆತನ ಸಾಕ್ಷಿಗಾಗಿ ನನ್ನನ್ನು ಉಪಯೋಗಿಸಿ ಆತನ ಮಹಿಮೆಯನ್ನು ತಿಳಿದುಕೊಳ್ಳಲು ನನ್ನ ಸಂಗಡ ಇದ್ದು ಕಾರ್ಯ ನಡೆಸುತ್ತಿದ್ದಾನೆ ಎಂದು ಕೂಗಿ ಹೇಳಲು ಸಹಾಯಮಾಡು, "ನಾನು ಸಮಯವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದೆಂದು ಉಪಯೋಗಿಸಿ ಹೊರಗಿನವರ ಮುಂದೆ ನಾನು ಜ್ಞಾನವುಳ್ಳವಳಾ/ನಾ/ಗಿ ನಡೆದುಕೊಳ್ಳುವಂತೆ" ಸಹಾಯ ಮಾಡಬೇಕೆಂದು ವಿಜ್ಞಾಪಿಸುತ್ತದ್ದೇನೆ. ನಾನು ಜ್ಞಾನವಂತಳಾ/ನಾಗಿ ಜೀವಿಸುವುದೇ ನಿನ್ನ ಇಷ್ಟವಾಗಿರುವುದಕ್ಕಾಗಿ ನಿನಗೆ ಸ್ತೋತ್ರ ಮಾಡುತ್ತಾ ಯೇಸುಕ್ರಿಸ್ತನ ನಾಮದಲ್ಲಿ ಪ್ರಾರ್ಥಿಸಿ ಬೇಡಿಹೊಂದಿದ್ದೇನೆ ನನ್ನ ಜೀವವುಳ್ಳ ತಂದೆಯೇ. ಆಮೆನ್....ಆಮೆನ್.

(ಜ್ಞಾನೋಕ್ತಿ 2:6,10, 3:10-13,35 9:8,9, 10:8,14, 11:2,30, 13:20, 14:3,33 15:31,32, 16:21, 18:4, 20:15, 21:11,20, 24:13,14, 28:26, 29:8,11) (ಯಾಕೋಬ 1:5) (1ಕೊರಿಂಥ 1:27) (ಕೊಲೊಸ್ಸೆ 4:5)

## 10. ನೀತಿವಂತರು

ಪರಿಶುದ್ಧಾತ್ಮನೇ ನಿನ್ನ ಅತೀ ಪರಿಶುದ್ಧನಾಮಕ್ಕೆ ಸ್ತೋತ್ರ. ಯೇಸಪ್ಪಾ ನಿನ್ನ ಪಾದ ಸನ್ನಿಧಿಯಲ್ಲಿ ಬಂದಿದ್ದೇನೆ ನನ್ನ ಪ್ರಾರ್ಥನೆಯನ್ನು ಕೇಳು. ಸದುತ್ತರವನ್ನು ದಯಪಾಲಿಸು ನಿನ್ನ ಪರಿಶುದ್ಧ ರಕ್ತದಿಂದ ತೊಳೆದು ನನ್ನ ಪಾಪಗಳನ್ನು ವಿಮೋಚಿಸಿದ್ದಕ್ಕಾಗಿ ಸ್ತೋತ್ರ. ಯೇಸಪ್ಪಾ ನಾನು ನಿನ್ನ ಮುಂದೆ ನೀತಿವಂತಳಾ/ನಾ/ಗಿ ಕಾಣಬೇಕು, ನನಗೆ ನೀನು ಪರಿಶುದ್ಧ ಜೀವನವನ್ನು ಕಲಿಸಿಕೊಡು. "ಬೇಡಿಕೋ ನಿನಗೆ ಸಿಗುತ್ತದೆ" ಎಂದು ನೀನು ಹೇಳಿರುವುದರಿಂದ ಯೇಸುವಿನ ನಾಮದಲ್ಲಿ ನಿನ್ನ ಬಳಿ ಬೇಡುತ್ತಿದ್ದೇನೆ. ನನ್ನನ್ನು ನೀನು ನೋಡುವಾಗ ನೀತಿವಂತಳಾ/ನಾ/ಗಿ ಕಾಣಬೇಕು, ನಿನ್ನ ಮುಂದೆ ದೋಷಿಯಾಗಿ ನಿಲ್ಲಬಾರದು. ಸತ್ಯವೇದವು ಹೇಳುತ್ತದೆ – "ನೀವು ಸ್ವಸ್ಥವಾಗ ಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ; ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ" ಎಂದು ತಿಳಿಸಿದ್ದೀಯಾ ಯೇಸಪ್ಪಾ, ನಾನು ನಿನ್ನ ಮುಂದೆ ಎಲ್ಲಾ ತಪ್ಪುಗಳನ್ನು ಒಪ್ಪಿಕೊಂಡಿದ್ದೇನೆ. ಅದನ್ನು ಸಂಪೂರ್ಣವಾಗಿ ಬಿಟ್ಟು ಒಳ್ಳೇ ಆರೋಗ್ಯದಲ್ಲಿ ನೆಲೆಗೊಂಡು ಅನೇಕರನ್ನು ನಿನ್ನ ರಾಜ್ಯಕ್ಕೆ ಕರತರಬೇಕು. ನನಗೆ ಉಪದೇಶ ಮಾಡುವಂತಹ ಬೋಧಕರನ್ನು ನಾನು ಗೌರವಿಸಿ, ಅವರು ಹೇಳಿಕೊಡುವ ನಿನ್ನ ವಾಕ್ಯವನ್ನು ಅಂಗೀಕರಿಸಿಕೊಂಡು ಅದರ ಪ್ರಕಾರ ಜೀವಿಸಿ ಆಶೀರ್ವಾದಪಡೆದುಕೊಳುವಂತೆ ಸಹಾಯ ಮಾಡು ನನ್ನ ತಪ್ಪುಗಳನ್ನು ಅವರು ನನಗೆ ತಿಳಿಸುವಾಗ ನನ್ನಲ್ಲಿ ನೂತನ ಮನಸ್ಸು ಉಂಟಾಗಲಿ ನನ್ನ ಪಾಪಗಳು ಅಳಿದು ಹೋಗಲಿ.

ನಾನು ಬಾಲಕನಾಗಿರುವಾಗ ನನ್ನ ಸಂಗಡ ಇದ್ದು ನಡೆಸಿದೆ, ತಾಯಿಗರ್ಭದಲ್ಲೇ ರೂಪಿಸಿ ಭೂಮಿಯಲ್ಲಿ ನನ್ನನ್ನು ಬೆಳೆಸಿ ಒಂದು ಒಳ್ಳೇ ಸಭೆಯನ್ನು ಒಳ್ಳೇ ಬೋಧಕರನ್ನು ಅನುಗ್ರಹಿಸಿ ನಿನಗಾಗಿ ಜೀವಿಸುವಂತೆ ಈ ಲೋಕದಿಂದಲೂ ಈ ಲೋಕದ ಕಾರ್ಯದಿಂದಲೂ ನನ್ನನ್ನು ಪ್ರತ್ಯೇಕಿಸಿ ದಿನ-ದಿನವೂ ನನ್ನನ್ನು ನೂತನ ಪಡಿಸುತ್ತಿರುವುದಕ್ಕಾಗಿ ನಿನಗೆ ಸ್ತೋತ್ರ. ಅನೇಕ



ವಿಷಯಗಳಲ್ಲಿ ನಾನು ದಿಕ್ಕಿಲ್ಲದೆ ಬಿದ್ದಿರುವಾಗ ನನ್ನನ್ನು ಸಂತೈಸಿದೆ, ಹಸಿವನ್ನು ನೀಗಿಸಿದೆ, ಆದರೆ ಭಿಕ್ಷೆ ಬೇಡಿ ತಿನ್ನುವಂತೆ ನನ್ನನ್ನು ನೀನು ಬಿಡಲಿಲ್ಲ. ನನ್ನ ಬಾಯಿಂದ ನೀತಿ ಮಾತನ್ನು ಹಾಡುವಂತೆ ಸುಜ್ಞಾನವನ್ನು ನುಡಿಯುವಂತೆ ನನ್ನ ನಾಲಿಗೆಯು ನ್ಯಾಯವಾದದ್ದನ್ನೇ ಹೇಳುವಂತೆ ಸಹಾಯಕನಾಗಿ ಈ ದಿನದವರೆಗೂ ನನ್ನನ್ನು ನಡೆಸುತ್ತಿರುವುದಕ್ಕಾಗಿ ನಿನಗೆ ಸ್ತೋತ್ರ.

ಯೇಸಪ್ಪಾ ಎಷ್ಟೇ ಕಷ್ಟಗಳು ಬಂದರೂ ಇಕ್ಕಟ್ಟಿನಲ್ಲಿ ಇರುವುದಾದರೂ ನೀನು ನನ್ನನ್ನು ಕೈ ಬಿಡದೇ ನಡೆಸಿಕೊಂಡು ಬಂದಿದ್ದೀಯಾ. ನಾನು ತಿಳಿದು ಅನೇಕ ತಪ್ಪುಗಳನ್ನು ಮಾಡಿದರೂ ನನ್ನನ್ನು ತಳ್ಳದೇ ಕ್ಷಮಿಸಿ ನಿನ್ನ ಮಗುವಾಗಿ ಜೀವಿಸಲು ಮತ್ತೊಂದು ಅವಕಾಶವನ್ನು ನನಗೆ ನೀಡಿರುವುದಕ್ಕಾಗಿ ನಿನಗೆ ಸ್ತೋತ್ರ. ದುಷ್ಟನ ಆಲೋಚನೆಗೆ ಒಳಗಾಗಿ ಸ್ವಂತಬುದ್ಧಿಯಿಂದ ಸಾಲ ಮಾಡಿ ತೀರಿಸಲಾರದೆ ನರಳುತ್ತಿರುವಾಗ ನಿನ್ನ ಪ್ರೀತಿಯ ಆದರಣೆಯಿಂದ ನನ್ನನ್ನು ಸಾಲದಿಂದ ತಪ್ಪಿಸಿ ಮತ್ತೊಬ್ಬರಿಗೆ ಪರೋಪಕಾರಿಯಾಗಿ ಧರ್ಮಕೊಡುವ ಹಾಗೆ ನನ್ನನ್ನು ನೀತಿವಂತಳಾ/ನಾ/ಗಿ ಮಾರ್ಪಡಿಸಿದ್ದಕ್ಕಾಗಿ ನಿನಗೆ ಲೆಕ್ಕವಿಲ್ಲದಷ್ಟು ಸ್ತೋತ್ರಗಳು. ನಿನ್ನ ವಾಕ್ಯ ಹೇಳುವ ಪ್ರಕಾರ- "ನೀತಿವಂತರ ರಕ್ಷಣೆ ಯೆಹೋವನಿಂದಲೇ ಇಕ್ಕಟ್ಟಿನಲ್ಲಿ ಆತನೇ ಅವರಿಗೆ ದುರ್ಗಸ್ಥಾನ" ಎನ್ನುವ ಮಾತಿನ ಪ್ರಕಾರ ಯೇಸಪ್ಪಾ ನನ್ನನ್ನು ಸಾಲದಿಂದ ಬಿಡಿಸಿದ್ದಕ್ಕಾಗಿ ನಿನಗೆ ಸ್ತೋತ್ರ. ನನ್ನನ್ನು ಸದಾ ಚೈತನ್ಯಗೊಳಿಸಿದ್ದಕ್ಕಾಗಿ ಸ್ತೋತ್ರ. ಯೇಸಪ್ಪಾ ಈ ಲೋಕದಲ್ಲಿ ಅನೇಕರು ಸಮೃದ್ಧಿಯಿಂದ ಬಾಳುತ್ತಾ ನಿನ್ನನ್ನು ತಿಳಿಯದೇ ಮಹಾಸಮೃದ್ಧಿಯಾಗಿ ಬೆಳೆಯುತ್ತಿದ್ದಾರೆ. ಆದರೆ ನಿನ್ನ ನಾಮವನ್ನು ತಿಳಿದಿರುವ ನಾನು ನೀತಿವಂತಳಾ/ನಾ/ಗಿ ಬಡತನದಲ್ಲಿ ಜೀವಿಸುವುದು ನನಗೆ ಲೇಸಾಗಿದೆ, ಅವರ ತೋಳುಗಳ ಬಲ ಮುರಿದುಹೋಗುವುದು. ಆದರೆ ನಿನ್ನನ್ನೇ ನಂಬಿರುವ ನನ್ನನ್ನು ಎಲ್ಲರ ಮುಂದೆ ನೀನು ಉದ್ಧರಿಸುತ್ತಿರುವುದಕ್ಕಾಗಿ ನಿನಗೆ ಸ್ತೋತ್ರ. ಯೇಸಪ್ಪಾ ನೀನು ನೀತಿವಂತರನ್ನು ಕರೆಯುವುದಕ್ಕೆ ಬಂದಿಲ್ಲ; ಪಾಪಿಗಳನ್ನು ಕರೆಯುವುದಕ್ಕೆ ಬಂದಿರುವುದಕ್ಕಾಗಿ ನಿನಗೆ ಸ್ತೋತ್ರ. ನನ್ನ ಎಲ್ಲಾ ಕಾರ್ಯಗಳನ್ನು ನೋಡಿ ನನ್ನ ಅವಶ್ಯಕತೆಗಳಿಗೆ ಬೇಕಾಗುವಂತಹದನ್ನೆಲ್ಲಾ ಒದಗಿಸಿಕೊಡುವ ಯೆಹೋವ ಯಿರೆಯಾಗಿ ನನ್ನೊಂದಿಗೆ ಇರುವುದಕ್ಕಾಗಿ

ನಿನಗೆ ಸ್ತೋತ್ರ. ನನ್ನ ಮನೆಯನ್ನು, ಕೆಲಸ ಕಾರ್ಯಗಳನ್ನು ನೀನು ಆಶೀರ್ವದಿಸಿ ನೀತಿವಂತಳಾ/ನಾ/ಗಿ ನಿಲ್ಲಿಸಿರುವುದಕ್ಕಾಗಿ ನಿನಗೆ ಸ್ತೋತ್ರ. ಯೇಸಪ್ಪಾ ನಾನು ಯಾವಾಗಲೂ ನಿನ್ನ ಮುಂದೆ ಶುದ್ಧಳಾಗಿ ಕಾಣುವಂತೆ ಪರಿಶುದ್ಧವಾಗಿ ಜೀವಿಸುವಂತೆ ನನಗೆ ಸಹಾಯ ಮಾಡು ಎಂದು ಯೇಸುಕ್ರಿಸ್ತನ ನಾಮದಲ್ಲಿ ಪ್ರಾರ್ಥಿಸಿ ಬೇಡಿಕೊಂಡಿದ್ದೇನೆ ನನ್ನ ಜೀವವುಳ್ಳ ತಂದೆಯೇ ಆಮೆನ್.

(ಯಾಕೋಬ 5:16) (ಕೀರ್ತನೆ 37:16,17,21,25,30,39) (ಲೂಕ 5:32) (ಮತ್ತಾಯ 9:13) (ಜ್ಞಾನೋ3:33)



## 11. ನಿತ್ಯಜೀವ

ನನ್ನನ್ನು ಬಹಳವಾಗಿ ಪ್ರೀತಿಮಾಡುವ ತಂದೆಯೇ ನಿನ್ನ ಅತೀ ಪರಿಶುದ್ಧ ನಾಮಕ್ಕೆ ಸ್ತೋತ್ರ. ಯೇಸಪ್ಪಾ ಇದುವರೆಗೂ ನನ್ನನ್ನು ನಿನ್ನ ಅಂಗೈಯಲ್ಲಿ ಚಿತ್ರಿಸಿಕೊಂಡು ಭ'ಧ್ರವಾಗಿ ಇಟ್ಟುಕೊಂಡು ಕಾಪಾಡಿಕೊಂಡು ಬಂದಿರುವುದಕ್ಕಾಗಿ ನಿನಗೆ ಸ್ತೋತ್ರ. ಯೇಸಪ್ಪಾ ನೀನು ನನ್ನನ್ನು ನೋಡುವಾಗ ನೀತಿವಂತಳಾ/ನಾಗಿ ಕಾಣಬೇಕು ನಿತ್ಯಜೀವಕ್ಕೆ ಸೇರಬೇಕು. ನೀನು ಹೇಳಿದ್ದೀಯಾ - "ಯಾವನು ನನ್ನ ನಿಮಿತ್ತವೂ ಸುವಾರ್ತೆಯ ನಿಮಿತ್ತವೂ ಮನೆಯನ್ನಾಗಲಿ ತಾಯಿಯನ್ನಾಗಲಿ ತಂದೆಯನ್ನಾಗಲಿ ಮಕ್ಕಳನ್ನಾಗಲಿ ಭೂಮಿಯನ್ನಾಗಲಿ ಬಿಟ್ಟು ಬಿಟ್ಟಿರುವನೋ ಅವನಿಗೆ ಈಗಿನ ಕಾಲದಲ್ಲಿ ಮನೆ-ಅಣ್ಣ-ತಮ್ಮ-ಅಕ್ಕ-ತಂಗಿ-ತಾಯಿ-ಮಕ್ಕಳು-ಭೂಮಿ ಇವೆಲ್ಲವೂ ಹಿಂಸೆಗಳು ಸಹಿತವಾಗಿ ನೂರರಷ್ಟು ಸಿಕ್ಕೇ ಸಿಕ್ಕುತ್ತದೆ; ಮತ್ತು ಮುಂದಣ ಲೋಕದಲ್ಲಿ ನಿತ್ಯಜೀವವು ದೊರೆಯುವುದು." ಎಂದು ಯೇಸಪ್ಪಾ ಲೌಕೀಕವಾಗಿ ಈ ಲೋಕದಲ್ಲಿ ನನಗೆ ಯಾರ ಪ್ರೀತಿ ಸಿಗದೇ ಎಲ್ಲರೂ ಕೈ ಬಿಟ್ಟರೂ ಯಾವುದೇ ಆಸ್ತಿ ಇಲ್ಲದೇ ಅನಾಥಳಾ/ನಾ/ಗಿ ಈ ಲೋಕಕ್ಕೆ ಕಾಣುವುದಾದರೂ ನಾನು ನಿನ್ನ ಕಣ್ಣಿಗೆ ಸಮೃದ್ಧಿಯಾಗಿ ಕಾಣುವಂತೆ ನಿತ್ಯಜೀವವನ್ನು ಕೊಡಲಿರುವುದಕ್ಕಾಗಿ ನಿನಗೆ ಸ್ತೋತ್ರ, ಯೇಸಪ್ಪಾ ನನಗಾಗಿ ಎಲ್ಲವನ್ನು ತ್ಯಾಗಮಾಡಿದೆ ಎಲ್ಲವನ್ನು ಒದಗಿಸಿಕೊಟ್ಟೆ, ನಾನು ನಿತ್ಯವಾಗಿ ನಿನ್ನೊಂದಿಗೆ ಇರುವುದಕ್ಕೆ ನಿತ್ಯಜೀವವನ್ನು ಅನುಗ್ರಹಿಸಲು ನನಗಾಗಿ ಪರಲೋಕದಲ್ಲಿ ಕಾಯುತ್ತಿರುವುದಕ್ಕಾಗಿ ನಿನಗೆ ಸ್ತೋತ್ರ. ಆತ್ಮದಲ್ಲಿ ಬಡವಳಾ/ನಾ/ಗಿರುವದರಿಂದ ನಾನು ಧನ್ಯಳಾ/ನಾಗುವಂತೆಯೂ ಆತ್ಮೀಕದಲ್ಲಿ ನನ್ನ ಬೆಳವಣಿಗೆಯನ್ನು ನಾನು ಗಮನಿಸುತ್ತಾ ಉತ್ತಮವಾಗಿ ಬೆಳೆಯಲು ಪರಲೋಕರಾಜ್ಯದಲ್ಲಿ ನಿತ್ಯಜೀವಕ್ಕೆ ಭಾಧ್ಯಸ್ಥಳಾ/ನಾಗಲು ನನಗೆ ಸಹಾಯಮಾಡು.

ತ್ರಿಐಕ್ಯ ದೇವರು ನನ್ನಲ್ಲಿ ವಾಸವಾಗಿರುವುದರಿಂದ ನಾನು ನಿನಗೆ ಸ್ತೋತ್ರ ಸಲ್ಲಿಸುತ್ತೇನೆ. ಯೇಸಪ್ಪಾ ನಾನು ನಿನ್ನನ್ನೇ ನಂಬಿದ್ದೇನೆ. ನೀನು ಸತ್ಯವಂತನು, ದೇವರ ಮಗನು ನೀನು ಸತ್ಯವಾಗಿರುವಾತನೆಂದು ಅರಿತು ಕೊಳ್ಳುವ ಹಾಗೆ ನನಗೆ ವಿವೇಕವನ್ನು ಕೊಟ್ಟಿದ್ದೀಯಾ ಅದಕ್ಕಾಗಿ ನಿನಗೆ ಸ್ತೋತ್ರ ನೀನು

ಸತ್ಯದೇವರೂ ನಿತ್ಯಜೀವವೂ ಆಗಿದ್ದೀಯಾ. ನೀನು ಕೊಡಲಿರುವ ನಿತ್ಯಜೀವಕ್ಕಾಗಿ ನಿನ್ನ ಕರುಣೆಯನ್ನು ಎದುರುನೋಡುತ್ತಿದ್ದೇನೆ. ನಿನ್ನ ಪ್ರೀತಿಯಲ್ಲಿ ನಾನು ಭದ್ರವಾಗಿ ಇದ್ದುಕೊಂಡು ನಿತ್ಯಜೀವವನ್ನು ಹೊಂದಿಕೊಳ್ಳುವುದಕ್ಕೆ ನಿನ್ನ ಆತ್ಮದಿಂದ ನನ್ನನ್ನು ತುಂಬಿಸಿ ನಡೆಸು. ನೀನು ನನ್ನ ಕೈಬಿಡಬೇಡ, ನೀನು ನನ್ನ ಆತ್ಮಕ್ಕೆ ನಿತ್ಯಜೀವವನ್ನು ಅನುಗ್ರಹಿಸಿದ್ದಿ ಆ ನಿತ್ಯತ್ವವು ಪರಲೋಕದಲ್ಲಿಯೇ ನಾನು ಜೀವಿಸುವಂತೆ ನನಗೆ ಜ್ಞಾನವನ್ನು ಕೊಟ್ಟು ನಡೆಸು. ಯೇಸಪ್ಪಾ ನಿನ್ನ ಹೆಸರಿನಲ್ಲಿ ನಂಬಿಕೆಯಿಟ್ಟು ನಿನ್ನ ಸಾಕ್ಷಿಯಾಗಿ ಜೀವಿಸಬೇಕು ಯಾಕೆಂದರೆ ನೀನು ನನಗೆ ವಾಗ್ದಾನಮಾಡಿದ್ದು 'ನಿತ್ಯಜೀವವು' ಮಾತ್ರ ಆಗಿದೆ. ಅದನ್ನು ಪಡೆದುಕೊಳ್ಳುವದಕ್ಕೆ ಈ ಲೋಕವನ್ನು ಯಾವ ರೀತಿ ಜಯಿಸಿ ಮುಂದೆ ಹೋಗಬೇಕೋ ಅಂತಹ· ಅಭಿಷೇಕದಿಂದ ನನ್ನನ್ನು ತುಂಬಿಸು. ನಿನಗಾಗಿಯೂ ನೀನು ಕೊಡುವ ನಿತ್ಯರಾಜ್ಯಕ್ಕಾಗಿಯೂ ನಾನು ಸಿದ್ಧವಾಗಿ ನಿಲ್ಲುವಂತೆ ನನಗೆ ಜ್ಞಾನವನ್ನು ಅನುಗ್ರಹಿಸು.

ಯೇಸಪ್ಪಾ ನಾನು ಈ ಭೂಮಿಯಲ್ಲಿ ಜೀವಿಸುವವರೆಗೂ ಯಾರನ್ನೂ ದ್ವೇಷಿಸದಂತೆ, ಅನಾವಶ್ಯಕವಾಗಿ ಕೋಪಿಸಿಕೊಳ್ಳದಂತೆ ನನ್ನನ್ನು ನಡೆಸು. ಎಲ್ಲರೊಟ್ಟಿಗೂ ಪ್ರೀತಿಯಿಂದ ನಡೆದುಕೊಳ್ಳುವದಕ್ಕೆ ಕಲಿಸಿಕೊಡು. ನಿನ್ನ ವಾಕ್ಯವನ್ನು ನಾನು ನಂಬಿದ್ದೇನೆ. ಯೇಸುವೇ ನಿನ್ನ ನಾಮದಲ್ಲಿ ನಿತ್ಯಜೀವ ಪಡೆದು ಕೊಳ್ಳುತ್ತೇನೆ ಎಂಬ ಧೃಢನಂಬಿಕೆಯಿಂದ ಜೀವಿಸುತ್ತಿದ್ದೇನೆ. ಈ ನಂಬಿಕೆಯು ನನ್ನಲ್ಲಿ ಇನ್ನು ಹೆಚ್ಚಾಗಲಿ. ಯೇಸಪ್ಪಾ ವಾಕ್ಯದ ಪ್ರಕಾರ - ನಂಬಿರುವವನು ನಿತ್ಯಜೀವವನ್ನು ಹೊಂದಿದ್ದಾನೆಂದು ನನಗೆ ನಿಜ-ನಿಜವಾಗಿ ಹೇಳಿದ್ದೀಯಾ ಅದಕ್ಕಾಗಿ ಸ್ತೋತ್ರ. ಯಾವ ಯೋಗ್ಯತೆ ಇಲ್ಲದಿರುವ ನನ್ನನ್ನು ನೀನು ಆರಿಸಿಕೊಂಡು ನಿನ್ನ ಮಾಂಸವನ್ನು ತಿಂದು ನಿನ್ನ ರಕ್ತವನ್ನು ಕುಡಿದು ನಿತ್ಯಜೀವಕ್ಕೆ ಸೇರುವ ಹಾಗೆ ನನ್ನನ್ನು ದಿನೇ-ದಿನೇ ನೂತನಪಡಿಸಿ, ಉತ್ತಮವಾದ ಸ್ಥಾನದಲ್ಲಿ ನಿಲ್ಲಿಸುತ್ತಿರುವುದಕ್ಕಾಗಿ ಸ್ತೋತ್ರ. ನಾನು ಈ ಲೋಕವನ್ನು ಬಿಡುವುದಾದರೂ ಕಡೇ ದಿನದಲ್ಲಿ ನನ್ನನ್ನು ಎಬ್ಬಿಸುತ್ತೇನೆಂದು ವಾಗ್ದಾನ ಮಾಡಿರುವುದಕ್ಕಾಗಿ ಸ್ತೋತ್ರ.

"ನಾನು ಅವುಗಳನ್ನು ಬಲ್ಲೆನು; ಅವು ನನ್ನ ಹಿಂದೆ ಬರುತ್ತವೆ, ನಾನು ಅವುಗಳಿಗೆ ನಿತ್ಯಜೀವವನ್ನು ಕೊಡುತ್ತೇನೆ; ಅವು ಎಂದಿಗೂ ನಾಶವಾಗುವದೇ



ಇಲ್ಲ; ಅವುಗಳನ್ನು ಯಾರೂ ನನ್ನ ಕೈಯೊಳಗಿಂದ ಕಸಕೊಳ್ಳರು" ಎಂದು ಹೇಳಿ ನಿನ್ನ ಕುರಿಯಾಗಿರುವ ನನ್ನನ್ನು ಸದಾಕಾಲ ಬಲಪಡಿಸುತ್ತಿರುವುದಕ್ಕಾಗಿ ನಿನಗೆ ಸ್ತೋತ್ರ. ಯೇಸಪ್ಪಾ ನಾನು ಯಾವಾಗಲೂ ನಿನ್ನೊಂದಿಗೆ ಜೀವಿಸುವ ಸಲುವಾಗಿ ನನಗೆ ಕೊಟ್ಟಿರುವ ಸತ್ಯವೇದಕ್ಕಾಗಿ ಸ್ತೋತ್ರ. ಅದರಿಂದ ಅನೇಕ ಒಳಾರ್ಥಗಳನ್ನು ಗೂಡಾರ್ಥಗಳನ್ನು ತಿಳಿದುಕೊಂಡು ನಿನ್ನನ್ನು ಹೆಚ್ಚಾಗಿ ಪ್ರೀತಿಸುವಂತೆ ನಿತ್ಯಜೀವಕ್ಕೆ ಹತ್ತಿರವಾಗುವಂತೆ ಮಾರ್ಗ ತೋರಿಸಿರುವುದಕ್ಕಾಗಿ ನಿನಗೆ ಸ್ತೋತ್ರ. ಸಕಲ ಅಧಿಕಾರವನ್ನು ಕೊಟ್ಟು ಪವಿತ್ರಾತ್ಮನ ಬಲದಿಂದ ನನ್ನನ್ನು ನಡೆಸುತ್ತಿರುವುದಕ್ಕಾಗಿ ನಿನಗೆ ಸ್ತೋತ್ರ. ಯೇಸುವೇ ದೇವಕುಮಾರನಾದ ಕ್ರಿಸ್ತನೆಂದು ನಾನು ನಂಬುವಂತೆಯು, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ನನಗಾಗಿ ಸತ್ಯವೇದದಲ್ಲಿ ಬರೆದಿಟ್ಟಿರುವುದಕ್ಕಾಗಿ ನಿನಗೆ ಸ್ತೋತ್ರ. ತಂದೆ. ಯೇಸಪ್ಪಾ ನಿನ್ನನ್ನು ಬಿಟ್ಟು ಹೋಗುವಂತ ಕೆಟ್ಟ ಹೃದಯ ನನಗೆ ಬರದಂತೆ ಸಹಾಯ ಮಾಡು. ಬೇರೆಯಲ್ಲೂ ನನ್ನ ಮನಸ್ಸು ಹೋಗಬಾರದು, ನಾನು ಕದಲಬಾರದು ಮತ್ತೇ ಹಿಂದಿನ ಪಾಪಕ್ಕೆ ಹಿಂದಿರುಗಿ ಹೋಗಬಾರದು ಆ ರೀತಿಯಲ್ಲಿ ನಿನ್ನ ರಕ್ತದಿಂದ ನನ್ನನ್ನು ಭದ್ರಪಡಿಸು ನಿನ್ನ ವಾಕ್ಯದಿಂದ ನನ್ನನ್ನು ಕಟ್ಟಿಹಾಕು, ನಿನ್ನ ಪ್ರೀತಿಯಲ್ಲೇ ನಾನು ತುಂಬಿರಬೇಕು, ನಿನ್ನ ಹಾಗೆಯೇ ನಾನೂ ಸಹ ಆಗಲು ನಿತ್ಯಜೀವವನ್ನು ಪಡೆದುಕೊಂಡು ನಿತ್ಯ ನಿರಂತರವಾಗಿ ನಿನ್ನ ಪಾದ ಸನ್ನಿಧಿಯಲ್ಲಿ ಸೇರಿ ನಿನ್ನೊಂದಿಗೆ ಜೀವಿಸುವಂತೆ ನನ್ನನ್ನು ನಡೆಸಬೇಕೆಂದು ಯೇಸುಕ್ರಿಸ್ತನ ಅತೀ ಪರಿಶುದ್ಧ ನಾಮದಿಂದ ಪ್ರಾರ್ಥಿಸಿ ಬೇಡಿಹೊಂದಿದ್ದೇನೆ ನಮ್ಮ ಜೀವವುಳ್ಳ ತಂದೆಯೇ ಆಮೆನ್.

(ಮತ್ತಾಯ 5:3, 25:46) (ಮಾರ್ಕ 10:29.30) (ಯೋಹಾನ 3:15, 5:24 6:47,54,68, 10:28, 17:2,3 20:31) (1ಯೋಹಾ 2:25 3:15, 5:11,12,13,20) (ಯೂದ 1:21)

## 12. ಕರ್ತನ ಬರೋಣಕ್ಕೆ ಸಿದ್ಧತೆ

ನಿಜವಾಗಿ ಬೇಗನೇ ಬರುತ್ತೇನೆ (ಪ್ರಕ 22:20) ಎಂದು ಹೇಳಿರುವ ಯೇಸುವೇ ನಿನಗೆ ಸ್ತೋತ್ರ "ಆ ದಿನವಾದರೂ ಗಳಿಗೆಯಾದರೂ ನಿಮಗೆ ಗೊತ್ತಿಲ್ಲವಾದದರಿಂದ ಎಚ್ಚರವಾಗಿರ್ರಿ" (ಮತ್ತಾಯ 25:13) (ಮತ್ತಾಯ 24:44)

ಕರ್ತನೇ ನೀನು ಯಾವಾಗ ಬರುತ್ತೀಯೋ ನನಗೆ ಗೊತ್ತಿಲ್ಲದಿರುವುದರಿಂದ ಯಾವಾಗಲೂ ಆತ್ಮೀಕದಲ್ಲಿ ಎಚ್ಚರವಾಗಿದ್ದು ಪ್ರಾರ್ಥನೆ ಮಾಡುತ್ತಲೇ ಇರುವುದಕ್ಕೂ ಪರಿಶುದ್ಧವಾಗಿ ಜೀವಿಸುವುದಕ್ಕೂ ನಿನ್ನನ್ನು ಎದುರುಗೊಳ್ಳಲು ಪರಿಪೂರ್ಣವಾಗಿ ಸಿದ್ಧವಾಗಿರುವಂತೆಯೂ ನನ್ನನ್ನು ಆಶೀರ್ವದಿಸು.

ತಂದೆಯೇ, ಯೇಸುವೇ, ನಾನು ನಿಮ್ಮನ್ನು ಪರಿಶುದ್ಧಾತ್ಮನ ಸಹಾಯದಿಂದ ಪರಲೋಕದಲ್ಲಿ ನೋಡುವಾಗ ನೀವು ನನಗೆ "ಭಲಾ, ನಂಬಿಗಸ್ತನಾದ ಒಳ್ಳೇ ಆಳು ನೀನು; ಸ್ವಲ್ಪ ಕೆಲಸದಲ್ಲಿ ನಂಬಿಗಸ್ತನಾಗಿದ್ದಿ, ದೊಡ್ಡ ಕೆಲಸದಲ್ಲಿ ನಿನ್ನನ್ನು ಇಡುತ್ತೇನೆ" ಎಂದು (ಮತ್ತಾಯ 25:21,23) ನನಗೆ ಹೇಳುವ ರೀತಿಯಲ್ಲಿ ನಾನು ಪ್ರತಿದಿನವೂ ನಡೆದುಕೊಳ್ಳುವುದಕ್ಕೆ ನನಗೆ ಸಹಾಯಮಾಡು.

ಕರ್ತನೇ ನಾನು ಹಸಿದವರಿಗೆ ಊಟಕೊಡುವುದಕ್ಕೂ, ಬಾಯಾರಿದವರಿಗೆ ನೀರು ಕೊಡುವುದಕ್ಕೂ ಪರದೇಶಿಯರನ್ನು ಸೇರಿಸಿಕೊಳ್ಳುವುದಕ್ಕೂ, ರೋಗದಲ್ಲಿ ಬಿದ್ದಿರುವವರನ್ನು ಆರೈಕೆ ಮಾಡುವುದಕ್ಕೂ ನನಗೆ ಕಲಿಸಿಕೊಡು, ಮತ್ತು ಸೆರೆಮನೆಯಲ್ಲಿರುವವರನ್ನು ಹೋಗಿ ನೋಡಿ ಬರುವುದಕ್ಕೂ ಸಹ ಸಹಾಯಮಾಡು, ಯಾವ-ಯಾವ ಅಲ್ಪ ವ್ಯಕ್ತಿಗಳಿಗೆ ನಾನು ಏನೇನು ಮಾಡಬೇಕು ಅದನ್ನೆಲ್ಲಾ ಮಾಡುವುದಕ್ಕೆ ನನಗೆ ಶಕ್ತಿ-ಬಲ-ಜ್ಞಾನವನ್ನು ಅನುಗ್ರಹಿಸು" ನೀನು ನನ್ನ ಮುಖಾಂತರ ಎಂತಹ ಸೇವೆಯನ್ನು ಬಯಸುತ್ತೀಯೋ ಅದನ್ನೆಲ್ಲಾ ನಿನ್ನ ನಾಮದಿಂದ ಯೇಸುವೇ ನನಗೆ ಮಾಡಲು ಸಹಾಯಮಾಡು, ಪರಲೋಕದಲ್ಲಿ ನೀತಿವಂತರ ಪಕ್ಷದಲ್ಲಿ ನಿನ್ನ ಬಲಗಡೆಯಲ್ಲಿ ನನ್ನನ್ನು ನೀನು ಕರೆದು ನಿಲ್ಲಿಸಿಕೊಳ್ಳುವ ಹಾಗೆ ಈ



ಲೋಕದಲ್ಲಿ ಜೀವಿಸುವಂತೆ ನನಗೆ ಸಹಾಯಮಾಡು (ಮತ್ತಾಯ 25:35-46)

"ನಾನು ಸಿದ್ಧವಾಗಿರಲು ಸಹಾಯಮಾಡು ನಾನು ನೆನಸದ ಗಳಿಗೆಯಲ್ಲಿ ಮನುಷ್ಯಕುಮಾರನೇ ನೀನು ಬರುವೆ" (ಲೂಕ 12:40) ಕರ್ತನೇ ನೀನು ಬರುವ ಸಮಯಗಳು ಹತ್ತಿರವಾಗಿರುವದರಿಂದ ಭಯ-ಭಕ್ತಿಯಿಂದ ನಾನು ಜೀವಿಸುವುದಕ್ಕೆ, ಪರಿಶುದ್ಧತೆಯುನ್ನು ಕಾಪಾಡಿಕೊಳ್ಳುವಂತೆಯೂ ಸಹಾಯಮಾಡು. "ನಮ್ಮ ಫಲಾಯನವು ಚಳಿಗಾಲದಲ್ಲಿಯಾಗಲಿ ಸಬ್ಬತ್‌ದಿನದಲ್ಲಿಯಾಗಲಿ ಆಗದಂತೆ" (ಮತ್ತಾಯ 24:20) ಸಹಾಯಮಾಡುತಂದೆ. ಯೇಸುವೇ ನಾನು ಕಪಟಿಗಳಾದ ಶಾಸ್ತ್ರಿಗಳ, ಫರಿಸಾಯರ ರೀತಿಯಲ್ಲಿ ಜೀವಿಸದಂತೆಯೂ ನ್ಯಾಯವನ್ನೂ ನಂಬಿಕೆಯನ್ನೂ ಕರುಣೆಯನ್ನೂ ಬಿಟ್ಟು-ಬಿಟ್ಟು ಜೀವಿಸದಂತೆಯೂ ಕುರುಡರಾಗಿ ಜೀವಿಸದಂತೆಯೂ, ಸೊಳ್ಳೆಸೋಸುವವರೂ, ಒಂಟೇ ನುಂಗುವವರಾಗಿ ಜೀವಿಸದಂತೆಯೂ, ಇಹಭೋಗ ಪದಾರ್ಥಗಳಿಗಾಗಿ ಜೀವಿಸದಂತೆಯೂ ಸುಣ್ಣ ಹಚ್ಚಿದ ಸಮಾಧಿಯ ಹಾಗೆ ಜೀವಿಸದಂತೆಯೂ, ಕಪಟತನವೂ ಅನ್ಯಾಯವೂ ತುಂಬಿದವರಾಗಿರದಂತೆ (ಮತ್ತಾಯ 23: 23-28) "ನನ್ನ ನೀತಿಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತಲೂ ಹೆಚ್ಚಿನದಾಗಿ ಕಾಣಿಸಲ್ಪಟ್ಟು ಪರಲೋಕ ರಾಜ್ಯದಲ್ಲಿ ಸೇರುವಂತೆ ಆಶೀರ್ವದಿಸಬೇಕೆಂದು ಬೇಡುತ್ತಿದ್ದೇನೆ ತಂದೆಯೇ" ಆಮೆನ್ (ಮತ್ತಾಯ 5:20)

ಆತ್ಮದಲ್ಲಿ ನನಗಿರುವ ಬಡತನವನ್ನು ಗ್ರಹಿಸಿಕೊಂಡು ತಿದ್ದಿ ಸರಿಪಡಿಸಿಕೊಂಡು ಪರಲೋಕರಾಜ್ಯವನ್ನು ಸ್ವಾಧೀನ ಪಡಿಸಿಕೊಳ್ಳಲು ಸಹಾಯಮಾಡು (ಮತ್ತಾಯ 5:3)

ಯೇಸುವೇ ಯಾರೂ ನನ್ನನ್ನು ಮೋಸಗೊಳಿಸದಂತೆ ನನ್ನ ಮನಸ್ಸನ್ನು ಬಹುಜಾಗ್ರತೆಯಿಂದ ನೋಡಿಕೊಳ್ಳಲು ಸಹಾಯಮಾಡು. ನಿನ್ನ ಹೆಸರನ್ನು ಎತ್ತಿಕೊಂಡು ನಾನು ಕ್ರಿಸ್ತನು ನಾನು ಕ್ರಸ್ತನು ಎಂದು ಬರುತ್ತಿದ್ದಾರೆ. ನಾನು ಅವರ ಮಾತಿಗೆ ಕಿವಿಗೊಡದೇ ನಿನ್ನನ್ನೇ ಎದುರು ನೋಡುವಂತೆ ಸಹಾಯಮಾಡು. ಅನೇಕ ಕಡೆ ಯುದ್ಧಗಳು ಆಗುತ್ತಿವೆ. ಇನ್ನೂ ಯುದ್ಧಗಳಾಗುತ್ತದೆಂದು ಹೇಳುವಾಗ ನನ್ನ ಹೃದಯವು ಕಳವಳಗೊಳ್ಳದಂತೆ

ಸಹಾಯಮಾಡು, ಜನಕ್ಕೆ ವಿರೋಧವಾಗಿ ಜನವೂ ರಾಜ್ಯಕ್ಕೆ ವಿರೋಧವಾಗಿ ರಾಜ್ಯವು, ಬರಗಳು, ಭೂಕಂಪಗಳು, ಆಗುತ್ತಿದೆ ಯೇಸುವೇ ಇದು ನೂತನ ಕಾಲವು ಹುಟ್ಟುವ ಪ್ರಸವವೇದನೆಗಳಾಗಿರುವುದಕ್ಕಾಗಿ ಸ್ತೋತ್ರ. ಯೇಸುವೇ ನಿನ್ನ ಹೆಸರಿನ ನಿಮಿತ್ತ ನಮ್ಮನ್ನು ಎಲ್ಲಾರು ಹಗೆ ಮಾಡುತ್ತಿದ್ದಾರೆ, ಇದನ್ನು ಸಹಿಸುವ ಶಕ್ತಿಂಯುನ್ನು ಕೊಡು.. ಒಬ್ಬರನ್ನು ಒಬ್ಬರು ಹಿಡುಕೊಡುವವರಾಗಿದ್ದಾರೆ ಒಬ್ಬರ ಮೇಲೆ ಒಬ್ಬರು ದ್ವೇಶಮಾಡುತ್ತಾ ಇದ್ದಾರೆ. ಅನೇಕ ಸುಳ್ಳುಪ್ರವಾದಿಗಳು ಎದ್ದಿದ್ದಾರೆ. ನಾನು ಇವರಿಂದ ಮೋಸಹೋಗದಂತೆ ನನಗೆ ಸಹಾಯ ಮಾಡು, ಬಹು ಜನರ ಪ್ರೀತಿ ತಣ್ಣಗಾಗಿ ಹೋಗುತ್ತಿದೆ. ಯೇಸುವೇ ನಾನಾದರೋ ಎಲ್ಲರ ಬಳಿ ಪ್ರೀತಿಯಿಂದಿರಲು ಸಹಾಯಮಾಡು. ಎಲ್ಲಾ ಜನಾಂಗಗಳಿಗಾಗಿ ಪರಲೋಕ ರಾಜ್ಯದ ಸುವಾರ್ತೆಯು ಸಾಕ್ಷಿಗಾಗಿ ಸಾರುವ ಸಲುವಾಗಿ ಟಿ.ವಿ.ಚಾನಲ್‌ಗಳಲ್ಲೂ ಪ್ರಕಟವಾಗಿದೆ. ಹೀಗಾಗುವಾಗ ಅಂತ್ಯವು ಬೇಗ ಬರುವುದು ಎಂದು ಹೇಳಿದ್ದೀಯಲ್ಲಾ (ಮತ್ತಾಯ 24:4-14) ಆದುದರಿಂದ ನನ್ನನ್ನು ನಾನು ನಿನ್ನ ಬರೋಣಕ್ಕೆ ಪ್ರತಿಕ್ಷಣವೂ ಸಿದ್ಧವಾಗಿಯೇ ಇಟ್ಟುಕೊಳ್ಳುವಂತೆ ಸಹಾಯಮಾಡು. ಅಪ್ಪಾ ನೀನು ಬಂದು ನೋಡುವಾಗ ನನ್ನ ಮದುವೆ ಬಟ್ಟೆ ಶುಭ್ರವಾಗಿ ನಾನು ಹಾಕಿಕೊಂಡಿರುವುದು ನಿನಗೆ ಕಾಣಿಸಲಿ. (ಮತ್ತಾಯ 22:11-14) ಯೇಸುವೇ ನಾನು ಕರೆಯಲ್ಪಟ್ಟವಳು/ನು ಮಾತ್ರವೇ ಅಲ್ಲದೆ ಆಯಲ್ಪಟ್ಟವಳು/ನು ಆಗಿರುವಂತೆ ಸಹಾಯಮಾಡು. ಯೇಸಪ್ಪ 5 ಬುದ್ಧಿಯುಳ್ಳ ಕನ್ನಿಕೆಯರ ರೀತಿಯಲ್ಲಿ ಆರತಿಗಳನ್ನೂ ಎಣ್ಣೆಯನ್ನೂ ತೆಗೆದುಕೊಂಡು ಮದಲಿಂಗನೇ ನಿನ್ನ ಮಧುವಣಗಿತ್ತಿಯಾಗಿ ನಿನ್ನನ್ನು ಸಂಧಿಸುವಂತೆ ಯಾವಾಗಲೂ ಸಿದ್ಧವಾಗಿರುವಂತೆ ನನಗೆ ಸಹಾಯ ಮಾಡು. ಆಮೆನ್ (ಮತ್ತಾಯ 25: 1-13) ಯೇಸಪ್ಪಾ ಈ ಲೋಕದಲ್ಲಿ ನನಗೆ ನೀನು ಕೊಟ್ಟಿರುವ ತಲಾಂತುಗಳ ಮೂಲಕವಾಗಿ ಎಲ್ಲಾ ಕೆಲಸಗಳನ್ನು ಪೂರೈಸಲು ಸಹಾಯುವಾಡು, ಸೋವಾರಿಯು ಹಾಗೆ ಕಾಲವನ್ನು ನಾನು ವ್ಯರ್ಥಮಾಡದಂತೆ ಬುದ್ಧಿಯಿಂದ ಸಮಯವನ್ನು ಉಪಯೋಗಿಸಿಕೊಳ್ಳಲು ಸಹಾಯಮಾಡು. (ಕೊಲೊಸ್ಸೆ 4:5) ಯೇಸುವೇ "ಹೆಣ ಎಲ್ಲಿಯೋ ಅಲ್ಲಿಯೇ ಹದ್ದುಗಳು ಕೂಡುವವು" (ಲೂಕ 17:37) ನನ್ನನ್ನು ನಿನ್ನ ಬರೋಣದಲ್ಲಿ ಸೇರಿಸಿಕೋ ಯೇಸಪ್ಪಾ, ನೋಹನ ಕಾಲದಲ್ಲಿ ಜಲಪ್ರಳಯ ಬರುತ್ತದೆಂದು



ಸಾರಲ್ಪಟ್ಟಾಗಲೂ ಜನರು ನಿನ್ನನ್ನು ತಾತ್ಸಾರ ಮಾಡಿದರೂ ನೋಹನು ತನ್ನನ್ನು ದಂಡನೆಗೆ ಅಪಾತ್ರನೆಂದು ಎಣಿಸಿಕೊಂಡು ನಿನ್ನ ಚಿತ್ತಕ್ಕೆ ತನ್ನನ್ನು ಒಪ್ಪಿಸಿಕೊಟ್ಟಂತೆ ನಾನು ಲೋಕವನ್ನು ನೋಡದೆ ದಂಡನೆಗೆ ಸಿಲುಕಿಕೊಳ್ಳದಂತೆ ನಿನ್ನ ಚಿತ್ತಕ್ಕೆ ನನ್ನನ್ನು ಒಪ್ಪಿಸಿಕೊಡುತ್ತಿದ್ದೇನೆ. ತಂದೆಯೇ ಆಮೆನ್, ಸೋದೋಮ್-ಗೋಮೋರಗಳನ್ನು ನಾಶಮಾಡುವಾಗ ಲೋಟನನ್ನು ಮಾತ್ರ ರಕ್ಷಿಸಿದೆ. ಆದರೆ ಆ ಜನರು ತಮ್ಮ ಇಷ್ಟ ಪ್ರಕಾರ ಜೀವಿಸಿ ಬೆಂಕಿ-ಗಂಧಕಗಳಿಂದ ನಾಶವಾದರು, ಕರ್ತನೇ ಈ ನಾಶವಾಗಲಿರುವ ಲೋಕಕ್ಕೆ ತಕ್ಕ ರೀತಿಯಲ್ಲಿ ನಾನು ನಡೆಯದಂತೆ (ಲೂಕ 17:27-30) ನಿನ್ನ ಬರೋಣಕ್ಕೆ ನನ್ನನ್ನು ಸಿದ್ಧಪಡಿಸು. ಈ ಲೋಕಕ್ಕೆ ಬರಲಿರುವಂತಹ ಉಪದ್ರವಗಳಿಂದ ನಾನು ತಪ್ಪಿಸಿಕೊಳ್ಳುವಂತೆ ಸಹಾಯ ಮಾಡು (ಪ್ರಕ 16:1-21) "ಇಗೋ, ಎಲ್ಲವನ್ನು ಹೊಸದು ಮಾಡುತ್ತೇನೆ" ಎಂದು ಹೇಳಿರುವ ಕರ್ತನೇ ನೂತನಾಕಾಶಮಂಡಲವನ್ನೂ ನೂತನಭೂಮಂಡಲವನ್ನೂ ನೀನು ಸೃಷ್ಟಿ ಮಾಡುತ್ತೀಯ ಆಗ ನಾನು ಸಹ ಅಲ್ಲಿ ಸೇರುವಂತೆ ನನಗೆ ಸಹಾಯಮಾಡು (ಪ್ರಕಟಣೆ 21:1,12) "ಜೀವಿತರಾಗಿ ಎದ್ದು ಸಾವಿರ ವರುಷ ಕ್ರಿಸ್ತನೇ ನಿನ್ನೊಂದಿಗೆ ಆಳಿ, ಪ್ರಥಮಪುನರುತ್ಥಾನದಲ್ಲಿ ಸೇರುವ ಧನ್ಯತೆಯಲ್ಲಿ ಪರಿಶುದ್ಧತೆಯನ್ನೂ (ಪ್ರಕಟಣೆ 20:4-6) ನನಗೆ ದಯಪಾಲಿಸು, ದೇವರೇ ನನ್ನ ಮೇಲೆ ಎರಡನೆಯ ಮರಣಕ್ಕೆ ಯಾವುದೇ ಕಾರಣಕ್ಕೂ ಅಧಿಕಾರವಿರಬಾರದು ತಂದೆಯೇ ಆಮೆನ್, "ಇಗೋ ಮೇಘಗಳೊಂದಿಗೆ ಬರುತ್ತಾನೆ; ಎಲ್ಲರ ಕಣ್ಣುಗಳು ಆತನನ್ನು ಕಾಣುವವು; ಆತನನ್ನು ಇರಿದವರು ಸಹ ಕಾಣುವರು; ಭೂಮಿಯಲ್ಲಿರುವ ಎಲ್ಲಾ ಕುಲದವರು ಆತನನ್ನು ನೋಡಿ ಎದೆಬಡುಕೊಳ್ಳುವರು ಹೌದು ಹಾಗೆಯೇ ಆಗುವುದು ಆಮೆನ್" (ಪ್ರಕಟಣೆ 1:7) ನೀನು ಮೇಘಗಳೊಂದಿಗೆ ಬರುವಾಗ ನಾನು ಎತ್ತಲ್ಪಡಲು ಸಹಾಯಮಾಡು ಯೇಸುವೇ ಆಮೆನ್,

"ನಾವೆಲ್ಲರೂ ನಿದ್ರೆ ಹೋಗುವುದಿಲ್ಲ; ಆದರೆ ಕಡೇ ತುತೂರಿಯ ಧ್ವನಿಯಾಗುವಾಗ ನಾವೆಲ್ಲರೂ ಒಂದು ಕ್ಷಣದಲ್ಲೇ ರೆಪ್ಪೆ ಬಡಿಯುವಷ್ಟರೊಳಗಾಗಿ ಮಾರ್ಪಡುವೆವು, ತುತೂರಿಯು ಊದಲಾಗಿ ಸತ್ತವರು ನಿರ್ಲಯವಾಗಿ ಎಬ್ಬಿಸಲ್ಪಡುವರು, ನಾವು ಮಾರ್ಪಡುವೆವು,

ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳುವದೂ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುವುದು ಅವಶ್ಯ. ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಂಡಾಗ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುತ್ತದೆ" ಅದಕ್ಕಾಗಿ ಸ್ತೋತ್ರ. ದೇವರು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ; ಆತನಿಗೆ ಸ್ತೋತ್ರ. ಆಮೆನ್ (1ಕೊರಿಂಥ 15: 51,58) ನೀನು ಬಂದಾಗ ಪಾಪ ಎನ್ನುವ ನಿದ್ದೆಯಲ್ಲಿ ನಾನು ಇರದೆ ಸಿದ್ಧವಾಗಿ ಪರಿಶುದ್ಧತೆಯಿಂದ ಎಚ್ಚರವಾಗಿರಲು ಸಹಾಯ ಮಾಡಬೇಕೆಂದು ಬೇಡಿಕೊಳ್ಳುತ್ತಿದ್ದೇನೆ ತಂದೆಯೇ ಆಮೆನ್.

ನಾನು ನಿನ್ನ ಬರೋಣಕ್ಕೆ ಸದಾ ಸಿದ್ಧವಾಗಿರುವ ಹಾಗೆಯೂ ಶುದ್ಧವಾಗಿರುವ ಹಾಗೆಯೂ, ನನಗೆ ಭೂಮಿಯಲ್ಲಿ ನೀನು ಕೊಟ್ಟಿರುವ ಕೆಲಸವನ್ನು ಪೂರೈಸಿ ನಿನ್ನ ಬರೋಣದಲ್ಲಿ ಸೇರುವ ಹಾಗೆ ನನ್ನನ್ನು ನಡೆಸಬೇಕೆಂದು ಪವಿತ್ರಾತ್ಮನ ಸಹಾಯದಿಂದ ಯೇಸುವಿನ ನಾಮದಲ್ಲಿ ಬೇಡಿಹೊಂದಿದ್ದೇನೆ ಜೀವವುಳ್ಳ ತಂದೆಯೇ ಆಮೆನ್.



## 13. ಕರ್ತನ ಕುರಿಮರಿ

"ನಾನೇ ಒಳ್ಳೇ ಕುರುಬನು; ಒಳ್ಳೆ ಕುರುಬನು ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ" ಆದರೆ "ಕೂಲಿಯಾಳು ಕುರುಬನೂ ಕುರಿಗಳ ಒಡೆಯನೂ ಆಗಿರದೆ ತೋಳ ಬರುತ್ತಲೇ ಕುರಿಗಳನ್ನು ಬಿಟ್ಟು ಓಡಿಹೋಗುತ್ತಾನೆ; ಕುರಿಗಳ ಚಿಂತೆ ಅವನಿಗಿಲ್ಲ, ನಾನೇ ಒಳ್ಳೇ ಕುರುಬನು; (ಯೋಹಾನ 10:11-14)

ಯೇಸುವೇ ಈ ಲೋಕವು ನನ್ನ ಬಗ್ಗೆ ಚಿಂತಿಸುವುದಿಲ್ಲ. ಈ ಲೋಕವನ್ನು ನಾನು ಯಾವ ರೀತಿ ಜಯಿಸಬೇಕೋ ನನಗೆ ಗೊತ್ತಿಲ್ಲ. ನಾನು ನಿನ್ನ ಕುರಿಮರಿಯಾಗಿ ನೀನು ಹೇಳುವ ಮಾತನ್ನು ಕೇಳಲು ಸಹಾಯಮಾಡು. ನನಗೋಸ್ಕರ ಪ್ರಾಣಕೊಟ್ಟಿರುವ ನನ್ನ ಯೇಸುವೇ ನಿನ್ನ ಸ್ವರಕ್ಕೆ ಕಿವಿಗೊಟ್ಟು ನಿನ್ನ ಹಿಂದೆಯೇ ಬಂದು ನೀನು ಕೊಡುವ ನಿತ್ಯಜೀವವನ್ನು ಹೊಂದಿಕೊಳ್ಳಲು ಸಹಾಯಮಾಡು ತಂದೆಯೇ ಆಮೆನ್ (ಯೋಹಾ 10:27.28)

ನಿನ್ನ ಹಟ್ಟಿಗೆ ಇನ್ನೂ ಯಾವ-ಯಾವ ಕುರಿಮರಿಗಳು ಸೇರಬೇಕೋ ಅದೆಲ್ಲಾ ಸೇರುವಂತೆ ಆಶೀರ್ವದಿಸು. ಯೇಸಪ್ಪಾ ಯಾರೂ ನಿನ್ನಿಂದ ನನ್ನನ್ನು ಕಸಕೊಳ್ಳದಂತೆ ನಿನ್ನ ಹತ್ತಿರವೇ ಇರುವಂತೆ ನನಗೆ ಸಹಾಯ ಮಾಡಪ್ಪಾ, ಕರ್ತನೇ ನಿನ್ನ ಕುರಿಯಾಗಿರುವ ನನಗೆ ನೀನೇ ಬಾಗಿಲು ಆಗಿರುವುದಕ್ಕಾಗಿ ಸ್ತೋತ್ರ (ಯೋಹಾನ 10:7) ಕುರುಬನೇ ನನ್ನ ಯೇಸುವೇ ನಾನು ನಿನ್ನ ಕುರಿಯಾಗಿರುವುದರಿಂದ ಸದಾಕಾಲ ನಿನ್ನ ಸ್ವರಕ್ಕೆ ಕಿವಿಗೊಟ್ಟು ನಡೆಯಲು ಸಹಾಯಮಾಡು. ನಿನ್ನ ಸ್ವಂತ ಕುರಿಯಾಗಿರುವ ನನ್ನನ್ನು ನೀನು ಹೆಸರಿಟ್ಟು ಕರೆಯುವಾಗ ನಾನು ನಿನ್ನ ಹಿಂದೆ ಬರುವಂತೆಯೂ ನೀನು ನನ್ನ ಮುಂದೆಹೋಗುವಂತೆಯೂ ಆಶೀರ್ವದಿಸಬೇಕೆಂದು (ಯೋಹಾನ 10:3-5) ಪ್ರಾರ್ಥಿಸುತ್ತೇನೆ ತಂದೆಯೇ ಆಮೆನ್. ಕರ್ತನೇ ನಾನು ಈ ಲೋಕದಲ್ಲಿ ಕುರಿಯಂತೆ ದಾರಿ ತಪ್ಪಿ ತೊಳಲುವವಳಾ/ನಾ/ಗಿದ್ದೆನು. ಆದರೆ ಈಗ ನಾನು ತಿರುಗಿಕೊಂಡು ನನ್ನ ಆತ್ಮವನ್ನು ಕಾಯುವ ಕುರುಬನು ಅಧ್ಯಕ್ಷನೂ ಆಗಿರುವ ಯೇಸುವೇ ನಿನ್ನ ಬಳಿಯಲ್ಲಿ ಬಂದಿದ್ದೇನೆ (1ಪೇತ್ರ 2:25) ನನ್ನನ್ನು ನೀನೇ ನಡೆಸು. ಯೇಸುವೇ ನಿನ್ನ ಹಟ್ಟಿಯಲ್ಲಿ 99 ಕುರಿಗಳಿದ್ದರೂ ತಪ್ಪಿಹೋದ

ಕುರಿಯಾದ ನನ್ನನ್ನು ಹುಡುಕಿಕೊಂಡು ಬಂದು ನನ್ನನ್ನು ರಕ್ಷಿಸಿ ಸಂತೋಷಪಟ್ಟಿರುವ (ಲೂಕ 15:4) ನನ್ನ ಯೇಸುವೇ ನಿನ್ನ ಸಂತೋಷದಲ್ಲಿಯೇ ನಾನು ನಿಂತುಕೊಂಡು ನಿನ್ನನ್ನು ಬಿಟ್ಟು ಎಡ-ಬಲಕ್ಕೆ ತಿರುಗುವ ಕೆಟ್ಟ ಹೃದಯವು ನನ್ನಲ್ಲಿ ಬರದಂತೆ ನಿನ್ನನ್ನು ಬಿಟ್ಟುಹೋಗದಂತೆ.( ಇಬ್ರಿ 3:12) ನನ್ನ ಒಳ್ಳೆಯ ಕುರುಬನೇ ನನ್ನನ್ನು ನೀನೇ ಕಾಯಬೇಕೆಂದು ನನ್ನನ್ನು ನಿನಗೆ ಸಂಪೂರ್ಣವಾಗಿ ಒಪ್ಪಿಸಿಕೊಟ್ಟಿದ್ದೇನೆ. ಯೇಸಪ್ಪಾ, ಯಜ್ಞಕ್ಕೆ ನೇಮಿಸಿದ ಕುರಿಯಾಗಿರುವ ನೀನು (ಯೋಹಾನ 1:29,35) ನನ್ನ ಪಾಪವನ್ನು ಸಂಪೂರ್ಣವಾಗಿ ನಿವಾರಣೆ ಮಾಡಿ ನಿನ್ನ ಕುರಿಮರಿಯಾಗಿ ನನ್ನನ್ನು ಅಂಗೀಕರಿಸಿಕೊಂಡಿದ್ದಕ್ಕಾಗಿ ನಿನಗೆ ಸ್ತೋತ್ರ. ಯಜ್ಞದ ಕುರಿಯಾದಾತನೇ (ಪ್ರಕಟಣೆ 14:1) ನಿನಗೆ ಕೋಟಿ-ಕೋಟಿ ಸ್ತೋತ್ರ.

"ಯಜ್ಞದ ಕುರಿಯಾದಾತನ ವಿವಾಹಕಾಲವು ಬಂತು ಆತನಿಗೆ ವಿವಾಹವಾಗುವ ಕನ್ಯೆಯಾಗಿ ಸಿದ್ಧಮಾಡಿಕೊಂಡಿರುವ ಹಾಗೆ" (ಪ್ರಕಟಣೆ 19:7) ನನ್ನನ್ನು ಆಶೀರ್ವದಿಸು. ಯಜ್ಞದ ಕುರಿಯಾದಾತನೇ. ಜೀವ ಭಾಧ್ಯರ ಪಟ್ಟಿಯಲ್ಲಿ ನನ್ನ ಹೆಸರು ಸದಾಕಾಲವು ಇರಲಿ, ಎಂದೆಂದಿಗೂ ಅಳಿಸಲ್ಪಡದೇ ಇರಲಿ. ಅಪ್ಪಾ ನನ್ನನ್ನು ನಿನ್ನ ರಾಜ್ಯದಲ್ಲಿ ತಪ್ಪದೇ ಸೇರಿಸಿಕೋ, ಆಮೆನ್ (ಪ್ರಕಟಣೆ 21:27) ನನ್ನೊಡನೆ ಯಜ್ಞದ ಮೂಲಕ ಒಡಂಬಡಿಕೆಯನ್ನು ಮಾಡಿಕೊಂಡ ನನ್ನ ಭಕ್ತರನ್ನು ನನ್ನ ಬಳಿಗೆ ಕರಕೊಂಡು ಬನ್ನಿರಿ ಎಂದು ಆಜ್ಞಾಪಿಸಿ ನನ್ನನ್ನು ನಿನ್ನ ಬಳಿ ಕರೆದುಕೊಂಡಿರುವುದಕ್ಕಾಗಿ ನಿನಗೆ ಸ್ತೋತ್ರ. (ಕೀರ್ತನೆ 50:5)

ಕರ್ತನೇ ನನ್ನ ಯೇಸುವೇ ಪರಲೋಕದಲ್ಲಿ ಯಜ್ಞದ ಕುರಿಯಾದಾತನೂ ಆದ ಯೇಸುವೇ ನೀನೇ ದೇವಾಲಯವಾಗಿರುವುದಕ್ಕಾಗಿ ನಿನಗೆ ಸ್ತೋತ್ರ. ಪರಲೋಕದಲ್ಲಿ ಸೂರ್ಯನಾಗಲೀ, ಚಂದ್ರನಾಗಲೀ, ಇರದಂತೆ ಯಜ್ಞದ ಕುರಿಯೇ ನೀನೇ ಅದರ ದೀಪವಾಗಿರುವುದಕ್ಕಾಗಿ ನಿನಗೆ ಸ್ತೋತ್ರ (ಪ್ರಕ 21:22-24) ನಿನ್ನ ಆ ಪರಿಶುದ್ಧವಾದ ಬೆಳಕಿನಲ್ಲೇ ಸಂಚಾರ ಮಾಡುವಂತ ಭಾಗ್ಯವನ್ನು ಈ ನಿನ್ನ ಕುರಿಮರಿಯಾದ ನನಗೆ ಅನುಗ್ರಹಿಸಪ್ಪಾ ಆಮೆನ್. ಯಜ್ಞದ ಕುರಿಯೇ ನಿನ್ನ ಕೋಪಕ್ಕೆ ನಿನ್ನ ಕುರಿಮರಿಯಾಗಿರುವ ನನ್ನನ್ನು ಒಂದು ಕಾಲಕ್ಕೂ ಬಿಟ್ಟುಕೊಡಬೇಡ (ಪ್ರಕಟಣೆ 6:16) ನಿನ್ನ ಕೃಪೆಗೆ ನನ್ನನ್ನು



ಪಾತ್ರಳ/ನ/ನ್ನಾಗಿ ಮಾಡು ತಂದೆಯೇ. ಯಜ್ಞದ ಕುರಿಮರಿಯೇ ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹದಲ್ಲಿ ನಿನ್ನ ಸಿಂಹಾಸನದ ಮುಂದೆಯೂ ಇರುವ ಹಾಗೂ ಸೇರುವ ಸಕಲ ಜನಾಂಗ-ಕುಲ-ಪ್ರಜೆಗಳವರೂ ಸಕಲಭಾಷೆಗಳನ್ನಾಡುವವರೂ ಆಗಿರುವ ಆ ಸಮೂಹದಲ್ಲಿ ನನ್ನನ್ನೂ ಒಬ್ಬಳ/ನ/ನ್ನಾಗಿ ಸೇರಿಸಿಕೋ ತಂದೆಯೇ, ಆಮೆನ್. "ಸಿಂಹಾಸನಾಸೀನನಾಗಿರುವ ನಮ್ಮ ದೇವರಿಗೂ ಯಜ್ಞದ ಕುರಿಯಾದಾತನಿಗೂ ನಮಗೆ ರಕ್ಷಣೆಯುಂಟಾದದ್ದಕ್ಕಾಗಿ ಸ್ತೋತ್ರ" (ಪ್ರಕಟಣೆ 7:10) ಕರ್ತನೇ ನಿನ್ನ ರಕ್ಷಣೆಯಲ್ಲಿ ಭದ್ರವಾಗಿ ನಿಂತುಕೊಂಡು ಒಳ್ಳೇ ಕುರುಬನೇ ನಿನಗೆ ನಂಬಿಗಸ್ಥಳಾ/ನಾ/ಗಿ ನಾನು ನಡೆದುಕೊಳ್ಳಲು ಸಹಾಯ ಮಾಡಬೇಕೆಂದು ಕ್ರಿಸ್ತೇಸುವಿನ ನಾಮದಲ್ಲಿ ಪರಿಶುದ್ಧಾತ್ಮನ ಪ್ರಸನ್ನತೆಯಲ್ಲಿ ಬೇಡಿಹೊಂದಿದ್ದೇನೆ ಜೀವವುಳ್ಳ ತಂದೆಯೇ ಆಮೆನ್.

# 14. ಯೇಸುವೇ ನಿನ್ನನ್ನು ನೋಡುವ ಹಂಬಲ

"ನನ್ನ ಆಸಕ್ತಿಯು ಬಹು ಜನರನ್ನು ಪ್ರೇರೇಪಿಸಲಿ" (2ಕೊರಿಂ 9:2) ತಂದೆಯೇ ಆಮೆನ್.

ಯೋಹಾನನನ್ನು ಪ್ರೀತಿ ಮಾಡಿ ಆತನಿಗೆ ದರ್ಶನ ಕೊಟ್ಟಂತೆ ಯೇಸಪ್ಪಾ ಈ ನಿನ್ನ ಮಗಳ/ನಿ/ಗೆ ದರ್ಶನ ಕೊಡು. ಯೇಸಪ್ಪಾ ನಿನ್ನ ನೋಡಬೇಕಪ್ಪಾ ನಿನ್ನ ಜೊತೆಯಲ್ಲಿ ಮಾತಾಡಬೇಕಪ್ಪ. ನೀನು ನನ್ನನ್ನು ನೋಡುತ್ತಿರುವ ಪ್ರಕಾರ ನಾನೂ ನಿನ್ನನ್ನು ಒಮ್ಮೆಯಾದರೂ ನೋಡುವ ಭಾಗ್ಯವನ್ನು ಕರುಣಿಸು ಯೇಸಪ್ಪಾ. ಆಮೆನ್. "ನಿರ್ಮಲಚಿತ್ತರು ಧನ್ಯರು; ಅವರು ದೇವರನ್ನು ನೋಡುವರು" (ಮತ್ತಾಯ 5:8) ಆದುದರಿಂದ ನಿರ್ಮಲಚಿತ್ತವಾದ ಮನಸ್ಸು ನನಗೆ ದಯಪಾಲಿಸು ತಂದೆಯೇ, ನಿನ್ನ ನೋಡಿ ಧನ್ಯಳಾ/ನಾ/ಗಲು ಸಹಾಯಮಾಡು ತಂದೆಯೇ. ಆಮೆನ್.

"ದೇವಾಲಯದೊಳಗೆ ಪ್ರಾರ್ಥನೆಮಾಡುತ್ತಿದ್ದಾಗ ಧ್ಯಾನಪರವಶನಾಗಿ ಯೇಸುವನ್ನು ಕಂಡೆನು." (ಅ.ಕೃ 22:17) ಎಂದು ಪೌಲನು ನಿನ್ನನ್ನು ನೋಡಿ ಸಂತೃಪ್ತಿಯಾದ ರೀತಿಯಲ್ಲಿ ನಾನು ಆ ಸಂತೃಪ್ತಿಯಲ್ಲಿ ಪಾಲು ಹೊಂದಿಕೊಳ್ಳಬೇಕೆಂತಲೂ ಬಿನ್ನೈಸುತ್ತಿದ್ದೇನೆ.

"ಏಳು ಚಿನ್ನದ ದೀಪಸ್ತಂಭಗಳನ್ನೂ ಆ ದೀಪಸ್ತಂಭಗಳ ಮಧ್ಯದಲ್ಲಿ ಮನುಷ್ಯಕುಮಾರನಂತೆ ಇರುವವನನ್ನೂ ಕಂಡೆನು. ಆತನು ನಿಲುವಂಗಿಯನ್ನು ತೊಟ್ಟು ಚಿನ್ನದ ಪಟ್ಟಿಯನ್ನು ಎದೆಗೆ ಕಟ್ಟಿಕೊಂಡಿದ್ದನು. ಆತನು ತಲೆಯ ಕೂದಲು ಬಿಳೀ ಉಣ್ಣೆಯಂತೆಯೂ ಹಿಮದಂತೆಯೂ ಬೆಳ್ಳಗಿತ್ತು. ಆತನ ಕಣ್ಣುಗಳು ಬೆಂಕಿಯ ಉರಿಯಂತೆಯೂ ಆತನ ಪಾದಗಳು ಕುಲುಮೆಯಲ್ಲಿ ಕಾಯಿಸಿದ ತಾಮ್ರದಂತೆಯೂ ಆತನ ಧ್ವನಿಯು ಜಲಪ್ರವಾಹದ ಘೋಷದಂತೆಯೂ ಇದ್ದವು. ಆತನ ಬಲಗೈಯಲ್ಲಿ ಏಳು ನಕ್ಷತ್ರಗಳಿದ್ದವು. ಆತನ ಬಾಯೊಳಗಿಂದ ಹದವಾದ ಇಬ್ಬಾಯಿ ಕತ್ತಿಯು ಹೊರಡುತ್ತಿತ್ತು. ಆತನ ಮುಖವು ಮಧ್ಯಾಹ್ನದಲ್ಲಿ ಪ್ರಕಾಶಿಸುವ ಸೂರ್ಯನಂತಿತ್ತು. ನಾನು ಆತನನ್ನು ಕಂಡಾಗ ಸತ್ತವನ ಹಾಗೆ ಆತನ ಪಾದಗಳ ಮುಂದೆ ಬಿದ್ದೆನು. ಆತನು ತನ್ನ ಬಲಗೈಯನ್ನು ನನ್ನ ಮೇಲಿಟ್ಟು



ಹೆದರಬೇಡ ನಾನು ಮೊದಲನೆಯವನೂ ಕಡೆಯವನೂ ಸದಾ ಜೀವಿಸುವವನೂ ಆಗಿದ್ದೇನೆ." (ಪ್ರಕಟಣೆ 1:13-17) ಹೀಗೆ ನೀನು ಯೋಹಾನನಿಗೆ ಕಾಣಿಸಿಕೊಂಡು ಮಾತನಾಡಿರುವುದರಿಂದ ಯೇಸಪ್ಪಾ ನಾನು ಸಹ ನಿನ್ನನ್ನು ಇದೇ ರೀತಿಯಲ್ಲಿ ನೋಡುವ ಧನ್ಯತೆಯನ್ನು ನಿನ್ನ ಚಿತ್ತವಿದ್ದಲ್ಲಿ ನನಗೆ ಅನುಗ್ರಹಿಸು ತಂದೆಯೇ ಆಮೆನ್.

"ಯೋಹೋವನ ಹಸ್ತಸ್ಪರ್ಶದಿಂದ ಅವನು ಪರವಶನಾದನು" (ಯೆಹೆಜ್ಕೇಲ 1:3) ಈ ವಾಕ್ಯದ ಪ್ರಕಾರ ನಾನು ನಿನ್ನ ಹಸ್ತಸ್ಪರ್ಶದಿಂದ ಪರವಶವಾಗಲು ಸಹಾಯಮಾಡು ಆಮೆನ್.

"ಇಂದ್ರನೀಲಮಣಿಯಂತೆ ಹೊಳೆಯುವ ಸಿಂಹಾಸನಾಕಾರವು ಕಾಣಿಸಿತು; ಅದರ ಮೇಲೆ ನರರೂಪದಂಥ ರೂಪವುಳ್ಳ ಒಬ್ಬಾತನು ಆಸೀನನಾಗಿದ್ದನು. ಸೊಂಟದ ಹಾಗೆ ತೋರುವ ಆತನ ಮಧ್ಯಭಾಗದಿಂದ ಮೇಲ್ಗಡೆ ಸುವರ್ಣವು ಥಳಥಳಿಸುತ್ತದೋ, ಬೆಂಕಿಯು ಈ ರೂಪದೊಳಗೆಲ್ಲಾ ಪ್ರಜ್ವಲಿಸುತ್ತದೋ ಎಂಬಂತಿರುವ ಅದ್ಭುತಕಾಂತಿಯನ್ನು ಕಂಡೆನು; ಸೊಂಟದ ಹಾಗೆ ತೋರುವ ಆತನ ಮಧ್ಯಭಾಗದಿಂದ ಕೆಳಗಡೆ ಬೆಂಕಿಯು ಉರಿಯುತ್ತದೋ ಎಂಬಂತಿರುವ ಮಹಾ ತೇಜಸ್ಸನ್ನು ನೋಡಿದೆನು; ಮತ್ತು ಪ್ರಕಾಶವು ಅವನನ್ನು (ಆತನನ್ನು) ಸುತ್ತಿಕೊಂಡಿತ್ತು ಮಳೆಗಾಲದಲ್ಲಿ ಮೇಘಮಂಡಲದೊಳಗೆ ಬಿಲ್ಲು ಹೊಳೆಯುವಂತೆ ಆತನ ಸುತ್ತಣ ಪ್ರಕಾಶವೂ ಹೊಳೆಯುತ್ತಿತ್ತು. ಹೀಗೆ ಯೆಹೋವನ ಮಹಿಮಾದ್ಭುತ ದರ್ಶನವು ಆಯಿತು. ಇದು ಕಣ್ಣಿಗೆ ಬೀಳಲು ನಾನು ಅಡ್ಡಬಿದ್ದು ಮಾತಾಡುವಾತನ ವಾಣಿಯನ್ನು ಕೇಳಿದನು" (ಯೆಹೆಜ್ಕೇಲ 1:26-28) ಎಂದು ಯೆಹೆಜ್ಕೇಲನು ಹೇಳುವ ರೀತಿಯಲ್ಲಿ ನನಗೆ ನಿನ್ನ ಚಿತ್ತವಿದ್ದರೆ ಕಾಣಿಸಿಕೋ ಯೇಸಪ್ಪಾ. ಆಮೆನ್.

"ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" (ಯೋಹಾನ 14:9) ಯೇಸುವೇ "ನೀನು ತಂದೆಯಲ್ಲಿರುವುದರಿಂದ ತಂದೆಯು ನಿನ್ನಲ್ಲಿ ಇರುವುದರಿಂದ" (ಯೋಹಾನ 14:10) ನನಗೆ ನಿನ್ನನ್ನು ನೋಡುವ ಹಂಬಲವಾಗಿದೆ, ಬಾ ಯೇಸುವೇ ನನಗೆ ಕಾಣಿಸು, ನಿನ್ನನ್ನು ನಾನು ಕಣ್ಣುತುಂಬಾ ನೋಡಿ ಮನಸಾರೆ ತೃಪ್ತಿ ಹೊಂದುವಂತೆ ನನ್ನನ್ನು ಆಶೀರ್ವದಿಸಬೇಕೆಂದು ದೀನತೆಯಿಂದ ಪ್ರಾರ್ಥಿಸುತ್ತಿದ್ದೇನೆ ತಂದೆಯೇ. ಆಮೆನ್.

"ನನ್ನ ನಲ್ಲನು ಬಿಳುಪು ಕೆಂಪು ಬಣ್ಣವುಳ್ಳವನು; ಅವನು ಹತ್ತುಸಾವಿರ ಜನರಲ್ಲಿ ಧ್ವಜಪ್ರಾಯನು ಅವನ ತಲೆಯು ಚೊಕ್ಕಬಂಗಾರದಂತಿದೆ, ಗುಂಗುರು ಗುಂಗುರಾಗಿರುವ ಅವನ ಕೂದಲು ಕಾಗೆಯಂತೆ ಕಪ್ಪಾಗಿದೆ. ಅವನ ಕಣ್ಣುಗಳೋ ತುಂಬಿತುಳುಕುವ ತೊರೆಗಳ ಹತ್ತಿರ ತಂಗುತ್ತಲೂ ಕ್ಷೀರದಲ್ಲಿ ಸ್ನಾನಮಾಡುತ್ತಲೂ ಇರುವ ಪಾರಿವಾಳಗಳಂತಿವೆ. ಅವನ ಕೆನ್ನೆಗಳು ಕರ್ಣಕುಂಡಲ ಗಿಡಗಳ ಪಾತಿಗಳಂತೆಯೂ ಸುಗಂಧ ಸಸ್ಯಗಳು ಬೆಳೆಯುವ ದಿಬ್ಬಗಳಂತೆಯೂ ಇವೆ; ಅಚ್ಚರಕ್ತಬೋಳವನ್ನು ಸುರಿಸುವ ಅವನ ತುಟಿಗಳು ಕೆಂದಾವರೆಗಳೇ, ಅವನ ಕೈಗಳು ಪೀತರತ್ನ ಖಚಿತವಾದ ಬಂಗಾರದ ಸಲಾಕಿಗಳೋಪಾದಿಯಲ್ಲಿವೆ, ಅವನ ಮೈ ಇಂಧ್ರನೀಲವುಯವಾದ ದಂತಫಲಕದ ಹಾಗಿದೆ. ಅವನ ಕಾಲುಗಳು ಅಪರಂಜಿಯ ಸುಣ್ಣ ಪಾದಗಳ ಮೇಲಿಟ್ಟ ಚಂದ್ರಕಾಂತ ಸ್ತಂಭಗಳು; ದೇವಾರುಗಳಷ್ಟು ರಮಣೀಯವಾದ ಅವನ ಗಾಂಭೀರ್ಯವು ಲೆಬನೋನಿಗೆ ಸಮಾನ. ಅವನ ನುಡಿ ಬಹು ಇಂಪು; ಹೌದು, ಅವನು ಸರ್ವಾಂಗದಲ್ಲಿಯೂ ಮನೋಹರನು; (ಪರಮ ಗೀತೆ 5:10-16) ಯೇಸಪ್ಪ ನಿನ್ನ ಸೌಂದರ್ಯ ವರ್ಣಿಸಲು ಯಾರಿಂದಲೂ ಸಾಧ್ಯವಿಲ್ಲ ಈ ದರ್ಶನ ನಿನ್ನ ಚಿತ್ತವಿದ್ದಲ್ಲಿ ನನಗೆ ದಯಪಾಲಿಸು ತಂದೆಯೇ ಆಮೆನ್.

"ನೀನು ಎಲ್ಲಾ ಮನುಷ್ಯರಿಗಿಂತ ಅತಿ ಸುಂದರನು; ನಿನ್ನ ಮಾತುಗಳು ಬಹಳ ಮಧುರ;" (ಕೀರ್ತ 45:2) ನಿನ್ನನ್ನು ನಾನು ನೋಡಲೇಬೇಕೆಂಬ ಹಂಬಲ ನನಗಿರುವುದರಿಂದ ನನ್ನ ಆಸೆಯನ್ನು ನೀನು ಪೂರೈಸುತ್ತೀಯೆಂದು ನಂಬುತ್ತಿದ್ದೇನೆ ತಂದೆಯೇ ಆಮೆನ್.

ಯೇಸಪ್ಪಾ ಯಾರ ಪ್ರಾರ್ಥನೆಯನ್ನೂ ನೀನು ತಳ್ಳುವುದಿಲ್ಲ. "ದೇವರಾದುಕೊಂಡವರು ಆತನಿಗೆ ಹಗಲು-ರಾತ್ರಿ ಮೊರೆಯಿಡುವಲ್ಲಿ ಆತನು ಅವರ ವಿಷಯದಲ್ಲಿ ತಡಮಾಡಿದರೂ ಅವರ ನ್ಯಾಯವನ್ನು ತೀರಿಸದೆ ಇರುವನೇ? ಅವರಿಗೆ ಬೇಗ ನ್ಯಾಯ ತೀರಿಸುವನೆಂದು ನಿಮಗೆ ಹೇಳುತ್ತೇನೆ."(ಲೂಕ 18:7) ಎಂದು ಯೇಸಪ್ಪಾ ನೀನು ಹೇಳಿರುವುದರಿಂದ ನಿನ್ನನ್ನು ಕಾಣಬೇಕೆಂದು ನಾನು ಹಗಲು-ರಾತ್ರಿ ಮೊರೆಯಿಡುತ್ತಿದ್ದೇನೆ. ಬೇಗ ಬಂದು ನನಗೆ ಕಾಣಿಸಿ ನನ್ನ ಜೀವನವನ್ನು ಸಾರ್ಥಕ ಪಡಿಸಬೇಕೆಂದು ಯೇಸುವೇ ನಿನ್ನ ಅತೀಪರಿಶುದ್ಧನಾಮದಲ್ಲಿ ಪವಿತ್ರಾತ್ಮನ ಸಹಾಯದಿಂದ ಬೇಡಿಕೊಳ್ಳುತ್ತಿದ್ದೇನೆ ನನ್ನ ಜೀವವುಳ್ಳ ತಂದೆಯೇ ಆಮೆನ್.



## 15. ಹಣದ ವಿಚಾರಕ್ಕಾಗಿ

ಯೇಸಪ್ಪಾ ನನ್ನನ್ನು ಎಲ್ಲಾ ತೊಂದರೆಗಳಿಂದ ಬಿಡಿಸಿ ಒಳ್ಳೇ ಜ್ಞಾನ ಬುದ್ಧಿಯನ್ನು ಕೊಟ್ಟು ಈ ಲೋಕದಲ್ಲಿ ಯಾವ ರೀತಿ ಜೀವಿಸಬೇಕು ಎಂದು ನೀನು ಕಲಿಸಿ ಕೊಡುತ್ತಿರುವುದಕ್ಕಾಗಿ ನಿನಗೆ ಸ್ತೋತ್ರ. ವಾಕ್ಯದ ಪ್ರಕಾರ ನನ್ನ ಕೆಲಸಕಾರ್ಯದಲ್ಲಿ ಆಗುವಂತಹ ತೊಂದರೆಗಳನ್ನು ತೆಗೆದುಹಾಕು. ನಿನಗಾಗಿ ನಾನು ಏನೂ ಮಾಡಲಿಲ್ಲ. ನಿನ್ನ ರಾಜ್ಯಕ್ಕಾಗಿ ನಾನು ಏನನ್ನೂ ಬಿತ್ತಲಿಲ್ಲ. ನಾನು ನಿನಗಾಗಿ ಮಾಡಿರುವ ಕಾರ್ಯಗಳನ್ನೆಲ್ಲಾ ಗಮನಿಸಿದರೆ ನಿನ್ನ ತ್ಯಾಗದ ಮುಂದೆ ನಾನು ಏನೂ ಮಾಡಲಿಲ್ಲವೆಂದು ನನಗೆ ಅರ್ಥವಾಗುತ್ತಿದೆ.

ಯೇಸಪ್ಪಾ ನನ್ನನ್ನು ಕ್ಷಮಿಸು. ಕೇಳುವುದಕ್ಕಿಂತ ಅಧಿಕವಾಗಿ ಎಲ್ಲವನ್ನು ಅನುಗ್ರಹಿಸಿದೆ, ಉನ್ನತಸ್ಥಾನವನ್ನು ಕೊಟ್ಟು ಗೌರವವುಳ್ಳ ವ್ಯಕ್ತಿಯಾಗಿ ನನ್ನನ್ನು ನಿಲ್ಲಿಸಿದೆ ನಾನು ಅದನ್ನು ಮರೆತು ಇಷ್ಟದ ರೀತಿಯಲ್ಲಿ ವ್ಯರ್ಥಕಾರ್ಯಗಳಿಗೆ ನನ್ನ ಸಮಯವನ್ನೂ, ಹಣವನ್ನೂ ಉಪಯೋಗಿಸಿ ನಷ್ಟ ಮಾಡಿಕೊಂಡೆ ಯೇಸಪ್ಪಾ, ನಿನ್ನ ಆದಾಯದಿಂದಲೂ ಬೆಳೆಯ ಪ್ರಥಮಫಲದಿಂದ ಕರ್ತನನ್ನು ಸನ್ಮಾನಿಸು ಎಂದು ನೀನು ಎಚ್ಚರಿಸುವಾಗ ನಾನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ನನಗೆ ಬರುವ ಆದಾಯದಲ್ಲಿ ನಿನಗೆ ಎಂದೂ ಸರಿಯಾಗಿ ಬೇರ್ಪಡಿಸಲಿಲ್ಲ ನನ್ನನ್ನು ಕ್ಷಮಿಸು. ನನಗೆ ಆಗುತ್ತಿರುವ ಈ ತೊಂದರೆಗಳಿಂದ ನನ್ನನ್ನು ಬಿಡಿಸು.

ನಿನ್ನ ರಕ್ತದಿಂದ ತೊಳೆದು ನಿನ್ನ ಮಗಳಾ/ನಾ/ಗಿ ಅಂಗೀಕರಿಸಿ, ನೀತಿವಂತಳಾ/ನಾ/ಗಿ ಮಾಡಿರುವುದಕ್ಕಾಗಿ ಸ್ತೋತ್ರ. ಆದರೆ ನೀತಿವಂತನ ಮನೆಯಲ್ಲಿ ಧನೈಶ್ವರ್ಯಗಳಿರುವವು; ಅವನ ನೀತಿಯು ಸದಾಕಾಲವೂ ಫಲಿಸುತ್ತಿರುವದು ಎಂದು ನೀನು ಹೇಳಿರುವುದರಿಂದ ನನಗೆ ಆರ್ಥಿಕ ವಿಷಯದಲ್ಲಿ ಆಗುತ್ತಿರುವಂತಹ ಎಲ್ಲಾ ತೊಂದರೆಯಿಂದ ನನ್ನನ್ನು ಬಿಡಿಸಿ ಧನೈಶ್ವರ್ಯದಿಂದ ತುಂಬಿಸಬೇಕೆಂದು ವಿಜ್ಞಾಪಿಸುತ್ತಿದ್ದೇನೆ;

ಇಕ್ಕಟ್ಟಿನಿಂದ ನನ್ನನ್ನು ನನ್ನ ಕುಟುಂಬವನ್ನು ತಪ್ಪಿಸು, ಯೇಸಪ್ಪಾ ನಿನ್ನ ರಾಜ್ಯಕ್ಕಾಗಿ ನೀತಿಗಾಗಿ ಮೊದಲು ನಾನು ತವಕಿಸುತ್ತೇನೆ. ಅದರಂತೆ ಎಲ್ಲಾ

ಕಾರ್ಯದಲ್ಲೂ ಮುಂದೆ ಸಾಗುತ್ತೇನೆ. ನನ್ನ ತಪ್ಪು ಏನು ಎಂದು ಅರ್ಥಮಾಡಿಕೊಂಡಿದ್ದೇನೆ. ಶಿಷ್ಟನ ದುಡಿತ ಜೀವಾಸ್ಪದವಾಗಿದೆ, ದುಷ್ಟನ ಆದಾಯ ಪಾಪಾಸ್ಪದ ಆಗಿರುವುದರಿಂದ ನಾನು ದುಷ್ಟನಂತೆ ನಡೆಯದೆ; ನಿನ್ನ ಮಾರ್ಗದಲ್ಲಿ ಶಿಷ್ಟನ ಹಾಗೆ ನಡೆದುಕೊಂಡು ಆಶೀರ್ವಾದ ಹೊಂದಿಕೊಳ್ಳಲು ಸಹಾಯಮಾಡು. ಕೆಡುಕರ ಸಹವಾಸ ಮಾಡದಂತೆ ಅದರಿಂದ ತಪ್ಪಿಸು, ನಾನು ಮಾಡುವ ಕೆಲಸ ಕಾರ್ಯದಿಂದ ಫಲಕೊಡುವ ರೀತಿಯಲ್ಲಿ ನನ್ನನ್ನು ಮಾರ್ಪಡಿಸು. ನನ್ನ ಮನೆಗೆ ಯಾವ ರೀತಿಯಲ್ಲೂ ನಾಶನ ಆಗಬಾರದು, ಯಾವಾಗಲೂ ಏಳಿಗೆ ಆಗುವಂತೆ ಸಹಾಯಮಾಡು, ಯಾವ ವಿಪತ್ತಿಗೂ ಒಳಗಾಗದಂತೆ ಬೇರೆಯವರ ಮಾತನ್ನು ಕೇಳಿ ಅದರಿಂದ ಹಾಳಾಗದಂತೆ ಎಲ್ಲಾ ಸಂಧರ್ಭದಲ್ಲೂ ಮರಣಕಾಲದಲ್ಲಿಯೂ ನಿನ್ನಲ್ಲಿ ಆಶ್ರಯ ಪಡೆಯಲು ಸಹಾಯಮಾಡು.

ನಿನ್ನ ಕೃಪೆಯು ನನ್ನೊಂದಿಗೆ ಇರುವಾಗ ಯಾವ ಕಳವಳಕ್ಕೂ ಅದು ಆಸ್ಪದ ಕೊಡುವುದಿಲ್ಲ, ನಿನಗೆ ವಿರುದ್ಧವಾಗಿ ನಡೆದು ದುಷ್ಟನ ಹಾಗೆ ಜೀವಿಸಿ ನೀನು ಮೆಚ್ಚುವಂತಹ ಕಾರ್ಯಗಳನ್ನು ಮಾಡಿದರೂ ಯಜ್ಞಗಳನ್ನು ಅರ್ಪಿಸಿದರೂ ನೀನು ಒಪ್ಪುವಂತಹ ದೇವರಲ್ಲ. ಆದರೆ ನನ್ನ ವಿಜ್ಞಾಪನೆ ನಿನ್ನಲ್ಲಿ ಮೆಚ್ಚಿಕೆಯಾಗಿ ಕಾಣುವ ರೀತಿಯಲ್ಲಿ ನನ್ನನ್ನು ಬದಲಾಯಿಸಿ ನಡೆಸು. ನಿನ್ನ ವಾಕ್ಯವನ್ನು ನಾನು ಯಾವಾಗಲೂ ಅನುಸರಿಸಿ ಸುಕ್ಷೇಮದಿಂದ ನಡೆದುಕೊಂಡು ನಿನ್ನಲ್ಲೇ ಭರವಸವುಳ್ಳವಳಾ/ನಾ/ಗಿ ಜೀವಿಸಲು ಬಲಕೊಡು. ಯೇಸಪ್ಪಾ ನನ್ನನ್ನು ಧನವಂತಳಾ/ನಾ/ಗಿ ನಿಲ್ಲಿಸಿ ಐಶ್ವರ್ಯವನ್ನು ಬಲವಾದ ಕೋಟೆಯಾಗಿ ನಿಲ್ಲಿಸಿದರೂ ನಾನು ಎತ್ತರವಾದ ಗೋಡೆಯೆಂದೂ ಭಾವಿಸಿಕೊಳ್ಳದೇ ಎಲ್ಲಾ ಸಂದರ್ಭದಲ್ಲೂ ತಗ್ಗಿಸಿ ನಡೆದುಕೊಳ್ಳುವುದಕ್ಕೆ ಕೃಪೆ ತೋರಿಸು. ನನ್ನಲ್ಲಿರುವುದನ್ನೂ ಇಲ್ಲದೇ ಇರುವ ವ್ಯಕ್ತಿಗಳಿಗೆ ಕೊಡುವ ಮನಸ್ಸನ್ನು ಅನುಗ್ರಹಿಸು. ಒಂದು ವೇಳೆ ನನ್ನ ಹತ್ತಿರ ಏನೂ ಇಲ್ಲದಿದ್ದರೂ, ಕೇಳುವಂತವರಿಗೆ ಸ್ವಲ್ಪವಾದರೂ ಕೊಡುವಂತೆ ನನಗೆ ಸಹಾಯ ಮಾಡು, ನನ್ನ ಕೆಲಸಕಾರ್ಯದಲ್ಲಿ ನನ್ನ ಮನೆಯಲ್ಲಿ ಎಲ್ಲಾ ವಿಷಯದಲ್ಲೂ ಜ್ಞಾನವುಳ್ಳವಳಾ/ನಾ/ಗಿ ವಿವೇಕದಿಂದ ನಡೆಯುವಂತೆ ನನಗೆ ಕಲಿಸಿಕೊಡು ಕೇಡಿಗೆ ಮುಯ್ಯಿತೀರಿಸುವ ಜನರ ಸಹವಾಸಕ್ಕೆ ನಾನು ಹೋಗದಂತೆ



ನಿನ್ನನ್ನೇ ನಿರೀಕ್ಷಿಸಿಕೊಂಡು, ನಿನ್ನಲ್ಲೇ ಪ್ರಾರ್ಥಿಸುತ್ತಾ ಉತ್ತಮವಾದ ಸ್ಥಾನ ಹೊಂದಿಕೊಳ್ಳುವುದಕ್ಕೆ ಮಾರ್ಗ ತೆರೆಯಮಾಡು. ನಿನ್ನ ದಯಾದೃಷ್ಟಿ ನನ್ನ ಮೇಲೆ ಇರಲಿ; ನನಗೆ ಬಡತನ ಇರುವುದಾದರೂ ಮತ್ತೊಬ್ಬರಿಗೆ ಅನ್ನವನ್ನು ಕೊಡುವ ರೀತಿಯಲ್ಲಿ ನನಗೆ ಮನಸ್ಸು ಕೊಟ್ಟಿರುವುದಕ್ಕಾಗಿ ಸ್ತೋತ್ರ.

ಒಂದು ಕಾಲ ಉಂಟು; ನನ್ನ ನಿರೀಕ್ಷೆಯು ಯೇಸುವಿನ ನಾಮದಲ್ಲಿ ನಿರರ್ಥಕವಾಗದು ಯಾಕೆಂದರೆ ಬಡವರಿಗೆ ದಾನಮಾಡುವವನು ಕೊರತೆಪಡನು; ಎಂದು ನನಗೆ ನೀನು ತಿಳಿಸಿದ್ದೀಯಾ ಅದಕ್ಕಾಗಿ ಸ್ತೋತ್ರ. ಯೇಸಪ್ಪಾ ಬೇರೆಯವರ ಕಷ್ಟ ದುಃಖ ನೋಡಿ ಕಣ್ಣು ಮುಚ್ಚಿಕೊಂಡು ನಡೆಯುವುದಾದರೆ ಅದರಿಂದ ಆಶೀರ್ವಾದ ಬರುವುದಿಲ್ಲ; ಬಹುಶಾಪಕ್ಕೆ ನಾನು ಒಳಗಾಗುತ್ತೇನೆ. ಆ ರೀತಿಯಲ್ಲಿ ನಾನು ಎಂದಿಗೂ ಜೀವನ ನಡೆಸಬಾರದು, ನಾನು ಲೂಕ 8:3 ಪ್ರಕಾರ ಯೋಹಾನಳು ಸುಸನ್ನಳು, ಇನ್ನು ಬೇರೆ ಅನೇಕರು, ಇವರು ತಮ್ಮ ಆಸ್ತಿಯಿಂದ ಆತನಿಗೆ ಕೊಟ್ಟು ಉಪಚಾರಮಾಡುತ್ತಿದ್ದರು. ಎಂದು ಹೇಳಿರುವ ಪ್ರಕಾರ ಯೇಸಪ್ಪಾ ನಾನು ಈ ರೀತಿಯಲ್ಲೇ ನನ್ನಲ್ಲಿರುವುದನ್ನ ನಿನ್ನ ಸೇವೆಗೆ ಕೊಟ್ಟು ನಿನ್ನ ಸೇವಕನನ್ನು ನಾನು ಉಪಚರಿಸಬೇಕು. ನನ್ನ ಮನೆ ಕೊರತೆಯಾಗಬಾರದು. ನೀನು ಕೇಳಿಕೊಂಡರೆ ನಾನು ಅನ್ಯಜನಗಳನ್ನೆಲ್ಲಾ ನಿನಗೆ ಅಧೀನ ಮಾಡುವೆನು; ಭೂಮಿಯ ಕಟ್ಟಕಡೆಯವರೆಗೂ ಇರುವ ಎಲ್ಲಾ ದೇಶಗಳನ್ನೂ ನಿನಗೆ ಸ್ವಾಸ್ತ್ಯವಾಗಿ ಕೊಡುವೆನು ಎನ್ನುವ ಪ್ರಕಾರವೇ ನನ್ನನ್ನು ಈ ಎಲ್ಲಾ ಜನರ ಮಧ್ಯದಲ್ಲಿ ಉಪಯೋಗಿಸು. ನಾನು ಎಲ್ಲರಿಗೂ ಉದಾರ ಮನಸ್ಸಿನಿಂದ ನಿನ್ನ ಚಿತ್ತದ ಪ್ರಕಾರ ನಿನ್ನ ಸೇವೆಗೆ ಯಥಾರ್ಥವಾಗಿ ಸಹಾಯಕವಾಗಿ ನಿಲ್ಲುವಂತೆ ನನ್ನನ್ನು ಆಶೀರ್ವದಿಸು.

"ಇಸಾಕನು ಆ ದೇಶದಲ್ಲಿ ಬೀಜವನ್ನು ಬಿತ್ತಿ ಅದೇ ವರುಷದಲ್ಲಿ ನೂರರಷ್ಟು ಬೆಳೆಯನ್ನು ಹೊಂದಿದನು; ಕರ್ತನು ಅವನನ್ನು ಅಭಿವೃದ್ಧಿಪಡಿಸಿದನು; ಅವನ ಐಶ್ವರ್ಯವು ದಿನೇ-ದಿನೇ ಹೆಚ್ಚಿದ್ದರಿಂದ ಬಹು ಧನವಂತನಾದನು; ಅವನಿಗೆ ಧನಕುರಿಗಳು ಸಂಪತ್ತೂ ಅನೇಕ ಸೇವಕಜನವೂ ಇದ್ದವು. ಇದನ್ನು ನೋಡಿ ಫಿಲಿಷ್ಟಿಯರು ಹೊಟ್ಟೆಕಿಚ್ಚು ಪಟ್ಟರು. ಯೇಸಪ್ಪಾ ಇಸಾಕನನ್ನು ಅಭಿವೃದ್ಧಿ ಪಡಿಸಿದ ರೀತಿಯಲ್ಲಿ ನನ್ನನ್ನು ಅನ್ಯಜನರ ಮಧ್ಯದಲ್ಲಿ ಅಭಿವೃದ್ಧಿ ಪಡಿಸು. ನಾನು

ಕಣ್ಣಿತ್ತಿ ನೋಡುವಾಗ ನೀನು ನನಗಾಗಿ ಕೊಟ್ಟಿರುವ ದೇಶದಲ್ಲಿ ನಾನು ನನ್ನ ಕುಟುಂಬವು ಮತ್ತು ನನ್ನ ಸಂತಾನವೂ ಶಾಶ್ವತವಾಗಿ ನೀನು ಕೊಟ್ಟಿರುವ ಆಶೀರ್ವಾದದಲ್ಲಿ ಸ್ಥಿರವಾಗಿ ಅಭಿವೃದ್ಧಿಯಾಗಿ ಬೆಳೆಯಬೇಕು, ನಿನ್ನ ವಾಗ್ದಾನ ನಮ್ಮಲ್ಲಿ ನೆರವೇರಬೇಕು. ನೀನು ನನಗೆ ಕೊಡುವ ಹಣ, ಆಸ್ತಿ, ಸಂಪತ್ತು ಎಲ್ಲಾದರಲ್ಲೂ ಹತ್ತನೇ ಒಂದು ಭಾಗವನ್ನು ಬೇರ್ಪಡಿಸಿ ನಿನ್ನ ಸನ್ನಿಧಿಗೆ ಒಪ್ಪಿಸುವಂತೆ ನನ್ನನ್ನು ಬಲಪಡಿಸಿ ನಡೆಸುವಂತವನಾಗು, ನಾನು ಕೈ ಹಾಕುವ ಎಲ್ಲಾ ಕೆಲಸಗಳನ್ನು ಸಫಲಪಡಿಸು. ಮಾಡುವ ಕೆಲಸಕಾರ್ಯದಲ್ಲಿ ನನ್ನನ್ನು ನಿನ್ನ ಮಾತುಗಳಿಂದ ಪರಾಂಬರಿಸಿ ನಡೆಸು.

ಕರ್ತನು ನನ್ನ ಸಂಗಡ ಇರುವಾಗ ಕೊರತೆಪಡೆನು. ಮಲಾಕಿ 3:10 ರ ಪ್ರಕಾರ ನನ್ನ ಆಲಯವು ಆಹಾರಶೂನ್ಯವಾಗದಂತೆ ನೀವು ದಶಮಾಂಶ ಯಾವತ್ತನ್ನೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಸುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ ಎಂದು ತಿಳಿಸಿದ್ದಕ್ಕಾಗಿ ಸ್ತೋತ್ರ. ನಾನು ಪ್ರತಿ ತಿಂಗಳೂ, ಪ್ರತಿವರುಷ ನನಗೆ ಬರುವ ಆದಾಯದಲ್ಲಿ ಹಾಗೂ ಧವಸಧಾನ್ಯದಲ್ಲಿ ದಶಮಭಾಗವನ್ನು ನಿನಗೆ ಪ್ರತ್ಯೇಕಿಸಿ ಸಾಕ್ಷಿಯಾಗಿ ನಿಲ್ಲಲು ಸಹಾಯಮಾಡು, ಯಾವನೂ ಇಬ್ಬರು ಯಜಮಾನರಿಗೆ ಸೇವೆಮಾಡಲಾರನು. ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು; ಇಲ್ಲವೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರ ಮಾಡುವನು. ನಾನು ದೇವರನ್ನೂ ಧನವನ್ನೂ ಕೂಡ ಒಂದೇ ಸಾರಿ ಸೇವಿಸಲು ಸಾಧ್ಯವಿಲ್ಲವೆಂದು ಕಲಿಸಿಕೊಟ್ಟಿದ್ದಕ್ಕಾಗಿ ಸ್ತೋತ್ರ. ಯೇಸಪ್ಪಾ. ನಿನ್ನ ಮಾತಿಗೆ ಅವಿಧೇಯಳಾ/ನಾ/ಗಿ ಮೋಸಕ್ಕೆ ಒಳಗಾಗಿ ಎಲ್ಲಾ ಹಣವನ್ನು ನಷ್ಟಮಾಡಿಕೊಂಡು ಸಾಲಕ್ಕೆ ಒಳಗಾದೆ, ಮನೆಕಟ್ಟಬೇಕು, ಆಸ್ತಿ ಮಾಡಬೇಕು ಎಲ್ಲರ ಮುಂದೆ ಉನ್ನತವಾಗಿ ಇರಬೇಕು ಎಂದು ಸ್ವಂತ ಆಲೋಚನೆಯಿಂದ ನಡೆದುಕೊಂಡು ನಿನ್ನ ರಾಜ್ಯಕ್ಕೆ ನಾನು ಏನನ್ನೂ ಸರಿಯಾಗಿ ದುಡಿಯದಂತೆ ಹಣದ ಹಿಂದೆ ಸುತ್ತಾಡಿದೆ ಆದರೆ ಈಗ ಎಲ್ಲಾ ಅರ್ಥಮಾಡಿಕೊಳ್ಳುವಂತೆ ಸಹಾಯ ಮಾಡಿದ್ದಕ್ಕಾಗಿ ನಿನಗೆ ಸ್ತೋತ್ರ. ನನ್ನ ಜೀವ ಇರುವವರೆಗೂ ನಿನಗಾಗಿ ಜೀವಿಸಿ, ನೀನು ಕೊಡುವ ಆಶೀರ್ವಾದದಿಂದ



ನಾನು ಅಭಿವೃದ್ಧಿಯಾಗಿ ಬೆಳೆದು ಬಂದು ಅನೇಕರಿಗೆ ಸಹಾಯ ಮಾಡುತ್ತಾ ನಿನ್ನ ರಾಜ್ಯಕ್ಕಾಗಿ ನನ್ನನ್ನು ಒಂದು ಸಾಧನವಾಗಿ ಉಪಯೋಗಿಸಬೇಕೆಂದು ಯೇಸುವಿನ ನಾಮದಲ್ಲಿ ಪ್ರಾರ್ಥಿಸುತ್ತೇನೆ ಜೀವವುಳ್ಳ ತಂದೆಯೇ ಆಮೆನ್. . . .ಆಮೆನ್ . . .

(ಜ್ಞಾನೋಕ್ತಿ 3:9, 8:18-21, 10:16, 12:12, 14:11,32, 15:6,8, 16:20, 18:11, 19:14, 20:22, 22:9, 23:18, 28:27) (ಕೀರ್ತನೆ 2:8, 112:3) (ಮತ್ತಾಯ 6:24,33) (ಯಾಜಕ 27:32) (ಧರ್ಮೋ 2:7, 8:18, 14:22) (ಮಲಾಕಿ 3:10) (ಲೂಕ 8:3) (ಆದಿ 13:15, 26;12-17)

## ಲೇಖಕರ ಮಾತುಗಳು:

"ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಕರ್ತನ ಮಹಿಮೆಯ ಜ್ಞಾನವು ತುಂಬಿಕೊಂಡಿದೆ 'ಹಬಕ್ಕೂಕ 2:14'

ಪ್ರೀತಿಯ ದೇವರ ಮಗುವೇ ಕರ್ತನೊಟ್ಟಿಗೆ ಮಾತಾಡಿದಿಯಾ? ಹಾಗಾದರೆ ನಿನ್ನ ಈ "ಪ್ರಾರ್ಥನೆಯ ನಿಧಿ ನಿನ್ನದೇ" ಎನ್ನುವ ಪುಸ್ತಕವು ನಿನ್ನದೇ ಆಗಬೇಕಾದರೆ ನೀನು ಯಾವಾಗಲೂ ಕರ್ತನೊಟ್ಟಿಗೆ ವಾಕ್ಯವನ್ನು ಹಿಡಿದು ನಿನಗಾಗಿ ಮತ್ತು ನಿನ್ನ ಜೊತೆಯಲ್ಲಿರುವ ಎಲ್ಲಾ ಬಂಧುಗಳಿಗಾಗಿ ಪ್ರಾರ್ಥಿಸು ಮತ್ತು ಈ 'ನಿಧಿ'ಯನ್ನು ಅನೇಕರಿಗೆ ಪರಿಚಯಪಡಿಸು. ಆ 'ನಿಧಿ' ಏನು ಎಂಬುದು ಅರ್ಥವಾಯಿತಾ? ಅರ್ಥವಾಗಿದ್ದರೆ ನೀನು ಪಡೆದಿರುವ ನಿನ್ನ 'ನಿಧಿ'ಯನ್ನು ನಿನ್ನದಾಗಿಸಿಕೋ. ಇಲ್ಲವಾದರೆ ಯಾವಾಗ ಸೈತಾನನು ನಿನ್ನನ್ನು ವಂಚಿಸಿ ಈ 'ನಿಧಿ'ಯನ್ನು ನಿನ್ನಿಂದ ಕಿತ್ತುಕೊಳ್ಳುತ್ತಾನೋ ಗೊತ್ತಿಲ್ಲ. ಈ 'ನಿಧಿಯು ನಿನ್ನದೇ' ಪುಸ್ತಕವು ನಿನ್ನ ಕೈಯಲ್ಲಿ ಯಾವಾಗಲೂ ಇಟ್ಟುಕೊಂಡು ಸಮಯ ಸಿಕ್ಕಿದಾಗಲೆಲ್ಲಾ ಓದುತ್ತಾ ಕರ್ತನಲ್ಲಿ ಐಕ್ಯತೆಯನ್ನು ಪಡೆದುಕೋ. ನಿನ್ನನ್ನು ಎಲ್ಲಾ ಪಾಪದಿಂದ ಬಿಡಿಸಿ, ಆತನ ಪಾದದಲ್ಲಿ ಕುಳಿತು ಈ ರೀತಿಯಾಗಿ ಪ್ರಾರ್ಥಿಸುವಂತೆ ಸಹಾಯ ಮಾಡಿದ ಕರ್ತನು ನಿನ್ನ ಮುಖಾಂತರ ಅನೇಕರಿಗೂ ಸಹಾಯ ಮಾಡಿ ಅವರೂ ಸಹಾ ಈ 'ನಿಧಿಯನ್ನು ಪಡೆದುಕೊಳ್ಳುವಂತೆ ನೀನು ನೆರವಾಗಿ ನಿಲ್ಲು. ಆಗಲೇ ನೀನು ಕರ್ತನ ರಾಜ್ಯವನ್ನು ಕಟ್ಟಲು ಸಾಧ್ಯ. ನಿನಗೆ ತಿಳಿದಿರುವ ಸತ್ಯ ಮತ್ತೊಬ್ಬರಿಗೂ ತಿಳಿಯಪಡಿಸುವುದೇ ನಿಜವಾದ ದೇವರ ಕೆಲಸ ಹಾಗೂ ನಿನ್ನ ಕರ್ತವ್ಯ.

ದೇವರು ನಿನ್ನನ್ನು ಚಿಯೋನಿನಿಂದ ಆಶೀರ್ವದಿಸಲಿ.

ಕರ್ತನಲ್ಲಿ ಪ್ರಿಯ ಸೇವಕಿಯಾದ

ಪಾಸ್ಟರ್.ಪಿ.ತೇಜಸ್ಸ್